

ಲೋಕ ನಾಯಕ
ಭೀಮಣ್ಣ ಖಂಡ್ರೆ





ಲೇಖಕರು :
ಡಾ. ರಘುಶಂಖ ಭಾತಂಬ್ರಾ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ.
Email : kasapabidar@gmail.com - www.kasapabidar.in





ಡಾ. ರಘುಶಂಖ ಭಾತಂಬ್ರಾ

ರಘುಶಂಖ ಎಂಬ ಕಾವ್ಯನಾಮದಿಂದ ಖ್ಯಾತರಾದ ಡಾ. ರಘುನಾಥ ಖರಾಬೆಯವರು ಈ ಭಾಗದ ಅಪರೂಪದ ಚಿಂತಕರು. ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಭಾತಂಬ್ರಾ ಗ್ರಾಮದ ಪ್ರತಿಷ್ಠಿತ ಖರಾಬೆ ಮನೆತನದ ಶ್ರೀಮತಿ ಗುರಮ್ಮ ಶ್ರೀ ಶಂಕರೆಪ್ಪಾ ಅವರ ಮಗನಾಗಿ 01–01–1970ರಲ್ಲಿ ಜನಿಸಿರುವ ಇವರು ಎಂ.ಎ; ಎಂ.ಫಿಲ್; ಪಿಎಚ್.ಡಿ. ಪದವಿಧರರು. ವಿದ್ಯಾರ್ಥಿ ದೆಸೆಯಲ್ಲಿಯೇ 'ಎರಡು ಮುಖ' ಎನ್ನುವ ಕವನ ಸಂಕಲನ ಪ್ರಕಟಿಸಿ, ಸಾಹಿತ್ಯಲೋಕ ಪ್ರವೇಶ ಮಾಡಿರುವ ಇವರು ನಿರಂತರ ಸಂಶೋಧನೆ, ವಿಶ್ಲೇಷಣೆ, ವಿಮರ್ಶೆಗೆ ತೊಡಗಿಸಿಕೊಂಡವರು. ವಿವಿಧ ಪದವಿ ಕಾಲೇಜುಗಳಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ಸದ್ಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಗರ್ಮಾತಾಂಡಾದಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಸಂಸ್ಕೃತಿ ಚಿಂತನೆ, ವಚನ ಸಾಹಿತ್ಯ ಇವರ ಆಸಕ್ತಿಯ ವಲಯವಾಗಿದ್ದರಿಂದ 'ವಚನಕಾರರ ವೃತ್ತಿ ಮೌಲ್ಯಗಳು' ಕುರಿತು ಪಿಎಚ್.ಡಿ. ಸಂಶೋಧನೆ ಮಾಡಿರುವರು. ಶರಣ ಚಳವಳಿಯ ಮೂಲ ಜೀವಧಾತುವಾದ 'ಕಾಯಕ' ತತ್ವಕ್ಕೆ ಹೊಸ ವಿಭಿನ್ನ ಆಲೋಚನಾಸ್ಪರ್ಶ ನೀಡಿ ವಚನ ಅಧ್ಯಯನ ಜಿಜ್ಞಾಸುಗಳಿಗೆ ಬಹುದೊಡ್ಡ ಆಕರ ಒದಗಿಸಿರುವರು. ವಚನ ಸಾಹಿತ್ಯ ಕುರಿತು ಅಧಿಕೃತವಾಗಿ ಬರೆವ ಬೆರಳಣಿಕೆಯ ವಿದ್ವಾಂಸರಲ್ಲಿ ಒಬ್ಬರಾಗಿ ಹೊರಹೊಮ್ಮಿದ್ದಾರೆ. ಯಾವುದೇ ಸಂಗತಿಯಾಗಿದ್ದರೂ ಕರಾರುವಕ್ಕಾಗಿ ಸಾಧಾರವಾಗಿ, ಪ್ರತಿಪಾದಿಸುವ ಮೂಲಕ ಆಯಾ ವಿಷಯಗಳಿಗೆ ಪರಿಪೂರ್ಣತೆ, ಸ್ಪಷ್ಟತೆ ತಂದುಕೊಡುವ ಪ್ರಾಜ್ಞತೆ ಇವರ ಒಟ್ಟು ಸಂಶೋಧನ ಬರವಣಿಗೆಯ ಮೂಲಸೆಲೆಯಾಗಿದೆ. ಅಧ್ಯಯನ, ಅಧ್ಯಾಪನ, ಸಂಶೋಧನೆ ಇವರ ಸಾಂಸ್ಕೃತಿಕ ಜೀವನದ ಅಂತಃಶಕ್ತಿಗಳು. ಸದಾ ಹೊಸತನ್ನು ಆಲೋಚಿಸುವ, ಪರಿಶೋಧಿಸುವ ಗುಣ ಹೋದಿದ್ದು ಎರಡು ಮುಖ (ಕಾವ್ಯ), ಹೃದಯಾಳದ ನೋವುಗಳು (ಕಾವ್ಯ), ವಚನ ಸಾಹಿತ್ಯದ ಹೊಸ ಪರಿಕಲ್ಪನೆ, ಕರ್ನಾಟಕೇತರ ಶರಣ ಶರಣೆಯರು, 'ಶ್ರೀಗಂಧ' ಪ್ರಭುರಾವ ಕಂಬಳಿವಾಲೆ, ವಚನಕಾರರ ವೃತ್ತಿ ಮೌಲ್ಯಗಳು, ವಚನ ಸಂವಾದ, ಭೂಮಿಕೆ, ಮಹಾದಾಸೋಹ ಪಥಿಕ, ಅಟ್ಟಳೆನಾಡಿನ ಅಣಿಮುತ್ತುಗಳು, ವರ್ತಮಾನದೊಡಲು ಇತ್ಯಾದಿ ಕೃತಿಗಳು ಇವರಿಗೆ ಹೆಸರು ತಂದಿವೆ. ಷಣ್ಮುಖ ಶಿವಯೋಗಿಯ ವಚನಗಳು, ಕಾಯಕಜೀವಿ ಶಿವಶರಣ ನುಲಿಯ ಚಂದಯ್ಯ, ಕಲ್ಯಾಣ ಕಲಾ ಪ್ರತಿಭೆ, ಚಿತ್ರ ಪಲ್ಲವಿ, ಚೇತನ ಶಿಲ್ಪಿ (ದೇಶಾಂಶ ಹುಡಗಿ ಅಭಿನಂದನ ಗ್ರಂಥ), ಶರಣ ಸೌರಭ, ಶರಣದೀಪ್ತಿ ಮುಂತಾದ ಸಂಪಾದಿತ ಕೃತಿಗಳನ್ನು ಹೊರತಂದು ಪ್ರಕಟಿಸಿದ್ದಾರೆ. ಹೀಗೆ ೧೫ ಸ್ವತಂತ್ರ, ೨೫ ಸಂಪಾದಿತ ಮೌಲಿಕ ಕೃತಿಗಳನ್ನು ನೀಡಿ ಕನ್ನಡ ಸಾಹಿತ್ಯದ ಸಾರಸ್ವತಲೋಕ ಶ್ರೀಮಂತಗೊಳಿಸಿರುವರು. ಸರಳತೆ ಅವರ ಹುಟ್ಟುಗುಣವಾದರೆ, ಜೀವಕಾರುಣ್ಯ ಅವರ ಸಾಹಿತ್ಯದ ಗುಣವಾಗಿದೆ. ಚೇತನ ತರಂಗ ಮಾಸಿಕ ಪತ್ರಿಕೆಯ ಪ್ರಧಾನ ಸಂಪಾದಕರಾಗಿದ್ದಾರೆ. ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಕಲಬುರ್ಗಿ ಆಕಾಶವಾಣಿಯಲ್ಲಿ ಭಾಷಣ, ರೂಪಕ, ಚಿಂತನ, ಕವನಗಳು ಪ್ರಸಾರಗೊಂಡಿವೆ. ಅನೇಕ ವಿಚಾರ ಸಂಕಿರಣ, ಸಮ್ಮೇಳನದಲ್ಲಿ ಭಾಗವಹಿಸಿ ಮೌಲಿಕ ಉಪನ್ಯಾಸಗಳನ್ನು ಮಂಡಿಸಿದ್ದಾರೆ. ೧೦೦ಕ್ಕೂ ಹೆಚ್ಚು ಲೇಖನಗಳು ನಾಡಿನ ಖ್ಯಾತ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ದಕ್ಷಿಣ ಭಾರತ ಪ್ರಾದೇಶಿಕ ಭಾಷಾ ಸಂಸ್ಥಾನ, ವಿವಿಧ ಪಠ್ಯಪುಸ್ತಕ ಸಮಿತಿಯ ಸದಸ್ಯರಾಗಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ಪ್ರಾಯೋಜಿತ ಫೆಲೋಶಿಪ್ ಅಡಿಯಲ್ಲಿ "ಬೀದರ ಪ್ರದೇಶದ ಸ್ವಾತಂತ್ರ್ಯ ಸಂಗ್ರಾಮ" ಕುರಿತ ಸಂಶೋಧನ ಪ್ರಬಂಧ ಸಲ್ಲಿಸಿದ್ದಾರೆ.

ಶ್ರೀಯುತರ ಸೇವೆ ಸಾಧನೆಗಳನ್ನು ಗೌರವಿಸಿ ವಿಶ್ವಭಾರತಿ ಸಮಾಜ ಸೇವಾ ಪ್ರಶಸ್ತಿ, ತಾಲೂಕಾ–ಜಿಲ್ಲಾಢಳಿತದ ರಾಜ್ಯೋತ್ಸವ ಪ್ರಶಸ್ತಿ, ಸುವರ್ಣ ಕನ್ನಡಿಗ ಪ್ರಶಸ್ತಿ, ಉತ್ತಮ ಓದುಗ ಪ್ರಶಸ್ತಿ ಅಲ್ಲದೇ ವಿವಿಧ ಸಂಘ ಸಂಸ್ಥೆಗಳ ಇವರಿಗೆ ಗೌರವ ಪುರಸ್ಕಾರಗಳಿಗೂ ಭಾಜನರಾಗಿರುವರು. ಸಂಶೋಧನ, ಸಂಪಾದನೆ, ವಿಮರ್ಶೆ, ಸೃಜನಶೀಲ ನೆಲೆಯ ಆಯಾಮಗಳನ್ನು ಮುಖಾಮುಖಿಯಾಗಿಸುವ ಇವರದ್ದು ಶುದ್ಧ ವೈಚಾರಿಕ ಮನೋಭಾವವಾಗಿದ್ದು ಲೋಕಕಲ್ಯಾಣವೇ ಇವರ ಬರವಣಿಗೆಗಳ ಕೇಂದ್ರ ಆಶಯ. ಪ್ರಸ್ತುತ ಲೋಕನಾಯಕ ಶ್ರೀ ಡಾ. ಭೀಮಣ್ಣಾ ಖಂಡ್ರೆ ಕೃತಿ ಡಾ. ಭೀಮಣ್ಣಾ ಖಂಡ್ರೆ ಅವರ ಜೀವನ ಸಾಧನೆ ಕೇಂದ್ರಿತವಾಗಿದ್ದು ಸಾಮಾನ್ಯ ಜನರಿಗೆ ಚೇತೋಹಾರಿಯಾಗಿ ಸತ್ಪ್ರೇರಣೆ ಒದಗಿಸುತ್ತದೆ. ಇಂಥ ಸೃಜನಶೀಲ ಬರಹಗಾರರು, ಪ್ರಬುದ್ಧ ಸಂಶೋಧಕರಾದ ಡಾ. ರಘುಶಂಖ ಭಾತಂಬ್ರಾ ಅವರಿಂದ ಇನ್ನಷ್ಟು ಉತ್ತಮ ಕೃತಿಗಳು ಹೊರಬರಲೆಂದು ಶುಭಹಾರೈಸುವೆ.

ವಿದ್ಯಾವತಿ ಬಲ್ಲೂರ
ಪ್ರಾಚಾರ್ಯರು
ಎಮ್.ಎಸ್.ಮುದ್ದಣ್ಣ ಡಿ.ಇಡಿ. ಕಾಲೇಜು, ಬೀದರ.

ಬೀದರ ಜಿಲ್ಲಾ ೧೭ನೇ ಕನ್ನಡ ಸಾಹಿತ್ಯ ಸಮ್ಮೇಳನ ನಿಮಿತ್ತ
ಕನ್ನಡ ಕಟ್ಟಿದವರು ಮಾಲಿಕೆ

ಲೋಕನಾಯಕ

ಡಾ॥ ಭೀಮಣ್ಣ ಖಂಡ್ರೆ

ಲೇಖಕರು

ಡಾ. ರಘುಶಂಖ ಭಾತಂಬ್ರಾ

ಪ್ರಕಾಶಕರು

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ

೨೦೧೯

ಲೋಕನಾಯಕ : ಡಾ॥ ಭೀಮಣ್ಣ ಖಂಡ್ರೆ

ಲೇಖಕರುಃ **ಡಾ. ರಘುಶಂಖ ಭಾತಂಬ್ರಾ,** "ಬಸವಾಶ್ರಯ" ಪ್ಲಾಟ್ ಸಂಖ್ಯೆ-
೧೪-೧೫ ಮುಕ್ತಿಧಾಮ ರಸ್ತೆ, ಮಾಧವನಗರ, ಬೀದರ-೨
ಸಂಚಾರಿ : ೯೯೧೬೪೨೪೪೧೧; ೭೬೭೬೧೦೯೬೦೯

ಪ್ರಕಾಶಕರು ಃ **ಸುರೇಶ ಚನಶೆಟ್ಟಿ,**
ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ. ಮೊ: ೯೮೬೭೯೨೫೨೫
E-mail:kasapabidar@gmail.com, web: www.kasapabidar.in

ಪ್ರಥಮ ಮುದ್ರಣ ಃ ೨೦೧೯
ಹಕ್ಕುಗಳು ಃ ಪ್ರಕಾಶಕರು
ಪುಟಗಳು ಃ ೮೮
ಬೆಲೆ ಃ ೧೦೦/-
ಅಕ್ಷರ ಜೋಡಣೆ ಃ ವಚನಚೇತನ ಕಂಪ್ಯೂಟರ್ಸ್, ಬೀದರ.
ಪುಸ್ತಕ ವಿನ್ಯಾಸ ಃ ಆರ್.ವ್ಹಿ. ಕುಂಬಾರ, ಬೀದರ.
ಮುಖಪುಟ ವಿನ್ಯಾಸ ಃ ಅಕ್ಷಯ ಗ್ರಾಫಿಕ್ಸ್, ಬೀದರ
ಮುದ್ರಕರು ಃ ವಿಶ್ವಾಸ ಪ್ರೆಸ್ ಬೆಂಗಳೂರು

ವಿ.ಸೂ. : ಈ ಕೃತಿಯಲ್ಲಿ ಬರುವ ಅಭಿಪ್ರಾಯಗಳು ಹಾಗೂ ವಿವರಗಳು ಲೇಖಕರಿಗೆ ಸಂಬಂಧಿಸಿದವುಗಳಾಗಿರುತ್ತವೆ. -ಪ್ರಕಾಶಕರು

ಪುಸ್ತಕ ಪ್ರಕಟಣೆ ಸಲಹಾ ಸಮಿತಿ

ಶ್ರೀ ಸುರೇಶ ಚನಶೆಟ್ಟಿ, ಅಧ್ಯಕ್ಷರು, ಜಿಲ್ಲಾ ಕಸಾಪ, ಬೀದರ
ಪೂಜ್ಯಶ್ರೀ ಅಕ್ಕ ಅನ್ನಪೂರ್ಣ, ಬೀದರ ಜಿಲ್ಲಾ ೧೭ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು
ಶ್ರೀ ಪಂಚಾಕ್ಷರಿ ಪುಣ್ಯಶೆಟ್ಟಿ, ಗೌರವಾಧ್ಯಕ್ಷರು, ಜಿಲ್ಲಾ ಕಸಾಪ, ಬೀದರ
ಶ್ರೀ ಎಂ.ಜಿ. ದೇಶಪಾಂಡೆ, ಹಿರಿಯ ಸಾಹಿತಿಗಳು, ಬೀದರ
ಶ್ರೀ ಎಸ್.ಎಂ. ಜನವಾಡಕರ್, ಹಿರಿಯ ಸಾಹಿತಿಗಳು, ಬೀದರ
ಶ್ರೀಮತಿ ಶಶಿಕಲಾ ವಸ್ತ್ರದ, ಹಿರಿಯ ಸಾಹಿತಿಗಳು, ಬೀದರ
ಡಾ. ಶಿವಗಂಗಾ ರುಮ್ಮಾ, ಮಹಿಳಾ ಸಾಹಿತಿಗಳು, ಬೀದರ
ಡಾ. ಬಸವರಾಜ ಬಲ್ಲೂರ, ಗೌ. ಕಾರ್ಯದರ್ಶಿ, ಜಿಲ್ಲಾ ಕಸಾಪ, ಬೀದರ
ಶ್ರೀ ಶಿವಕುಮಾರ ಕಟ್ಟೆ, ಸಾಹಿತಿಗಳು ಹಾಗೂ ಗಡಿ ಪ್ರತಿನಿಧಿ, ಜಿಲ್ಲಾ ಕಸಾಪ, ಬೀದರ
ಶ್ರೀ ಎಂ.ಎಸ್. ಮನೋಹರ, ಸಾಹಿತಿಗಳು ಹಾಗೂ ಅಧ್ಯಕ್ಷರು ತಾಲ್ಲೂಕು ಕಸಾಪ, ಬೀದರ
ಶ್ರೀ ಶಿವಶಂಕರ ಟೋಕರೆ, ಸಂಚಾಲಕರು ಜಿಲ್ಲಾ ಕಸಾಪ, ಬೀದರ.
ಪ್ರೊ. ಜಗನ್ನಾಥ ಕಮಲಾಪುರೆ, ಗೌರವ ಸಲಹೆಗಾರು, ಜಿಲ್ಲಾ ಕಸಾಪ, ಬೀದರ.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಬೀದರ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಸುರೇಶ ಚನಶೆಟ್ಟಿ

ಗೌರವಾಧ್ಯಕ್ಷರು
ಪಂಚಾಕ್ಷರಿ ಪುಣ್ಯಶೆಟ್ಟಿ

ಗೌರವ ಕಾರ್ಯದರ್ಶಿ
ಡಾ.ಬಸವರಾಜ ಬಲ್ಲೂರ
ಡಾ. ರಾಜಕುಮಾರ ಹೆಬ್ಬಾಳೆ

ಗೌರವ ಕೋಶಾಧ್ಯಕ್ಷರು
ಟಿ.ಎಂ.ಮಚ್ಚೆ

ಉಪಾಧ್ಯಕ್ಷರು
ಜಯದೇವಿ ಯದಲಾಪೂರೆ
ವಿಜಯಕುಮಾರ ಗೌರೆ,
ವಿರುಪಾಕ್ಷ ಗಾದಗಿ

ಮಹಿಳಾ ಪ್ರತಿನಿಧಿ
ಕಸ್ತೂರಿ ಪಟಪಳ್ಳಿ
ಮಹಿಳಾ ಸಾಹಿತಿ
ಮೇನಕಾ ಪಾಟೀಲ
ಮಹಿಳಾ ಘಟಕ ಅಧ್ಯಕ್ಷರು
ಜಯಶ್ರೀ ಸುಕಾಲೆ
ಮಕ್ಕಳ ಘಟಕ ಅಧ್ಯಕ್ಷರು
ರಜಿಯಾ ಬಳಬಟ್ಟಿ

ಪರಿಶಿಷ್ಟ ಜಾತಿ ಪ್ರತಿನಿಧಿ
ಡಾ.ಮಲ್ಲಿಕಾರ್ಜುನ ನಿಂಗದಳ್ಳಿ

ಪರಿಶಿಷ್ಟ ಪಂಗಡ ಪ್ರತಿನಿಧಿ
ಡಾ. ರಾಜಕುಮಾರ ಅಲ್ಲೂರೆ

ಸಂಘ ಸಂಸ್ಥೆ ಪ್ರತಿನಿಧಿ
ಸುಬ್ರಹ್ಮಣ್ಯ ಪ್ರಭು

ಜಿಲ್ಲಾ ವಾರ್ತಾಧಿಕಾರಿ
ಗವಿಸಿದ್ದಪ್ಪ ಹೊಸಮನಿ

ಕನ್ನಡ ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು
ಸಿದ್ರಾಮ ಸಿಂಥೆ

ನಿಕಟಪೂರ್ವ ಅಧ್ಯಕ್ಷರು
ಪ್ರೊ. ಸಿದ್ರಾಮಪ್ಪ ಮಾಸಿಮಾಡೆ

ಜಿಲ್ಲಾ ಶಿಕ್ಷಣಾಧಿಕಾರಿ
ಶಿವಕುಮಾರ ಸ್ವಾಮಿ

ಗಡಿ ಪ್ರತಿನಿಧಿ
ಪ್ರೊ. ಶಿವಕುಮಾರ ಕಟ್ಟೆ
ವಸಂತ ಹುನಸನಾಳೆ,

ಅಧ್ಯಕ್ಷರು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು
ಎಂ. ಎಸ್. ಮನೋಹರ, ಬೀದರ
ಜಗನ್ನಾಥ ಮೂಲಗೆ, ಔರಾದ
ಸಚ್ಚಿದಾನಂದ ಮಠಪತಿ, ಹುಮನಾಬಾದ
ಡಾ. ರುದ್ರಮಣಿ ಮಠಪತಿ, ಬಸವಕಲ್ಯಾಣ
ಶಶಿಧರ ಕೊಸಂಬೆ ಭಾಲ್ಕಿ
ಪ್ರಶಾಂತ ಮಠಪತಿ ಕಮಾಲನಗರ
ಡಾ. ಶಿವಲೀಲಾ ಮಠಪತಿ, ಹುಲಸೂರ
ಅನಿಲಕುಮಾರ ಸಿಂಥೆ, ಚಿಟಗುಪ್ಪ

ಸಂಘಟನಾ ಕಾರ್ಯದರ್ಶಿ
ಉಮಾಕಾಂತ ವಾರದ,
ಶಾಂತಲಿಂಗ ಮಠಪತಿ
ವೀರಶೆಟ್ಟಿ ಪಟ್ನೆ

ಸಂಚಾಲಕರು
ಶಿವಶಂಕರ ಟೋಕರೆ

ಗೌರವ ಸಲಹೆಗಾರರು
ಕಾಶೆಪ್ಪಾ ಬಾಲಕಿಲೆ
ಶರಣಪ್ಪಾ ಮಿಠಾರೆ
ವೈಜಿನಾಥ ಕಮಠಾಣೆ
ಬಸವರಾಜ ಧನ್ನೂರ
ಪ್ರೊ. ಎಸ್. ವಿ. ಕಲ್ಮಠ
ಝೂಕೀರ ಹುಸೇನ್
ಡಾ.ಜಗನ್ನಾಥ ಹೆಬ್ಬಾಳೆ
ಪ್ರೊ. ಶಂಭುಲಿಂಗ ಕಾಮಣ್ಣಾ
ಎಸ.ಎಮ್.ಜನವಾಡಕರ್
ಡಾ.ಮನ್ಮಥ ಡೋಳೆ
ಶಿವಯ್ಯಾ ಸ್ವಾಮಿ

ವಿಶೇಷ ಆಹ್ವಾನಿತರು
ರಾಜೆಂದ್ರಕುಮಾರ ಗಂದಗೆ
ಡಾ.ಸಿ ಆನಂದರಾವ
ಬಾಲಾಜಿ ಬಿರಾದಾರ
ಪಾಂಡುರಂಗ ಬೆಲ್ದಾರ್
ರವೀಂದ್ರ ರೆಡ್ಡಿ
ಪ್ರೊ.ರಾಜಕುಮಾರ ಅಲ್ಲೂರೆ
ಡಾ. ಬಂಡಯ್ಯಾ ಸ್ವಾಮಿ

ಕಾರ್ಯಕಾರಿ ಸದಸ್ಯರು
ಜಗನ್ನಾಥಕಮಲಾಪೂರೆ
ಯೋಗೇಶ ಮಠ
ಸಚೀನ ವಿಶ್ವಕರ್ಮ
ದೇವೆಂದ್ರ ಕರಂಜೆ
ಅನೀಲಕುಮಾರ ದೇಶಮುಖ
ಸಿದ್ದಾರೂಢ ಕಂದಗೂಳ
ಶಿವಾನಂದ ಪಾಟೀಲ
ಗಿರಿರಾಜ ವಾಲೆ
ಆನಂದ ಪಾಟೀಲ

ಮುನ್ನುಡಿ

ಸಾಹಿತ್ಯವು ಯಾವಾಗಲೂ ಒಂದು ವಿಶಿಷ್ಟ ಅನುಭವ ಪರಂಪರೆಯನ್ನು ನಮ್ಮ ಮುಂದೆ ತಂದು ನಿಲ್ಲಿಸುತ್ತದೆ. ಒಂದು ಕೃತಿಯನ್ನು ಓದುತ್ತಿದ್ದಂತೆ ಅದರ ಅನುಭವಗಳು ನಮ್ಮೊಳಗೆ ಸೇರಿಕೊಳ್ಳುತ್ತ, ಅಲ್ಲಿನ ಅನುಭವ ಸಾರ್ವತ್ರಿಕರಣಗೊಳ್ಳುತ್ತ ಹೋಗುತ್ತದೆ. ಸಾಹಿತ್ಯಕೃತಿ ನಮ್ಮನ್ನು ತಟ್ಟಬೇಕು ಎಂದರೆ ಅಲ್ಲಿನ ಅನುಭವಗಳು ಗಾಢವಾಗಿರಬೇಕು, ಅಲ್ಲಿನ ಸೃಜನಶೀಲತೆಯ ಸೆಲೆಗಳು ನಮ್ಮನ್ನು ಸೆಳೆಯುವಂತೆ ಇರಬೇಕು. ಆ ಕೃತಿ ತನ್ನ ಸುತ್ತಲಿನ ಜೀವನವನ್ನು, ಪರಿಕರಗಳನ್ನು ಒಳಗೊಂಡಿದ್ದಾಗ ಇದು ಸಾಧ್ಯವಾಗುತ್ತದೆ.

ತಲೆ ತಲಾಂತರಗಳಿಂದ ಕೆಲವರು ನಾಡು, ನುಡಿ, ಕಲೆ, ಸಾಹಿತ್ಯ, ಸಂಸ್ಕೃತಿ, ಜಲ, ಜನ ಸಮುದಾಯವನ್ನು ತಮ್ಮದೇ ರೀತಿಯಲ್ಲಿ ಶ್ರೀಮಂತಗೊಳಿಸಲು ಶ್ರಮಿಸಿರುತ್ತಾರೆ. ಅವರ ಶ್ರಮ ಮುಂದಿನ ತಲೆಮಾರಿಗೆ ತಿಳಿಯದೇ ಹೋಗಬಾರದು. ಜನ ಸಮುದಾಯದ ಶ್ರೇಯಸ್ಸಿಗೆ ಅವರುಕೊಟ್ಟ ಕೊಡುಗೆಯನ್ನು ಜನ ನೆನಪಿಸಿಕೊಳ್ಳುವಂತೆ ಆಗಬೇಕು, ಹಾಗೆ ನೆನಪಿಸಿಕೊಂಡರೆ ಅದು ಒಂದು ಸಮುದಾಯದಲ್ಲಿ ಇರುವ, ಇರಬೇಕಾದ ಕೃತಜ್ಞತೆಯ ಕುರುಹು.

ಬೀದರ್ ಜಿಲ್ಲೆಯಲ್ಲಿ ಅಂಥ ಹಿರಿಯರ ಕೊಡುಗೆಯನ್ನು ದಾಖಲು ಮಾಡುವ ಕಾರ್ಯ ನಡೆದು ಅದು ಇದೀಗ ಕಾರ್ಯರೂಪಕ್ಕೆ ಬಂದಿರುವುದು ಶ್ಲಾಘನೀಯ ಕೆಲಸ. ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಘಟಕದ ಅಧ್ಯಕ್ಷರಾದ ಶ್ರೀ ಸುರೇಶ ಚನಶೆಟ್ಟಿಯವರಿಗೆ ಇಂಥ ವಿಚಾರವೊಂದು ಹೊಳೆದು ಅದನ್ನು ಅವರು ಸ್ವಯಂಸ್ಫೂರ್ತಿಯಿಂದ ಕೈಗೆತ್ತಿಕೊಂಡಿದ್ದಾರೆ.

ಜಿಲ್ಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದ ಮಹನೀಯರನ್ನು ಗುರುತಿಸಿ ಅವರ ಜೀವಿತಾವಧಿಯಲ್ಲಿಯೇ ಅವರು ಪ್ರತಿಪಾದಿಸಿದ ಜೀವನಮೌಲ್ಯಗಳನ್ನು ಅಕ್ಷರರೂಪಕ್ಕೆ ಇಳಿಸಬೇಕು ಎಂದು ಅವರು ಒಂದು ಯೋಜನೆಯನ್ನೂ ರೂಪಿಸಿದರು.

ಅದಕ್ಕೆ ಪೂರಕವಾಗಿ "ಸಾಂಸ್ಕೃತಿಕ ಚಿಂತಕರು' ಎಂಬ ಸರಣಿಯಲ್ಲಿ ೧೭ ಜನ ಸಾಧಕರನ್ನು ಕುರಿತು ಅಷ್ಟೇ ಸಂಖ್ಯೆಯ ಲೇಖಕಿಯರು ಕೃತಿ ರಚಿಸಿದ್ದಾರೆ. ಅದರ ಜೊತೆಗೆ ಜಿಲ್ಲೆಯಲ್ಲಿ "ಕನ್ನಡ ಕಟ್ಟಿದವರು' ಕುರಿತ ಸರಣಿಯಲ್ಲಿ ೧೭ ಜನ ಸಾಧಕರ ಬಗೆಗೆ ಅಷ್ಟೇ ಸಂಖ್ಯೆಯ ಬರಹಗಾರರು ಕೃತಿಗಳನ್ನು ರಚಿಸಿದ್ದಾರೆ. ಇದೆಲ್ಲ ಆಗಿರುವುದು ಜಿಲ್ಲೆಯ ೧೭ನೇ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಂಗವಾಗಿ ಎಂಬುದು ಇಲ್ಲಿ ಉಲ್ಲೇಖನಾರ್ಹ.

ಇದು ಒಂದು ಅಪರೂಪದ ದಾಖಲೆಯ ಕಾರ್ಯ; ನಮ್ಮ ಸಮಾಜದ ಏಳಿಗೆಗೆ ದುಡಿದ ಮಹನೀಯರನ್ನು, ಮಹಿಳೆಯರನ್ನು ನೆನಪಿಸಿಕೊಳ್ಳುವ ಕಾರ್ಯ. ಆದರೆ, ಇದು ಕೇವಲ ಒಂದು ದಾಖಲೀಕರಣದ ಕೆಲಸ ಮಾತ್ರ ಅನಿಸದೇ ಆಸಕ್ತರು ಈ ಕೃತಿಗಳನ್ನು ಓದಿದರೆ ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಹಾಗೂ ಪದಾಧಿಕಾರಿಗಳ ಕಾರ್ಯ ಸಾರ್ಥಕ ಎನಿಸುತ್ತದೆ. ಇದಕ್ಕಾಗಿ ದುಡಿದ ಎಲ್ಲರಿಗೂ ನನ್ನ ಅಭಿನಂದನೆಗಳು.

ನಾಡೋಜ ಡಾ. ಮನು ಬಳಿಗಾರ್

ಅಧ್ಯಕ್ಷರು

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಅಕ್ಷರ ಪ್ರೀತಿಯ ನುಡಿ
(ಪ್ರಕಾಶಕರ ಮಾತು)

ಕನ್ನಡ, ಕನ್ನಡಿಗ, ಕರ್ನಾಟಕದ ಸಮಗ್ರ ಏಳಿಗೆ ಹಾಗೂ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಕಟ್ಟುವ ಮಹದುದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿಕೊಂಡಿದೆ. ಅದರ ಆಶಯಕ್ಕೆ ತಕ್ಕಂತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕ್ರಿಯಾಶೀಲವಾಗಿದೆ. ಐತಿಹಾಸಿಕ, ಸಾಹಿತ್ಯಿಕ, ಸಾಂಸ್ಕೃತಿಕ ಶ್ರೀಮಂತಿಕೆ ಹೊಂದಿರುವ ಬೀದರ ಜಿಲ್ಲೆಯ ಪ್ರಬಲ ಇಚ್ಛಾಶಕ್ತಿ, ಇಚ್ಛಾಸಕ್ತಿಯ ಕೊರತೆಯಿಂದಾಗಿ ಈ ಭಾಗ ಹಿಂದುಳಿದ ಹಣೆಪಟ್ಟಿಹೊತ್ತಿರುವುದರಿಂದ ಕನ್ನಡ ಸಾಹಿತ್ಯ ಪರಿಷತ್ತು ಸ್ಥಳೀಯ ಕಲೆ, ಸಾಹಿತ್ಯ, ಸಂಸ್ಕೃತಿಯ ಸಂವರ್ಧನೆಗಾಗಿ ಅನೇಕ ಕಾರ್ಯಚಟುವಟಿಕೆಗಳನ್ನು ಆಯೋಜಿಸಿದೆ. ಜಾಗತೀಕರಣದ ಕರಿನೆರಳಿನಿಂದ ಸ್ಥಳೀಯ ಭಾಷೆ ಸಂಸ್ಕೃತಿ ನಲುಗುತ್ತಿರುವಾಗ ಅವನ್ನು ಉಳಿಸುವ ಹೋರಾಟದ ಹಲವು ದಾರಿಗಳು ಕಟ್ಟಿಕೊಳ್ಳಬೇಕಾಗಿದೆ. ಅದರಲ್ಲಿ ಗಡಿಭಾಗದಂಥ ಬೀದರ ನೆಲದಲ್ಲಿ ಇನ್ನೂ ಹೆಚ್ಚು ರಚನಾತ್ಮಕ ಕಾರ್ಯಗಳ ಮೂಲಕ ಪಾಶ್ಚಾತ್ಯ ಸಂಸ್ಕೃತಿ, ಪರಭಾಷೆಗಳಿಗೆ ಸವಾಲಾಗಿ ನಿಲ್ಲುವ ಅಗತ್ಯತೆ ಇದೆ. ಈ ಹಿನ್ನೆಲೆಯಲ್ಲಿ ಪರಿಷತ್ತು ಕಾರ್ಯನಿರತವಾಗಿದೆ.

ಮಾಹಿತಿ ತಂತ್ರಜ್ಞಾನ ಬೆಳೆದಂತೆ ಆಧುನಿಕತೆ ಹೆಚ್ಚಾಗಿ ಜೀವನ ಪ್ರೀತಿ ಕಡಿಮೆಯಾಗುತ್ತಿದೆ. ವಿದ್ಯುನ್ಮಾನ (ಎಲೆಕ್ಟ್ರಾನಿಕ್) ಗ್ಯಾಜೆಟ್ ಲೋಕದಲ್ಲಿ ಮುಳುಗುತ್ತಿರುವ ನಮಗೆ ಅಕ್ಷರ ಲೋಕದ ಪುಸ್ತಕ ಸಂಸ್ಕೃತಿಯ ಉಳಿವು ಅಷ್ಟೇ ಮುಖ್ಯವಾಗಿದೆ. ಆದ್ದರಿಂದ ಸ್ಥಳೀಯ ಲೇಖಕರು, ಕಲಾವಿದರನ್ನು ಪ್ರತಿಭೆಗಳನ್ನು ಪ್ರೋತ್ಸಾಹಿಸುವುದು, ಸ್ಥಳೀಯ ಕಲೆ, ಸಾಹಿತ್ಯವನ್ನು ಸಾಂಸ್ಕೃತಿಕವಾಗಿ ದಾಖಲಿಸುವುದು, ಕನ್ನಡಿಗರಲ್ಲಿ ಓದುವ ಅಭಿರುಚಿಯನ್ನು ಮೂಡಿಸುವುದು ಒಟ್ಟಾರೆ ಕನ್ನಡ ನಾಡು, ನುಡಿ, ನೆಲ, ಜಲ, ಜನ ಭಾಷೆ, ಸಾಹಿತ್ಯ ಈ ಎಲ್ಲವುಗಳ ಹಿತಚಿಂತನೆಯೊಂದೆ ನಮ್ಮ ಮೊದಲ ಮತ್ತು ಕೊನೆಯ ಆಶಯವಾಗಿದೆ. ಈ ಹಿನ್ನಲೆಯಲ್ಲಿ ಈಗಾಗಲೇ ಕೆಲ ಕೃತಿಗಳನ್ನು ಪ್ರಕಟಿಸಲಾಗಿದೆ.

ಬಹುಮುಖ್ಯವಾಗಿ ಸ್ಥಳೀಯ ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಮೊದಲಾದ ಸಾಂಸ್ಕೃತಿಕ ಸಂಗತಿಗಳನ್ನು ರಚನಾತ್ಮಕವಾಗಿ ಕಟ್ಟುವಲ್ಲಿ ಅನೇಕ ಮಹನೀಯರ ಪರಿಶ್ರಮವಿದೆ. ಸಮಾಜೋಸಾಂಸ್ಕೃತಿಕ ಏಳಿಗೆಗಾಗಿ ತಮ್ಮನ್ನು ಗಂಧದ ಕೊರಡಂತೆ ಸವೆಸಿಕೊಂಡಿದ್ದಾರೆ. ಅಂಥವರ ಜೀವನ ಸಾಧನೆ ಕಾಲದಲ್ಲಿ ಮರೆಯಾಗದೆ ಒಂದು ಸಾಂಸ್ಕೃತಿಕ ದಾಖಲೆಯಾಗಬೇಕೆಂಬ ಸದಾಶಯದಿಂದ ಸಾಂಸ್ಕೃತಿಕ ಚಿಂತಕರು ಮಾಲಿಕೆ ಆರಂಭಿಸಲಾಗಿದ್ದು ೧೭ನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ಮೊದಲ ಹಂತದಲ್ಲಿ ೧೭ ಪುಸ್ತಕ ಹೊರತರುವ ಉದ್ದೇಶದಿಂದ ಈ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಸ್ಥಳೀಯ ಎಲ್ಲ ಸಾಂಸ್ಕೃತಿಕ ಚಿಂತಕರ ಜೀವನ ಸಾಧನೆ ಕುರಿತ ಪುಸ್ತಕಗಳನ್ನು ಹೊರತರಲಾಗುವುದು.

ನಮ್ಮ ಮಧ್ಯದ ಅಪರೂಪದ ಸಂಶೋಧಕರು, ಸಾಹಿತಿಗಳಾದ ಡಾ. **ರಘುಶಂಖ ಭಾತಂಬ್ರಾ** ಅವರು ಬರೆದ **ಲೋಕನಾಯಕ : ಡಾ॥ ಭೀಮಣ್ಣ ಖಂಡ್ರೆ ಜೀವನ ಸಾಧನೆ** ಎಂಬ ಪುಸ್ತಕ ಪ್ರಕಟಿಸಲು ಹೆಮ್ಮೆ, ಸಂತೋಷವೆನಿಸುತ್ತದೆ. **ಡಾ॥ ಖಂಡ್ರೆಯವರು ಬೀದರನಲ್ಲಿ ಸಜ್ಜನ ರಾಜಕಾರಣಿಗಳು. ಬಹುದೊಡ್ಡ ಶೈಕ್ಷಣಿಕ ಕ್ರಾಂತಿಗೈದವರು. ಸಮಸಮಾಜ ರೂಪಿಸಬೇಕೆಂಬ ದೇಶಿಚಿಂತನೆಯ ಸಾಂಸ್ಕೃತಿಕ ರಾಯಭಾರಿಗಳಾಗಿದ್ದಾರೆ.** ಜೊತೆಗೆ ಕಲೆ ಸಾಹಿತ್ಯಕ್ಕೆ ಉದಾರ ಪ್ರೋತ್ಸಾಹ ನೀಡುತ್ತ ಬಂದಿದ್ದಾರೆ. ಅವರ ಜೀವನ ಸಾಧನೆ ಕುರಿತು ಚಿಂತನೆ ಮಾಡುವುದು, ಅದನ್ನು ಪುಸ್ತಕ ರೂಪದಲ್ಲಿ ಹೊರತರುವುದು ನಾಗರಿಕ ಸಮಾಜದ ಆದ್ಯ ಕರ್ತವ್ಯವೆಂದು ಭಾವಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ ಕೈಂಕರ್ಯ ಪೂರೈಸುತ್ತಿದೆ.

ಪ್ರಸ್ತುತ ಪುಸ್ತಕಕ್ಕೆ ಮೌಲಿಕ ಮುನ್ನುಡಿ ಬರೆದು ಕೃತಿಯ ಮೌಲ್ಯ ಹೆಚ್ಚಿಸಿದ ನಾಡೋಜ ಡಾ. ಮನು ಬಳಿಗಾರ ಅವರನ್ನು ತುಂಬು ಹೃದಯದಿಂದ ನೆನೆಯುತ್ತೇವೆ. ಈ ಕೃತಿಯನ್ನು ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟಿಸಲು ಅನುಮತಿ ನೀಡಿರುವ ಲೇಖಕರಿಗೂ ಮತ್ತು **ಡಾ. ಭೀಮಣ್ಣ ಖಂಡ್ರೆ** ಅವರಿಗೂ ವಿಶೇಷವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಪದಾಧಿಕಾರಿಗಳಿಗೂ ವಂದನೆಗಳು.

ಸುರೇಶ ಚನಶೆಟ್ಟಿ
ಅಧ್ಯಕ್ಷರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ

ಕನ್ನಡ ಕಟ್ಟಿದವರು

ಮನುಷ್ಯರ ಬಹುಮುಖ್ಯ ಅಸ್ಮಿತೆ ಎಂದರೆ ಅವರ ಮಾತೃಭಾಷೆ. ಅದರ ಏಳಿಗೆಯೇ ಅವರ ಸಾಂಸ್ಕೃತಿಕ ಏಳಿಗೆಯೂ ಆಗಿರುತ್ತದೆಂಬುದು ಬೇರೆ ಹೇಳಬೇಕಿಲ್ಲ. ಈ ಹಿನ್ನೆಲೆಯಲ್ಲಿ ಕನ್ನಡ, ಕನ್ನಡಿಗ, ಕರ್ನಾಟಕದ ಏಳಿಗೆಯೇ ಬದುಕಿನ ಏಕಮಾತ್ರ ಉದ್ದೇಶವೆಂದರಿತು ಹೋರಾಟ ಮಾಡಿದ ಮಹನೀಯರ ಕಾರಣವಾಗಿ ಈ ನೆಲದಲ್ಲಿ ಇವತ್ತು ಕನ್ನಡ ಉಸಿರಾಡುವಂತಾಗಿದೆ. ಹಿಂದಣ ಹೆಜ್ಜೆಯನರಿತಲ್ಲದೆನಿಂದ ಹೆಜ್ಜೆಯನರಿಯಬಾರದೆಂಬ ಅಲ್ಲಮ ಪ್ರಭುದೇವರ ಮಾತು ಇತಿಹಾಸದ ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತದೆ. ಇತಿಹಾಸವೆಂದರೆ ಕೇವಲ ಮಹಾರಾಜರ ವೈಭವದ ಬದುಕು, ಕೋಟೆ ಕೊತ್ತಲಗಳೇ ಅಲ್ಲ, ರಾಜ ಪರಿವಾರದ ಸುತ್ತಲಿನ ಜನ ಸಾಮಾನ್ಯರ ಬದುಕಿನ ಏಳುಬೀಳುಗಳು, ಸಮಕಾಲೀನ, ಕಲೆ, ಸಾಹಿತ್ಯ, ಸಂಸ್ಕೃತಿಯ ಬೆಳವಣಿಗೆಗೆ ಪೂರಕವಾದ ಅಂಶಗಳೆಲ್ಲ ಸೇರಿ ಇತಿಹಾಸವಾಗುತ್ತದೆ. ಚಾರಿತ್ರಿಕವಾದ ಒಂದು ಕೋಟೆಗೆ ಎಷ್ಟು ಮಹತ್ವವೋ ಒಂದೂರಿನ ಹಳೆ ವಾಡೆ(ಘೂಡೆ)ಗಳಿಗೂ ಅಷ್ಟೇ ಮಹತ್ವವಿರುವಂತೆ ರಾಜ ರಾಣಿಗೆ ಇರುವಷ್ಟೆ ಮಹತ್ವ ಒಂದೂರಿನ ಜನಪರ ಕಾಳಜಿಯ ವ್ಯಕ್ತಿಗಳಿಗೂ ಇರುತ್ತದೆ. ಅಂಥ ಸಾಂಸ್ಕೃತಿಕ ವ್ಯಕ್ತಿಗಳ ಕಾರ್ಯ ಸಾಧನೆ ಕಾಲಗತಿಯಲ್ಲಿ ಮರೆಯಾಗಬಾರದೆಂಬ ಕಾರಣವಾಗಿ ಕನ್ನಡ ನಾಡು, ನುಡಿ ಭಾಷೆ, ಸಾಹಿತ್ಯದ ಉಳಿವಿಗೆ ಹೋರಾಡಿ ಗಣನೀಯ ಸೇವೆ ಸಲ್ಲಿಸಿ ಸಮಾಜಕ್ಕೆ ಬೆಳಕಾದ ಸಾಧಕರ ಜೀವನ ಸಾಧನೆ ದಾಖಲಿಸಬೇಕಾಗಿರುವುದು ಪ್ರಜ್ಞಾವಂತ ಸಮಾಜದ ಹೊಣೆಗಾರಿಕೆ ಎಂದರಿತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ ಕನ್ನಡ ಕಟ್ಟಿದವರು ಮಾಲಿಕೆ ಆರಂಭಿಸಿದೆ. ೧೨ನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ಮೊದಲ ಹಂತದಲ್ಲಿ ಕನ್ನಡ ಕಟ್ಟಿದವರು ೧೨, ಹಾಗೂ ೧೨ ಜನ ಸಾಂಸ್ಕೃತಿಕ ಚಿಂತಕರ ಪುಸ್ತಕಗನ್ನು ಹೊರತರುವ ಉದ್ದೇಶದಿಂದ ಈ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಸ್ಥಳೀಯ ಎಲ್ಲ ಕನ್ನಡ ಹೋರಾಟಗಾರರ ಜೀವನ ಸಾಧನೆ ಕುರಿತ ಪುಸ್ತಕಗಳನ್ನು ಹೊರತರಲಾಗುತ್ತಿದೆ. ಹಿತ್ತಲ ಗಿಡ ಮದ್ದಲ್ಲ, ತಮ್ಮ ನೆಲದಲ್ಲಿ ಸಾಧಕರಿಗೆ ಮನ್ನಣೆ ದೊರೆಯಲಾರದು ಎಂಬ ತಳು ಗ್ರಹಿಕೆಯ ಹುಸಿಗೊಳಿಸಲು ಈ ಯೋಜನೆ ರೂಪಿಸಲಾಗಿದೆ. ಈ ಪುಸ್ತಕಗಳಲ್ಲಿ ಏಕಕಾಲಕ್ಕೆ ಹಲವು ವ್ಯಕ್ತಿಗಳ ಸಂಬಂಧಗಳನ್ನು ಜೋಡಿಸುವ, ಸಮಕಾಲೀನ ಸಾಂಸ್ಕೃತಿಕ ಚಿಂತನೆಗಳನ್ನು ದಾಖಲಿಸುವ ಜೀವನ ಚರಿತ್ರೆ ಕಟ್ಟಿಕೊಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಈ ಸಾಧಕರ ಕುರಿತು ಅಧ್ಯಯನ ಮಾಡುವವರಿಗೆ ಈ ಕೃತಿ ಮೂಲ ಆಕರವಾಗುತ್ತದೆ ಎಂಬುದರಲ್ಲಿ ಅನುಮಾನವಿಲ್ಲ.

ಡಾ. ಬಸವರಾಜ ಬಲ್ಲೂರ

ಡಾ. ಬಸವರಾಜ ಬಲ್ಲೂರ

ಪುಸ್ತಕ ದಾಸೋಹಿಗಳು



ಶ್ರೀ ಶಿವಶಂಕರ ವೈಜನಾಥ ಕಾಮಶೆಟ್ಟಿ

ನಾಗರಿಕ ಸಮಾಜ ನಿರ್ಮಾಣ ಮಾಡುವ ಅಪರೂಪದ ಅಭಿಯಂತರುಗಳಲ್ಲಿ ಶ್ರೀ ಶಿವಶಂಕರ ವೈಜನಾಥ ಕಾಮಶೆಟ್ಟ ಒಬ್ಬರು. ಸತ್ಯಶುದ್ಧ ಕಾಯಕ ನಿಷ್ಠೆ, ಶಿಸ್ತು, ದಕ್ಷತೆ, ಪ್ರಾಮಾಣಿಕತೆಗೆ ಹೆಸರಾದ ಅವರು ಅಭಿವೃದ್ಧಿಯ ಕನಸುಗಾರರಾಗಿದ್ದು, ಬೀದರ ಸಮಗ್ರ ಅಭಿವೃದ್ಧಿಯ ಹಿಂದೆ ಬೆರಳೆಣಿಕೆ ಜನರ ಪರಿಶ್ರಮದಲ್ಲಿ ಇವರೊಬ್ಬರು. ಮೂಲತಃ ಬೀದರನವರಾದ ಇವರು ಬಿ.ಇ(ಸಿವಿಲ್) ಎಂ.ಇ (ಸ್ಟ್ರಕ್ಚರ್ಸ್) ಪದವೀಧರರು. ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಚಿನ್ನದ ಪದಕದೊಂದಿಗೆ ಮೊದಲ ರ್‍ಯಾಂಕ್ ಪಡೆದ ಪ್ರತಿಭಾನ್ವಿತರು. ರೋಟರಿ ಕ್ಲಬ್ ಅಧ್ಯಕ್ಷತೆ ಸೇರಿದಂತೆ ವಿವಿಧ ಸಂಘಟನೆಗಳ ಮೂಲಕ ಸಮಾಜೋಸಾಂಸ್ಕೃತಿಕ ಸೇವೆಗೆ ತೊಡಗಿಸಿಕೊಂಡವರು. ನೀರಾವರಿ ಇಲಾಖೆಯಲ್ಲಿ ಸಹಾಯಕ ಇಂಜನಿಯರಾಗಿ ವೃತ್ತಿ ಜೀವನ ಆರಂಭಿಸಿ ಲೋಕೋಪಯೋಗಿ ಇಲಾಖೆಯಲ್ಲಿ ಸು. 25 ವರ್ಷಗಳಿಗಿಂತ ಹೆಚ್ಚು ಕಾಲ ಉತ್ತಮ ಸೇವೆ ಸಲ್ಲಿಸಿ ಪ್ರಸ್ತುತ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಸೇವೆ ಸಲ್ಲಿಸುತ್ತಿದ್ದು ಅಭಿವೃದ್ಧಿ ಹರಿಕಾರರಾಗಿ ತಮ್ಮ ಹುದ್ದೆಗೆ ಗೌರವ ತಂದು ಕೊಟ್ಟವರು. ಇಂಜನಿಯರ್ ವೃತ್ತಿ ಒಂದು ವ್ಯಾಪಾರೀಕರಣವಾಗಿರುವ ಈ ಹೊತ್ತಿನಲ್ಲಿ ಅದನ್ನು ಒಂದು ಮೌಲ್ಯವಾಗಿ ನೋಡುತ್ತಲೇ ಮಾನವೀಕರಣಗೊಳಿಸಲು ಯತ್ನಿಸುತ್ತಿರುವರು. ಸಹೃದಯಿ ಶ್ರೀಮತಿ ಸುಜಾತಾ ಅವರನ್ನು ಕೈಹಿಡಿದು ಸಮರಸ ದಾಂಪತ್ಯದ ಮೂಲಕ ಕುಮಾರಿ ಸೌಮ್ಯ (ಎಂಬಿಬಿಎಸ್), ಕುಮಾರ ಆದಿತ್ಯ (ಪಿಯುಸಿ) ಮಕ್ಕಳನ್ನು ಪಡೆದು ಆದರ್ಶ ಕುಟುಂಬ ನಿರ್ವಹಿಸುತ್ತಿದ್ದಾರೆ. ಇವರ ಸೇವೆ ಸಾಧನೆಗಳನ್ನು ಪರಿಗಣಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಅನೇಕ ಸಂಘ ಸಂಸ್ಥೆಗಳು ಸೇರಿ "ಉತ್ತಮ ಇಂಜನಿಯರ್ ಪ್ರಶಸ್ತಿ" ಒಳಗೊಂಡಂತೆ ಹಲವಾರು ಪ್ರಶಸ್ತಿ ನೀಡಿ ಗೌರವಿಸಿವೆ.

ಲೇಖಕರ ನುಡಿ

ನಾನು, ಭಾಲ್ಕಿ ವಿಧಾನಸಭಾ ಮತಕ್ಷೇತ್ರದ ಭಾತಂಬ್ರಾ ಗ್ರಾಮದ ಸನಿವಾಸಿ ಆಗಿರುವುದರಿಂದ; ಪಿ.ಯು.ಸಿ. ದ್ವಿತಿಯ ವರ್ಷದಲ್ಲಿ ಅನುತೀರ್ಣ ನಾಗಿರುವುದರಿಂದ ಅನಿವಾರ್ಯವಾಗಿ ನಾನು ಒಂದು ವರ್ಷದ ವರೆಗೆ ಚಿಕ್ಕಪ್ಪ ಜಗನ್ನಾಥ ಖರಾಬೆಯವರು ನಡೆಸುತ್ತಿದ್ದ ಭಾಲ್ಕಿ ಗಂಜ್ ಅಡತಿ ಅಂಗಡಿಯಲ್ಲಿ ನೌಕರಿ ಮಾಡಬೇಕಾಯಿತು. ಈ ಅಡತ್ ಖಂಡ್ರೆಯವರ ಮನೆಯ ಪಕ್ಕದಲ್ಲಿಯೇ ಇತ್ತು. ಇದರಿಂದ ಭೀಮಣ್ಣ ಖಂಡ್ರೆ, ಆಗ ಶಾಸಕರಾಗಿದ್ದ ಡಾ॥ ವಿಜಯಕುಮಾರ ಖಂಡ್ರೆಯವರ ಬಗ್ಗೆ ಜನಸಾಮಾನ್ಯರು ವ್ಯಕ್ತಪಡಿಸುತ್ತಿದ್ದ ಅಭಿಪ್ರಾಯಗಳನ್ನು ಮನನ ಮಾಡಿಕೊಳ್ಳಲು ಸಾಧ್ಯವಾಯಿತು. ಅಲ್ಲದೆ ಪಿ.ಯು.ಸಿ.ಯಿಂದ ಬಿ.ಎ.ವರೆಗೆ ಭಾಲ್ಕಿಯ ಚೆನ್ನಬಸವೇಶ್ವರ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಅಭ್ಯಾಸ ಮಾಡಿರುವುದರಿಂದ ಖಂಡ್ರೆಯವರ ಬಗ್ಗೆ ಬಹಳಷ್ಟು ವಿಷಯಾಂಶಗಳು ತಿಳಿದಿದ್ದವು.

ಆಮೇಲೆ ನಾನು ಭಾತಂಬ್ರಾದಲ್ಲಿದ್ದ ಮಾರುತಿ ಫೈನಾನ್ಸ್‌ನಲ್ಲಿ ಐದು ವರ್ಷಗಳ ಕಾಲ ಕೆಲಸ ಮಾಡಿರುವುದರಿಂದ ಸಾರ್ವಜನಿಕ ಜೀವನದಲ್ಲಿ ವಿಭಿನ್ನ ಮನಸ್ಥಿತಿಯವರೊಂದಿಗೆ ಮುಖಾಮುಖಿಯಾಗುವ ಸಂದರ್ಭ ಒದಗಿಬಂದಿತು. ಬಡ ಕುಟುಂಬದಲ್ಲಿ ಹುಟ್ಟಿ ಬೆಳೆದಿರುವುದರಿಂದ ನಾನು ದುಡಿಮೆಯೊಂದಿಗೆ ಕಲಿಕೆಯಲ್ಲಿ ತೊಡಗಿಸಿಕೊಳ್ಳುವುದು ಅನಿವಾರ್ಯವಾಗಿತ್ತು. ಆರ್ಥಿಕ ಬಿಕ್ಕಟ್ಟಿನ ಪರಿಸ್ಥಿತಿಯು ದುಡಿಮೆ, ಸಹನಶೀಲತೆ ಮೈಗೂಡಿಸಿಕೊಂಡು ವಿದ್ಯಾಭ್ಯಾಸದಲ್ಲಿ ಸಕ್ರಿಯವಾಗಿರುವಂತೆ ಮಾಡಿತು. ಹಾಗಾಗಿ ಯಾವುದೇ ವಿಷಯವಿರಲಿ ಹಠಹಿಡಿದು ಕೆಲಸ ಮಾಡಬೇಕಾಗಿತ್ತು. ಸಾಮಾಜಿಕವಾಗಿಯೂ ಎಲ್ಲರೊಂದಿಗೆ ಸೌಹಾರ್ದವಿತ್ತು.

ಇದರಿಂದ ನಾನು ವೈಯಕ್ತಿಕವಾಗಿ ಬೆಳವಣಿಗೆ ಸಾಧಿಸಲು ಸಾಧ್ಯವಾಗುವುದರ ಜೊತೆಗೆ ಸಾರ್ವಜನಿಕ ಕ್ಷೇತ್ರದ ಹಲವಾರು ಮಹನೀಯರನ್ನು ಅರ್ಥೈಸಿಕೊಳ್ಳಲು ಅನುಕೂಲವಾಯಿತು. ತನ್ನತನದ ಛಾಪು ಒಡಮೂಡಿಸಲು, ಮಹತ್ವಾಕಾಂಕ್ಷೆಯಿಂದ ಬೆಳವಣಿಗೆ ಸಾಧಿಸಲು ನಿರ್ಧರಿಸಬೇಕಾಯಿತು.

ಸಾರ್ವಜನಿಕ ಜೀವನದಲ್ಲಿ ವಿಶಿಷ್ಟ ರೀತಿಯಲ್ಲಿ, ಸಮಾಜಕ್ಕೆ ಮಾದರಿಯಾಗಿ ಬದುಕುತ್ತಿರುವ ಭೀಮಣ್ಣ ಖಂಡ್ರೆಯವರ ಮೊದಲಿಗೆ ಹತ್ತೆಂಟು ಪುಟಗಳ ಲೇಖನ ಬರೆಯಬೇಕಾದ ಸಂದರ್ಭ ಬಂದಿತು. ಆಮೇಲೆ ಅದನ್ನು ೨೦೧೮ರಲ್ಲಿ ಅವರ ಅಭಿನಂದನ ಗ್ರಂಥಕ್ಕೆ ಮತ್ತಷ್ಟು ವಿಸ್ತರಿಸಲಾಯಿತು. ಇದೀಗ ಕಸಾಪ ಅಧ್ಯಕ್ಷ ಶ್ರೀ ಸುರೇಶ ಚೆನ್ನಶೆಟ್ಟಿ, ಪರೋಪಕಾರಕ್ಕಾಗಿಯೇ ತಮ್ಮ ಬದುಕಿನ ಬಹಳಷ್ಟು ಸಮಯವನ್ನು ವಿನಿಯೋಗಿಸುತ್ತಿರುವ ಸ್ನೇಹಿತ ಡಾ. ಬಸವರಾಜ ಬಲ್ಲೂರು ಅವರ ಒತ್ತಾಸೆಗೆ ಮಣಿದು ಅತ್ಯಲ್ಪ ಅವಧಿಯಲ್ಲಿ ಲೇಖನವೊಂದಕ್ಕೆ ಪುಸ್ತಕದ ರೂಪು ನೀಡಿ ರಚಿಸಬೇಕಾಯಿತು. ಈ ಕಾರಣ ಮತ್ತು ಪರಿಣಾಮವಾಗಿ ಈ ಪುಸ್ತಕ ರೂಪುಗೊಂಡದೆ.

ಹೀಗೆ ಒಂದಲ್ಲ ನೂರಾರು ಸಂಗತಿಗಳ ಬಗ್ಗೆ ಆಲೋಚಿಸುವ, ವಿಮರ್ಶಿಸುವ, ಸಂಕಲಿಸುವ, ಮುರಿದುಕಟ್ಟುವ ರಚನಾತ್ಮಕ ಸಂದರ್ಭಕ್ಕೆ, ಧನಾತ್ಮಕ ಪ್ರಕ್ರಿಯೆಗೆ ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸುರೇಶ ಚನಶೆಟ್ಟಿ, ಕಾರ್ಯದರ್ಶಿ ಡಾ. ಬಸವರಾಜ ಬಲ್ಲೂರ ಕಾರಣರಾದದ್ದು ಯೋಗಾಯೋಗ ಎನ್ನಬಹುದು. ಸಾಧಕರನ್ನು ಗುರುತಿಸುವುದು, ಅಜ್ಞಾತರನ್ನು ಸಮಾಜಕ್ಕೆ ಪರಿಚಯಿಸುವುದು, ವಿಶಿಷ್ಟ ವ್ಯಕ್ತಿತ್ವದವರನ್ನು, ಗಡಿಭಾಗದಲ್ಲಿ ಕನ್ನಡ ಕಟ್ಟಿ ಬೆಳೆಸಿದವರನ್ನು ಗುರುತಿಸಿ ಪಠ್ಯವಾಗಿಸುವುದು ಒಂದಿಷ್ಟು ಪ್ರಯಾಸದ ಕೆಲಸವಾದರೂ ಅದನ್ನು ಸಮರ್ಥವಾಗಿ ನಿಭಾಯಿಸುವುದು ಮಹತ್ವದ ಕಾರ್ಯವಾಗಿದೆ. ಇದನ್ನು ಸಾಧುವಾಗಿಸಲು ಪ್ರಯತ್ನಿಸುತ್ತಿರುವ ಕಸಾಪ ಅಧ್ಯಕ್ಷರಿಗೂ, ಎಲ್ಲ ಪದಾಧಿಕಾರಿಗಳಿಗೂ, ಕನ್ನಡ ಮನಸ್ಸುಗಳಿಗೂ ಈ ಸಂದರ್ಭದಲ್ಲಿ ಅನಂತ ಧನ್ಯವಾದಗಳನ್ನು ಅರ್ಪಿಸುತ್ತೇನೆ.

'ಲೋಕನಾಯಕ : ಡಾ॥ ಭೀಮಣ್ಣ ಖಂಡ್ರೆ' ಅವರ ಜೀವನ ಚರಿತ್ರೆಗೆ ಪೂರಕ ಮಾಹಿತಿ ಒದಗಿಸಿ, ಪಿ.ಯು.ಸಿ.ಯಿಂದ ಇವತ್ತಿನವರೆಗೂ ಮಾರ್ಗದರ್ಶಕ, ಹಿತೈಷಿ ಬಂಧು, ಪೂಜ್ಯ ಗುರುಗಳಾಗಿರುವ ಡಾ॥ ವೈಜಿನಾಥ ಭಂಡೆ, ಡಾ॥ ಸೋಮನಾಥ ನುಚ್ಚಾ ಹಾಗೂ ಸಾಂದರ್ಭಿಕವಾಗಿ ಮಾರ್ಗದರ್ಶನ ನೀಡುತ್ತಿರುವ ಶ್ರೀ ಬಾಬುರಾವ ಬಿರಾದಾರ ಅವರಿಗೆ ಅನಂತ ಧನ್ಯವಾದಗಳು. ಕಳೆದ ಎರಡು ವರ್ಷಗಳಿಂದ ಭೀಮಣ್ಣ ಖಂಡ್ರೆಯವರ ಅಭಿನಂದನ ಗ್ರಂಥ ರಚನೆ, ಡಿ.ಟಿ.ಪಿ, ಅದರ ರೂಪುರೇಷೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವುದರಿಂದ ನಾಲ್ಕೈದು ದಿನಗಳಲ್ಲಿಯೇ ಈ ಕಿರುಹೊತ್ತಿಗೆ ರಚಿಸಲು ಸಾಧ್ಯವಾಯಿತು.

ಮುಖ್ಯವಾಗಿ ಈ ವಿಷಯದ ಬಗ್ಗೆ ಆಗಾಗ ಸಭೆ ಕರೆದು ಮಾಹಿತಿ ಪಡೆದುಕೊಳ್ಳುತ್ತಿದ್ದ ಕನ್ನಡದ ಶಾಸಕ ಸನ್ಮಾನ್ಯ ಶ್ರೀ ಈಶ್ವರ ಖಂಡ್ರೆಯವರು ನನ್ನಲ್ಲಿ ಬಹಳಷ್ಟು ಚಿಂತನಾಂಶಗಳನ್ನು ಹರಿಯಬಿಟ್ಟಿದ್ದಾರೆ. ಡಾ॥ ಭೀಮಣ್ಣ ಖಂಡ್ರೆಯವರ ಅಭಿನಂದನ ಗ್ರಂಥದ ಕರಡುಪ್ರತಿಯನ್ನು ಲೋಕನಾಯಕರಿಗೆ ಸಮರ್ಪಿಸಿದಾಗ ಸಂಪಾದಕ ಮಂಡಳಿಯವರ ಶ್ರಮವನ್ನು ಸಂತಸದಿಂದ ಗೌರವಿಸಿ ಮೆಚ್ಚುಗೆಯ ಮಾತನಾಡಿದ್ದನ್ನು ಮರೆಯಲು ಸಾಧ್ಯವಿಲ್ಲ. ಈ ಪುಸ್ತಕದ ಚೌಕಟ್ಟಿಗೆ ನಾಲ್ವರ ಸಮಕಾಲೀನರ ಅಭಿಪ್ರಾಯಗಳನ್ನು ಬಳಸಿಕೊಳ್ಳಲು ಒಪ್ಪಿಗೆ ಸಂಪಾದಕ ಮಂಡಳಿಯವರಿಗೂ; ಗ್ರಂಥದ ಕೊನೆಯಲ್ಲಿ ಬಳಸಿಕೊಳ್ಳಲಾದ ಡಾ॥ ಭೀಮಣ್ಣ ಖಂಡ್ರೆಯವರ ಜೀವನದ ಘಟನಾವಳಿಗಳನ್ನು ಸಿದ್ಧಪಡಿಸಿರುವ, ಗ್ರಂಥದ ಚೌಕಟ್ಟಿಗೆ ಹೊಂದಿಸಿಕೊಳ್ಳಲು ಸಹಮತ ನೀಡಿರುವ ಪೂಜ್ಯಗುರು ಡಾ॥ ಭಂಡೆಯವರಿಗೆ ಎಷ್ಟೊಂದು ಕೃತಜ್ಞತೆಗಳನ್ನು ಸಲ್ಲಿಸಿದರೂ ಕಡಿಮೆಯಾದೀತು. ಈ ಕಿರುಹೊತ್ತಿಗೆ ಹೊರಬರಲು ಕಾರಣರಾದ ಖಂಡ್ರೆ ಕುಟುಂಬದ ಸದಸ್ಯರಿಗೂ, ಹಿತೈಷಿಗಳಿಗೂ, ನನ್ನೆಲ್ಲ ಸ್ನೇಹಿತರಿಗೂ, ಬಂಧು ಬಳಗದವರಿಗೂ ಆಭಾರಿಯಾಗಿರುವೆ. ಕೃತಿ ರಚನೆಯಲ್ಲಿ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಾಯ ಸಹಕಾರ ನೀಡಿದ ಎಲ್ಲ ಮಹನೀಯರಿಗೂ ಅನಂತ ಧನ್ಯವಾದಗಳು.

– ಡಾ. ರಘುಶಂಖ ಭಾತಂಬ್ರಾ

ಪರಿವಿಡಿ

ಲೋಕನಾಯಕ

ಅಂತರಂಗದ ಅರಿವು ಬಹಿರಂಗದ ಕ್ರಿಯೆ
ಈ ಉಭಯ ಸಂಪುಟ ಒಂದಾದ ಶರಣಂಗೆ
ಹಿಂಗಿತ್ತು ತನುಸೂತಕ, ಹಿಂಗಿತ್ತು ಮನಸೂತಕ
ಕೂಡಲ ಚೆನ್ನಸಂಗಯ್ಯನಲ್ಲಿ ಸಂಗವಾದುದು ಸರ್ವೇಂದ್ರಿಯ.
– ಚೆನ್ನಬಸವಣ್ಣ

ಪೀಠಿಕೆ:

ಚೆನ್ನಬಸವಣ್ಣನವರ ವಚನದಂತೆ ಯಾವುದೇ ವಿಧದ ಸೂತಕಕ್ಕೆ ಒಳಗಾಗದ ಸಜ್ಜನ ವ್ಯಕ್ತಿ ಹಾಗೂ ಸರ್ವಶಕ್ತಿಯ ಪ್ರತಿನಿಧಿಯಾಗಿರುವ; 'ಗಂಧದ ಕೊರಡಿ'ನಂತೆ ತಮ್ಮ ಬದುಕನ್ನು ಸಮಾಜದ ಸರ್ವಾಂಗೀಣ ಏಳ್ಗೆಗೆ ಸವೆಸುತ್ತಿರುವ ಲೋಕನಾಯಕ ಪೂಜ್ಯ ಶ್ರೀ ಭೀಮಣ್ಣ ಖಂಡ್ರೆಯವರಲ್ಲಿ ಹಲವಾರು ವಿಶಿಷ್ಟ ಗುಣಗಳು ಅಡಕವಾಗಿವೆ. ಅವರು ಮೂಲತಃ ನ್ಯಾಯ ನಿಷ್ಠುರಿಗಳು. ಅನ್ಯಾಯಕ್ಕೆ ಎಂದೂ ತಲೆಬಾಗಿದವರಲ್ಲ. ಅನ್ಯಾಯ ಕಂಡುಬಂದಲ್ಲಿ ಸಿಡಿದೇಳುವ ಪ್ರವೃತ್ತಿ ಅವರಿಗೆ ರಕ್ತಗತವಾಗಿಯೆ ಬಂದಂತಿದೆ. ಮೇಲಾಗಿ ಹಿಡಿದ ಛಲ ಬಿಡದ ಛಲದಂಕಮಲ್ಲರು.

ತತ್ವನಿಷ್ಠೆಯ ವಿಷಯ ಬಂದಾಗ ಎಂತಹ ಒತ್ತಡಕ್ಕೂ ಮಣಿಯದೇ ಹೋರಾಡುವಂತಹ ಹಠವಾದಿಗಳು. ಅವರ ಬದುಕಿನ ಮತ್ತೊಂದು ವೈಶಿಷ್ಟ್ಯವೆಂದರೆ ಎಲ್ಲರ ಮನೆ ಮನ ತಟ್ಟುವಂತಹ ಆಕರ್ಷಕ ವ್ಯಕ್ತಿತ್ವ, ಎಲ್ಲರನ್ನೂ ಪ್ರೀತಿಸುವಂತಹ ಹೃದಯ ವೈಶಾಲ್ಯತೆ. ರಾಜಕೀಯ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಕ್ಷೇತ್ರ ಹಾಗೂ ಸಹಕಾರ ಲೋಕಕ್ಕೆ ತಮ್ಮನ್ನು ಸಮರ್ಪಿಸಿಕೊಂಡ ಸೇವಾ ಧುರಂಧರರು ಹೌದು. ಹಾಗಾಗಿಯೇ ಅವರ ಹೆಸರು ಕೇಳಿದಾಕ್ಷಣ ಪ್ರತಿಯೊಬ್ಬರ ಮನದಲ್ಲಿಯೂ ಗೌರವ, ಪೂಜ್ಯತೆಯ ಭಾವ ತಾನಾಗಿಯೇ ಉಮ್ಮಳಿಸಿ ಬರುತ್ತದೆ.

ಪ್ರಾರಂಭಿಕ ಜೀವನ:

ಧರ್ಮ–ಅಧರ್ಮಗಳ ನಡುವಿನ ಸ್ವಚ್ಛಾಚಾರ, ಸ್ವಾತಂತ್ರ್ಯ–ದಾಸ್ಯ, ಶಾಂತಿ–ಕ್ರೌರ್ಯ, ಸೌಹಾರ್ದತೆ–ವಿಘಟನೆ, ಭ್ರಾತೃತ್ವ–ದ್ವೇಷ ಸಾಧನೆಯ ಸಂಘರ್ಷಮಯ ವಾತಾವರಣದಲ್ಲಿ ಶ್ರೀಮತಿ ಪಾರ್ವತಿಬಾಯಿ ಹಾಗೂ ಶ್ರೀ ಶಿವಲಿಂಗಪ್ಪ ಖಂಡ್ರೆಯವರ ಮಗನಾಗಿ ೦೮–೦೧–೧೯೨೭ರಂದು ಜನಿಸಿದರು. ಕಾಶಪ್ಪ ಖಂಡ್ರೆ ಅವರ ಅಣ್ಣ. ಸಿದ್ಧಮ್ಮ, ವಿರೂಪಾಕ್ಷಮ್ಮ ಎಂಬಿಬ್ಬರು ಅವರ ಅಕ್ಕಂದಿರು. ಎಲ್ಲರಿಗಿಂತ ಚಿಕ್ಕವರಾದ ಇವರ ಮೇಲೆ ಎಲ್ಲರ ಪ್ರೀತಿ ವಿಶ್ವಾಸ, ಕಾಳಜಿ ಹೆಪ್ಪುಗಟ್ಟಿದ್ದವು. ಸ್ವಭಾವತಃ ಚುರುಕತನದಿಂದಾಗಿ ಎಲ್ಲರ ಮನ ಗೆದ್ದಿದ್ದರು. ಪ್ರೀತಿಗೆ ಪಾತ್ರರಾಗಿದ್ದರು. ಬಾಲ್ಯದಲ್ಲಿ ತಂದೆಯನ್ನು ಕಳೆದುಕೊಂಡರೂ ಚಿಕ್ಕಪ್ಪ ಕಂಟೆಪ್ಪ ಖಂಡ್ರೆಯವರ ಆಶ್ರಯ, ಮಾರ್ಗದರ್ಶನ ಮತ್ತು ತಾಯಿ ಮಮತೆಯ ಮಡಿಲು ನೀಡಿದ ಸಂಸ್ಕಾರದಲ್ಲಿ ಚೆನ್ನಾಗಿ ಬೆಳೆದರು. ಕಾಶಿರಾಯ ದೇಶಮುಖರಲ್ಲಿ ಆಡಳಿತಗಾರರಾಗಿ ಸೇವೆ ಸಲ್ಲಿಸುತ್ತಿದ್ದ ತಂದೆಯವರ ಸೇವಾದರ್ಶತೆ, ಆಡಳಿತಾತ್ಮಕ ಗುಣಗಳು ಭೀಮಣ್ಣ ಖಂಡ್ರೆಯವರಿಗೆ ರಕ್ತಗತವಾಗಿದ್ದವು. ಸಾಮಾಜಿಕ ಸೇವಾ ಕೈಂಕರ್ಯಕ್ಕೆ ಮಾರ್ಗದರ್ಶಿಯಾಗಿದ್ದವು.

ತಾಯಿಯ ತವರುಮನೆ ಗೋರ್ಟಾದಲ್ಲಿ ಅವರಿಗೆ ಪ್ರಾರಂಭಿಕ ಅಕ್ಷರಾಭ್ಯಾಸ ಪ್ರಾರಂಭವಾಯಿತು. ನಂತರ ಭಾಲ್ಕಿ ಹಿರೇಮಠದ ಕನ್ನಡ ಶಾಲೆಯಲ್ಲಿ ಅವರ ಶಿಕ್ಷಣ ಮುಂದುವರೆಯಿತು. ಶ್ರೀ ಚೆನ್ನವೀರಯ್ಯ ಸ್ವಾಮಿ, ಶ್ರೀ ಬಸಪ್ಪ ಕರ್ಕಾಳೆಯವರು ಖಂಡ್ರೆಯವರಿಗೆ ಕನ್ನಡ ಕಲಿಸಿದ ಮಾದರಿ ಶಿಕ್ಷಕರಾಗಿದ್ದಾರೆ. ಅನಂತರ ಉರ್ದು, ಪಾರಸಿ, ಮರಾಠಿ ಹಾಗೂ ಇಂಗ್ಲಿಷ್ ಭಾಷೆಗಳನ್ನು ಕಲಿಯುವುದರ ಮೂಲಕ ಪ್ರಾಥಮಿಕ ಶಿಕ್ಷಣವನ್ನು ಬೀದರನಲ್ಲಿ ಮುಗಿಸಿದರು. ಹಾವಗಿರಾವ ಪಾಟೀಲ, ಶಂಕರರಾವ ಶೆಟಕಾರರು ಖಂಡ್ರೆಯವರ ಬಾಲ್ಯದ ಸಹಪಾಠಿ ಗೆಳೆಯರಾಗಿದ್ದರು. ಭಾಲ್ಕಿಯ 'ಬಲಭೀಮ ವ್ಯಾಯಾಮ ಶಾಲೆ'ಯಲ್ಲಿ ಅವರು ದಂಡ, ಬೈಠಕ್, ಮಲ್ಲಗಂಭ, ಕುದುರೆ ಸವಾರಿ, ಕತ್ತಿವರಸೆ, ಲಾಠಿ ಪ್ರಹಾರದಂತಹ ಆತ್ಮರಕ್ಷಣಾ ಕಲೆಯನ್ನು ಕರಗತ ಮಾಡಿಕೊಂಡರು. ಬಯಲಿನಲ್ಲಿ ಅವರು ಗೆಳೆಯರೊಂದಿಗೆ ಗಿಲ್ಲಿ-ಘಳಿ, ಕಬ್ಬಡ್ಡಿ, ಈಜಾಟ, ಮರಕೋತಿಯಂತಹ ಆಟಗಳನ್ನು ಆಡುತ್ತಿದ್ದರು. ಇದರ ಪ್ರತಿಫಲವೆಂಬಂತೆ ಇವತ್ತಿಗೂ ಅವರು ಲವಲವಿಕೆಯಿಂದ ಓಡಾಡುತ್ತಾರೆ.

ನಿಜಾಮ ಸರ್ಕಾರದ ಬೀದರಿನ ಪ್ರೌಢ ಶಾಲೆಯನ್ನು ಸೇರಿದರೂ ಹೈದರಾಬಾದಿನ ಮೊಹ್ಮದ್ ಮತ್ತು ಖಾಲೀದ್‌ರಿಂದ ಖಾಸಗಿಯಾಗಿ ವಕಾಲತ್ ಶಿಕ್ಷಣ ಕಲಿಯುತ್ತ ಅಭ್ಯಾಸ ಮಾಡಿದರು. ೧೯೪೦ರಲ್ಲಿ ಮುನ್ಷಿ-ಫಾಜಲ್ ಪರೀಕ್ಷೆಯಲ್ಲಿ ಇಡೀ ಹೈದರಬಾದ್ ಪ್ರಾಂತ್ಯದಲ್ಲಿ ಪ್ರಥಮ ಸ್ಥಾನಪಡೆದು ಉತ್ತೀರ್ಣರಾದರು. ೧೯೪೬ರಲ್ಲಿ ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದಿಂದ 'ವಕಾಲತ್' ಅಧ್ಯಯನ ಮುಮದುವರೆಸಿದ್ದರು. ತತ್ಕಾಲದಲ್ಲಿ ಜಾಗೃತಾವಸ್ಥೆ ತಾಳಿದ್ದ ಬ್ರಿಟಿಷ್ ವಿರೋಧಿ ಚಳವಳಿ, ನಿಜಾಮ ಪ್ರೇರೇಪಿತ ರಜಾಕಾರರ ದಬ್ಬಾಳಿಕೆಯ ವಿರುದ್ಧ ಹೋರಾಡುವಂತಹ ಮನೋಭಾವಕ್ಕೂ ತಮ್ಮನ್ನು ಕಾಯಾ-ವಾಚಾ-ಮನಸಾರೆ ಅರ್ಪಿಸಿಕೊಂಡರು.

ದಾಂಪತ್ಯ:

ಬೀದರ ಜಿಲ್ಲೆ ಔರಾದ ತಾಲೂಕಿನ ಬಾಬಜಿ ನಾಗೂರು ಗ್ರಾಮದ ಶ್ರೀಮತಿ ಗುಂಡಮ್ಮ ಶ್ರೀ ಶಿವಲಿಂಗಪ್ಪ ಮಸ್ಕಲೆಯವರ ಹಿರಿಯ ಮಗಳಾದ ಲಕ್ಷ್ಮೀಬಾಯಿಯವರೊಂದಿಗೆ ಅವರ ಮದುವೆಯಾಯಿತು. ಲಕ್ಷ್ಮೀಬಾಯಿಯವರು ಅನಕ್ಷರಸ್ಥರಾಗಿದ್ದರೂ ಸುಶೀಲೆ, ಸಂಸ್ಕಾರವಂತರಾಗಿದ್ದರು. ಭೀಮಣ್ಣ ಖಂಡ್ರೆಯವರ ಬದುಕಿಗೆ ದೀವಿಗೆಯಾಗಿದ್ದರು. ಸ್ವತಃ ಅವರೆ "ನನ್ನ ಪತ್ನಿ ಅನಫಡ್ ಆಗಿದ್ದರೂ ನನಗೆ ಗುರು, ಮಾರ್ಗದರ್ಶಿಯಾಗಿ ಜೀವನುದ್ದಕ್ಕೂ ಕೈ ಹಿಡಿದಿದ್ದಾರೆ. ಅವರ ಋಣ ತೀರಿಸಲು ಸಾಧ್ಯವಿಲ್ಲ" ಎಂದು ಹೇಳಿಕೊಂಡಿದ್ದಾರೆ. ಸಾಮಾಜಿಕ ಸೇವೆಗೆ ಬದ್ಧರಾಗಿರುತ್ತಿದ್ದರಿಂದ ಅವರ ಶ್ರೀಮತಿಯವರು ಕುಟುಂಬದ ಎಲ್ಲ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು. ಕೌಟುಂಬಿಕ ಕೆಲಸ ಕಾರ್ಯಗಳೊಂದಿಗೆ ಪತಿಯ ಪ್ರತಿಯೊಂದು ಕಾರ್ಯ ಕೌಶಲ್ಯದ ಹಿಂದೆ ಅವರ ಶ್ರಮ ಅಡಕವಾಗಿತ್ತು. ದಂಪತಿಗಳಿಬ್ಬರ ಸಮರಸ ದಾಂಪತ್ಯದ ಫಲವಾಗಿ ಡಾ. ವಿಜಯಕುಮಾರ, ಈಶ್ವರ, ಅಮರಕುಮಾರ, ಶಕುಂತಲಾ, ನಾಗಮ್ಮ, ಡಾ. ಆಶಾ, ಡಾ. ಶೋಭಾ, ಭಾರತಿ ಮಕ್ಕಳು ಜನಿಸಿದರು.

ಡಾ. ವಿಜಯಕುಮಾರ ಅವರು ಭಾಲ್ಕಿ ಕ್ಷೇತ್ರದ ಶಾಸಕರಾಗಿದ್ದರು. ಶ್ರೀ ಅಮರಕುಮಾರ ಖಂಡ್ರೆಯವರು ಮಹಾತ್ಮಾ ಗಾಂಧಿ ಸಹಕಾರ ಸಕ್ಕರೆ ಕಾರ್ಖಾನೆಯ ಚುಕ್ಕಾಣಿ ಹಿಡಿದಿರುವವರು. ಶ್ರೀ ಈಶ್ವರ ಖಂಡ್ರೆಯವರು ಸಮರ್ಥ ಯುವನಾಯಕರಾಗಿ, ಭಾಲ್ಕಿ ಶಾಸಕರಾಗಿ, ಪೌರಾಡಳಿತ ಸಚಿವರಾಗಿ ಕಾರ್ಯನಿರ್ವಹಿಸುವುದರ ಜೊತೆಗೆ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಸರ್ವಾಂಗೀಣ ಪ್ರಗತಿಗೆ ಅವಿರತವಾಗಿ ಶ್ರಮಿಸುತ್ತಿದ್ದಾರೆ. ಬೀದರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿಯೂ ಸತತ ದುಡಿಯುತ್ತಿದ್ದಾರೆ. ಈ ಮೂವರು ಮಕ್ಕಳು ತಮ್ಮ ತಂದೆಯವರ ಜೀವನಾದರ್ಶವನ್ನು ಬದುಕಿನುದ್ದಕ್ಕೂ ಅಳವಡಿಸಿ ಕೊಂಡಿದ್ದಾರೆ. ಜನತೆಯ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ. ಹೆಣ್ಣುಮಕ್ಕಳು

ಸಹ ತಮ್ಮ ತಂದೆ ತಾಯಿಗಳ ಮಾರ್ಗದರ್ಶನ ಮತ್ತು ಆಶಯದಂತೆ ಬದುಕು ಸಾಗಿಸುತ್ತ ಆದರ್ಶ ಗೃಹಣಿಯಾಗಿದ್ದಾರೆ. ತಮ್ಮಿಂದ ಸಾಧ್ಯವಾದಷ್ಟು ಸೇವೆ ಸಲ್ಲಿಸುತ್ತ ಸಮಾಜಕ್ಕೆ ಆದರ್ಶಪ್ರಾಯವಾಗಿದ್ದಾರೆ.

ಆಧ್ಯಾತ್ಮಿಕ ಪ್ರವೃತ್ತಿ:

ಮುಚಳಂಬದ ಶ್ರೀ ನಾಗಭೂಷಣ ಶಿವಯೋಗಿಗಳಿಂದ ಇವರಿಗೆ ಯೋಗಾಭ್ಯಾಸದ ಶಿಕ್ಷಣ, ಕನ್ನಡದ ಸ್ವಾಮಿ ಪೂಜ್ಯ ಶ್ರೀ ಚೆನ್ನಬಸವ ಪಟ್ಟದ್ದೇವರಿಂದ ಬಸವತತ್ವ ದೀಕ್ಷೆ ಲಭಿಸಿತು. ಯೋಗ ಶಿಕ್ಷಣ ಮತ್ತು ಬಸವ ತತ್ವದೀಕ್ಷೆ ಇವರ ಮೇಲೆ ಗಾಢವಾದ ಪರಿಣಾಮ ಬೀರಿದವು. ಇದರಿಂದ ಸಹಜವಾಗಿಯೇ ಅವರ ಮನಸ್ಸು ಆಧ್ಯಾತ್ಮದೆಡೆಗೆ ತಿರುಗಿತು. ೧೯೪೭-೪೮ರಲ್ಲಿ ಮಹಾರಾಷ್ಟ್ರದ ಬಾರ್ಸಿ ಸಮೀಪದ ರಾಮಲಿಂಗೇಶ್ವರ ಗುಡ್ಡವೊಂದರಲ್ಲಿ ಬನಹಟ್ಟಿಯ ಸಿದ್ಧವೀರ ಶಾಸ್ತ್ರೀಗಳು, ಗೋರ್ಟಾ ಗ್ರಾಮದ ಶ್ರೀ ಸುರೇಶ ಸ್ವಾಮಿಗಳ ಸಲಹೆಯ ಮೇರೆಗೆ ಎರಡು ತಿಂಗಳ ಕಾಲ ತಪಸ್ಸು ಮಾಡಿದರು. ಅಲ್ಲಿಂದ ಪುನಃ ಭಾಲ್ಕಿಗೆ ಬಂದು ನಾಗಭೂಷಣ ಶಿವಯೋಗಿಗಳಂತೆ ವಿರಾಗಿಯಾಗಿರಲು ನಿರ್ಧರಿಸಿದರು. ಚಿಕಲಚಂದಾ ಗ್ರಾಮದ ತಮ್ಮ ಸ್ವಂತ ಜಮೀನಿನಲ್ಲಿ ಒಂದು ಗುಡಿಸಲು ಹಾಕಿಕೊಂಡು ನಾಗಭೂಷಣ ಶಿವಯೋಗಿಗಳಿಂದ ಕಲಿತ ಯೋಗಾಭ್ಯಾಸ, ಪ್ರಾಣಾಯಾಮದಲ್ಲಿ ನಿರತರಾದರು. ಅದರಲ್ಲಿಯೆ ಸಮಾಧಾನ ಕಂಡುಕೊಳ್ಳುತ್ತಿದ್ದರು. ಕೌಟುಂಬಿಕ ವಲಯದಿಂದ ದೂರಾಗುತ್ತ ಆಧ್ಯಾತ್ಮದತ್ತ ಅವರ ಮನಸ್ಸು ಹಂಬಲಿಸುತ್ತಿತ್ತು.

ಕುಟುಂಬ ಸಂಸಾರ ತೊರೆದು ಸಂನ್ಯಾಸಿಯಾಗುವುದು, ವಿರಾಗಿಯಾಗಿರುವುದು ಅವರ ಹಿತೈಷಿಗಳಿಗೆ ಸರಿ ಕಾಣಲಿಲ್ಲ. ಮನೆತನದ ಗುರುಗಳಾದ ಪೂಜ್ಯ ಶ್ರೀ ಡಾ॥ ಚೆನ್ನಬಸವ ಪಟ್ಟದ್ದೇವರು ಮತ್ತು ಅವರ ಹಿರಿಯ ಸ್ನೇಹಿತರು,

ಮಾರ್ಗದರ್ಶಕರಾಗಿದ್ದ ಪ್ರಭುರಾವ ಕಂಬಳಿವಾಲೆ ಅವರು ಶರಣರಂತೆ ಸಂಸಾರದಲ್ಲಿದ್ದು ಪರಮಾರ್ಥ ಸಾಧಿಸಲು ಅವರಿಗೆ ತಿಳಿಹೇಳಿದರು. ಸಾರ್ವಜನಿಕ ಜೀವನ, ಸಮಾಜದ ಶ್ರೇಯೋಭಿವೃದ್ಧಿಗೆ ತಮ್ಮನ್ನು ತೆರೆದುಕೊಳ್ಳುವಂತೆ ಸಲಹೆ ನೀಡಿ, ಅವರ ಮನಸ್ಸನ್ನು ಪರಿವರ್ತಿಸಿದರು. ಹಾಗಾಗಿ ಅವರು ಪುನಃ ವಕೀಲಿ ವೃತ್ತಿಗೆ, ಕೌಟುಂಬಿಕ ಜೀವನಕ್ಕೆ ಹಿಂದಿರುಗಿದರು.

ಆಧ್ಯಾತ್ಮಿಕ ತಳಹದಿಗೆ ಕಾರಣವಾಗುವ ಬಸವಾದಿ ಪ್ರಥಮರ ವಚನಗಳನ್ನು, ತತ್ತ್ವಪದಗಳನ್ನು ಖಂಡ್ರೆಯವರು ಇವತ್ತಿಗೂ ತಂಬೂರಿ ಹಿಡಿದು ಸುಶ್ರಾವ್ಯವಾಗಿ ಹಾಡುತ್ತಾರೆ. ಶರಣರ ಕಾಯಕ ದಾಸೋಹ ಸಿದ್ಧಾಂತವನ್ನು ಜೀವನದಲ್ಲಿ ಪಾಲಿಸಿಕೊಂಡು ಬರುತ್ತಿದ್ದಾರೆ. ಜಗತ್ತಿಗೆ ಜ್ಯೋತಿಯಾದ ಶರಣರ ತತ್ವಗಳನ್ನು ಆಚರಣೆಯಲ್ಲಿ ತರುವ ಉದ್ದೇಶದಿಂದ, ಪೂಜ್ಯ ಡಾ. ಚೆನ್ನಬಸವ ಪಟ್ಟದ್ದೇವರ ಆಕಾಂಕ್ಷೆಗೆ ಪೂರಕವಾಗಿ ಸ್ಪಂದಿಸಿದರು. ಬಸವಕಲ್ಯಾಣದಲ್ಲಿ ನೂತನ ಅನುಭವ ಮಂಟಪ ನಿರ್ಮಾಣಗೊಳ್ಳುವಲ್ಲಿ ಇವರು ಮುಖ್ಯವಾದ ಪಾತ್ರವಹಿಸಿದ್ದರು. ಯೋಗಾಭ್ಯಾಸಕ್ಕೆ ಅನುಕೂಲವಾಗುವಂತೆ ಮುಚಳಂಬದಲ್ಲಿ ಯೋಗಕೇಂದ್ರ ತೆರೆಯಲು ಕಾರಣೀಕೃತರಾಗಿದ್ದಾರೆ. ಇವತ್ತಿಗೂ ಅಲ್ಲಿ ಯೋಗ ಶಿಬಿರಗಳು ನಡೆಯುತ್ತಿವೆ.

ಅಪ್ರತಿಮ ಹೋರಾಟಗಾರ :

ದೇಶದಾದ್ಯಂತ ಸ್ವಾತಂತ್ರ್ಯ ಚಳುವಳಿ ತೀವ್ರಗತಿಯಲ್ಲಿದ್ದಾಗ ಜನಿಸಿದ ಅವರು ಸಹಜವಾಗಿಯೇ ದೇಶಕ್ಕಾಗಿ ಹೋರಾಡುವಂತಹ ಪ್ರಕ್ರಿಯೆಗೆ ತಮ್ಮನ್ನು ಸಮರ್ಪಿಸಿಕೊಂಡರು. ಬಾಲ್ಯದಲ್ಲಿ ಕಲಿತ ಕಸರತ್ತುಗಳಿಗೆ ಪೂರಕವಾಗಿ ಅಣ್ಣಾ ಕಾಶಪ್ಪ, ಬಾಬಾರಾವ ಹೊನ್ನಳ್ಳಿಯವರೊಂದಿಗೆ ಶಸ್ತ್ರಾಸ್ತ್ರ ಪರಿಣಿತಿಯನ್ನು ಪಡೆದರು. ಇದು ಅವರಿಗೆ ಹೈದ್ರಾಬಾದ ವಿಮೋಚನ ಹೋರಾಟದ ಸಂದರ್ಭದಲ್ಲಿ

ರಜಾಕಾರರ ಹದ್ದುಮೀರಿದ ವರ್ತನೆಯನ್ನು ತಡೆಗಟ್ಟುವಲ್ಲಿ, ಕಮಲನಗರದಲ್ಲಿ ಮರಾಠಿ ಭಾಷಿಕರ ಉಪಟಳವನ್ನು ಸದೆಬಡಿಯುವಲ್ಲಿ ಬಹಳಷ್ಟು ಸಹಾಯ ಮಾಡಿತು.

ಮಹಾತ್ಮಾ ಗಾಂಧೀಜಿಯವರ 'ಅಸಹಕಾರ ಚಳವಳಿ'; ಬಾಲಗಂಗಾಧರ ತಿಲಕರ 'ಸ್ವರಾಜ್ಯ ನನ್ನ ಜನ್ಮಸಿದ್ದ ಹಕ್ಕು' 'ಸ್ವದೇಶಿ ವಸ್ತುಗಳ ಮಾರಾಟ, ವಿದೇಶಿ ವಸ್ತುಗಳ ಬಹಿಷ್ಕಾರ' ಈ ಕುರಿತಾಗಿ ನಡೆಯುತ್ತಿದ್ದ ಹೋರಾಟದಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡರು. ೧೯೪೬ರಿಂದ ಸ್ವಾತಂತ್ರ್ಯ ಹೋರಾಟವನ್ನು ಪ್ರಾರಂಭಿಸಿದ್ದರು. ೧೯೪೭ರ ಅಗಸ್ಟ್‌ನಲ್ಲಿ ದೇಶ ಸ್ವಾತಂತ್ರ್ಯವಾದರೂ ಹೈದ್ರಾಬಾದ ಸಂಸ್ಥಾನದ ನಿಜಾಮ ಮೀರ್ ಉಸ್ಮಾನ ಅಲಿಖಾನ್ ಭಾರತ ಒಕ್ಕೂಟವನ್ನು ಸೇರಿಕೊಳ್ಳದೆ, ಸ್ವತಂತ್ರವಾಗಿರುವುದಾಗಿ 'ಫರಮಾನ್' ಹೊರಡಿಸಿದನು. ಮೇಲಾಗಿ ಕಾಶಿಂ ರಜ್ವಿ ನೇತೃತ್ವದ ರಜಾಕಾರ ಪಡೆ, ಬಹಾದ್ದೂರ್ ಯಾರ್ ಜಂಗ್ ಪ್ರಾಯೋಜಿತ ಇತ್ತೇಹಾದ್-ಉಲ್-ಮುಸಲ್ಮಿನ್ ಸಂಘಟನೆ, ನಿಜಾಮ ಸೈನ್ಯದ ಕಮಾಂಡರ್ ಎಲ್. ಇದ್ರೂಸ್, ದೇಶಿಯರಾದ ಪಸ್ತಖೌಮ್, ದೇಶದ ಬೇರೆ ಬೇರೆ ಭಾಗಗಳಿಂದ ಬೀದರಿಗೆ ಆಗಮಿಸಿದ್ದ ಪಠಾಣರು, ರೋಹಿಲ್ಲರು, ಮುಕಾರೇರು ಹಿಂದೂ ವಿರೋಧಿ ಚಳವಳಿಯನ್ನು ಪ್ರಾರಂಭಿಸಿದರು. ಹಿಂದೂಗಳ ಹತ್ಯೆ, ಆಸ್ತಿ ಲೂಟಿ, ಅತ್ಯಾಚಾರದಂತಹ ಹೇಯಕೃತ್ಯಗಳನ್ನು ಎಸಗಿದರು. ರಜಾಕಾರರ ಕುಕೃತ್ಯಗಳಿಗೆ ಗೋರ್ಟಾ, ಹೊನ್ನಳ್ಳಿ, ಚಿಟಗುಪ್ಪ, ಹುಡಗಿ, ಚಾಂಡೇಶ್ವರ, ಅಟ್ಟರ್ಗಾ, ಖತಗಾಂವ, ಮುಧೋಳ ಬಿ; ಸಾಯಗಾಂವ, ಭೈರನಳ್ಳಿ, ವರವಟ್ಟಿ, ಬಸವಕಲ್ಯಾಣ ಸೇರಿದಂತೆ ನೂರಾರು ಗ್ರಾಮಗಳು ಬಲಿಯಾದವು. ಸಾವಿರಾರು ಜನರು ಪ್ರಾಣ ತೆತ್ತರು. ಲಕ್ಷಾಂತರ ಜನರು ನಿರ್ವಾಸಿತರಾಗಿ ಸೊಲ್ಲಾಪುರ, ಕಲಬುರಗಿಯತ್ತ ಮುಖ ಮಾಡಿದರು.

ಮುಖ್ಯವಾಗಿ ನಿಜಾಮ್ ಪ್ರಾಯೋಜಿತ ಮತಾಂಧರು ಹೈದ್ರಾಬಾದ ಪ್ರಾಂತ್ಯವನ್ನು ಮುಸ್ಲಿಂ ರಾಷ್ಟ್ರವನ್ನಾಗಿಸುವ ಹುನ್ನಾರ ನಡೆಸಿದ್ದರು. ಈ ವಿಷಯವು ಪೂಜ್ಯ ಚೆನ್ನಬಸವ ಪಟ್ಟದ್ದೇವರು, ಶ್ರೀ ಭೀಮಣ್ಣ ಖಂಡ್ರೆ, ಪ್ರಭುರಾವ ಕಂಬಳಿವಾಲೆ, ಆರ್.ವಿ. ಬೀಡಪ್, ರಾಮಚಂದ್ರ ವೀರಪ್ಪ, ಶಾಮಲಾಲ್, ಬನಸ್ಸಿಲಾಲ್, ಬಸವರಾಜ ಹುಡಗಿ, ವ್ಹಿ.ಎನ್. ಪಾಟೀಲ ಮೊದಲಾದ ಈ ಭಾಗದ ಸ್ವಾಭಿಮಾನಿಗಳನ್ನು ಕೆರಳಿಸಿತು. ಹಾಗಾಗಿ ಶ್ರೀ ಭೀಮಣ್ಣ ಖಂಡ್ರೆಯವರು ನಿಜಾಮನ ಅಧಿಕಾರಶಾಹಿ ಹಾಗೂ ರಜಾಕಾರರ ಕ್ರೌರ್ಯದ ವಿರುದ್ಧ ಬಂಡಾಯದ ಕಹಳೆಯನ್ನು ಮೊಳಗಿಸಿದರು.

ಜಗನ್ನಾಥ ನಾಯಿಕ, ಮಹಾರುದ್ರಪ್ಪ ಸಿರ್ಸೆ, ಶಂಕರೆಪ್ಪ ಲೋಖಂಡೆಯವರೊಂದಿಗೆ ಸೇರಿ ಭಾಲ್ಕಿ ಅಂಚೆಕಚೇರಿ ಮೇಲೆ ತಿರಂಗಾ ಧ್ವಜ ಹಾರಿಸಿ ಬಗಾವತ್ ಮಾಡಿದರು. ನಿಜಾಮ ಸರ್ಕಾರವು ಖಂಡ್ರೆ ಸೇರಿದಂತೆ ೨೬ ಜನರನ್ನು ಬಂಧಿಸಿ ಬೀದರ ಜೈಲಿನಲ್ಲಿಟ್ಟಿತ್ತು. ಒಂದು ತಿಂಗಳ ನಂತರ ಬಿಡುಗಡೆಗೊಂಡರು. ಚಿಕ್ಕಪ್ಪ ಶ್ರೀ ಕಂಟೆಪ್ಪ, ಸಹೋದರರಾದ ಶ್ರೀ ಕಾಶೆಪ್ಪ ಖಂಡ್ರೆ ಹಾಗೂ ತಮ್ಮ ಗುಂಪಿನವರೊಂದಿಗೆ ಸೇರಿಕೊಂಡು ರಜಾಕಾರರ ಅಟ್ಟಹಾಸವನ್ನು ಸಮರ್ಥವಾಗಿ ಎದುರಿಸಿದರು. ಹಿಂದೂಗಳ ರಕ್ಷಣೆ ಮಾಡಿದರು. ಇವರ ತಲೆಯ ಮೇಲೆ ಬಂಧನದ ವಾರಂಟ್ ಇದ್ದರೂ ಗುಪ್ತವಾಗಿ ತಮ್ಮ ಸಹಚರರೊಂದಿಗೆ ರಜಾಕಾರ ವಿರುದ್ಧ ಹೋರಾಡಲು ಜನತೆಗೆ ಸಹಾಯ, ಸಹಕಾರ ಮಾಡಿದರು. ಸೂಕ್ತ ಸಂದರ್ಭದಲ್ಲಿ ಮಾರ್ಗದರ್ಶನ ನೀಡಿದರು. ಇದನ್ನರಿತ ನಿಜಾಮ ಸರ್ಕಾರವು ಖಂಡ್ರೆಯವರನ್ನು 'ದೇಶದ್ರೋಹಿ' ಎಂದು ಆರೋಪಿಸಿ, ಎಲ್ಲಾ ಆಸ್ತಿಯನ್ನು ವಶಪಡಿಸಿಕೊಂಡಿತು.

ರಜಾಕಾರರಿಂದ ಗೋರ್ಟಾ ಹತ್ಯಾಕಾಂಡ ನಡೆದ ಸಂದರ್ಭದಲ್ಲಿ ಸರ್ಕಾರವು ಮುಂಜಾಗ್ರತಾ ಕ್ರಮವಾಗಿ ಇವರನ್ನು ಜೈಲಿನಲ್ಲಿಟ್ಟಿತು. ಆ ಮೇಲೆ ಬಿಡುಗಡೆಗೊಂಡರು. ಫೈಜುಲ್ಲಾ ಬೇಗ್ ವಕೀಲರ ನಿರ್ದೇಶನದ ಮೇರೆಗೆ

ನಾಲ್ಕು ನೂರು ಜನರ ರಜಾಕಾರರ ಗುಂಪು ಇವರ ಮನೆಯ ಮೇಲೆ ಕಲ್ಲು ಹಾಕಿ ಹಲ್ಲೆ ಮಾಡಲು ಬಂದಿತು. ಶ್ರೀ ಕಾಶೆಪ್ಪ ಖಂಡ್ರೆಯವರ ಆರ್ಭಟದ ಕೂಗಿಗೆ ಆ ಗುಂಪು ಪಲಾಯನ ಮಾಡಿತು.

ಬಂಧನದ ವಾರಂಟ್‌ದಿಂದ ತಪ್ಪಿಸಿಕೊಳ್ಳಲು ಅನಿವಾರ್ಯವಾಗಿ ಭೀಮಣ್ಣ ಖಂಡ್ರೆಯವರು ೧೯೪೭ರಲ್ಲಿ ಸೊಲ್ಲಾಪುರಕ್ಕೆ ಹೋಗಬೇಕಾಯಿತು. ತಮ್ಮ ಚಿಕ್ಕಪ್ಪ ರಾಮಶೆಟ್ಟೆಪ್ಪ ಖಂಡ್ರೆಯವರಲ್ಲಿ ಆಶ್ರಯ ಪಡೆದರು. ಅಲ್ಲಿಯೂ ಸುಮ್ಮನೆ ಕೂಡದೆ ಕಾಂಗ್ರೆಸ್ ಕಛೇರಿಯೊಂದಿಗೆ ವಾಗ್ಧರಿ, ದುಧನಿ, ಮೈಂದರ್ಗಿ, ಕೇಸರ ಜವಳಗಾ, ಪಾಂಜ್ರಿಪೋಳ, ಸೊಲ್ಲಾಪುರ ಮುಂತಾದ ಗಡಿಶಿಬಿರಗಳ ಕಾರ್ಯಕರ್ತರಿಗೆ ಸಹಾಯ ಸಹಕಾರ ನೀಡುತ್ತಿದ್ದರು. ಡಾ॥ ಜಯದೇವಿತಾಯಿ ಲಿಗಾಡೆಯವರ ಜೊತೆಗೆ ನಿರಂತರವಾದ ಸಂಪರ್ಕವನ್ನಿಟ್ಟುಕೊಂಡು ಸೊಲ್ಲಾಪುರಕ್ಕೆ ವಲಸೆ ಹೋದ ಕನ್ನಡಿಗರಿಗೆ ಜೀವನಾವಶ್ಯಕ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಶ್ರಮವಹಿಸಿ ದುಡಿದರು. ನಿರಾಶ್ರಿತರಿಗೆ, ಬಂಧು ಬಳಗದವರಿಗೆ ಮಾರ್ಗದರ್ಶನ ಮಾಡಿದರು. ಪೊಲೀಸ್ ಕಾರ್ಯಾಚರಣೆಯ ನಂತರ ಕುಟುಂಬ ಸಮೇತ ಭಾಲ್ಕಿಗೆ ವಾಪಸ್ಸಾದರು. ಮನೆತನದ ಆಸ್ತಿಯನ್ನು ವಾಪಸ್ಸು ಪಡೆದರು.

ಸೇಡಿಗೆ ಸೇಡು ಸಲ್ಲದು :

ನಿಜಾಮ ಅಧಿಕಾರ ಹಸ್ತಾಂತರಿಸಿದನು. ರಜಾಕಾರ ಹಾವಳಿ ಕುಗ್ಗಿತು. 'ಸೇಡಿಗಾಗಿ ಸೇಡು' ತೀರಿಸಿಕೊಳ್ಳಲು ಹಿಂದು ಯುವಕರು ಮುಂದಾದರು. ಹಿಂದೂಗಳ ಪ್ರಾಬಲ್ಯವಿರುವ ಕಡೆಗಳಲ್ಲಿ ದ್ವೇಷ ಸಾಧಿಸುವ ಉದ್ದೇಶದಿಂದ ಯುವಕರು ಪಣತೊಟ್ಟರು. ಹಾಗಾಗಿ ಮುಸ್ಲಿಂ ಜನಾಂಗದವರ ಮೇಲೆ ಕೆಲವು ಕಡೆಗಳಲ್ಲಿ ಅನ್ಯಾಯ, ದೌರ್ಜನ್ಯಗಳು ನಡೆಯತೊಡಗಿದವು. ಇದುವರೆಗೆ ಭಾರಿ ಪ್ರಮಾಣದಲ್ಲಿ ಕ್ರೌರ್ಯ ಎಸಗಿದ್ದ ರಜಾಕಾರರು, ಪಠಾಣರು ಹಿಂದೂ

ಆಕ್ರಮಣಕಾರರಿಗೆ ಹೆದರಿ ಈ ಭಾಗದಿಂದ ಪಲಾಯನ ಮಾಡಿದರು. ನಿರ್ದೋಷಿಗಳು ಇಲ್ಲಿಯೆ ಉಳಿದರು.

ಅಮಾಯಕ ಮುಸ್ಲಿಂರ ಮೇಲಾಗುತ್ತಿದ್ದ ದೌರ್ಜನ್ಯಗಳನ್ನು ಖಂಡ್ರೆಯವರಿಗೆ ಸಹಿಸಲಾಗಲಿಲ್ಲ. ಸ್ವತಃ ಕೈಯಲ್ಲಿ ಬಂದೂಕು ಹಿಡಿದುಕೊಂಡು ಅಮಾಯಕ ಮುಸ್ಲಿಂ ಕುಟುಂಬದವರಿಗೆ ರಕ್ಷಣೆ ನೀಡಿದರು. ಆಹಾರ ವಸತಿ ಸೌಲಭ್ಯಗಳನ್ನು ಕಲ್ಪಿಸಿದರು. ರಜಾಕಾರ ಹಾವಳಿಯ ಸಂದರ್ಭದಲ್ಲಿ ತಮ್ಮ ಮನೆಯ ಮೇಲೆ ಕಲ್ಲು ತೂರಾಟ ಮಾಡಿದ್ದ ಹಾಗೂ ಖಂಡ್ರೆ ಮನೆತನದ ಬದ್ಧವೈರಿ ಎನಿಸಿದ್ದ ಹಾಜಿ ಮಿರ್ಜಾ ಫೈಜುಲ್ಲಾ ಬೇಗ್‌ನ ಪತ್ನಿಗೆ ತಮ್ಮ ಮನೆಯಲ್ಲಿಯೇ ಆಶ್ರಯ ಕಲ್ಪಿಸಿಕೊಟ್ಟು ಮಾನವೀಯತೆ ಮೆರೆದರು. ಕೆಲವು ಕಿಡುಗೇಡಿಗಳು ಖಂಡ್ರೆಯವರ ಮನೆ ಹತ್ತಿರವಿದ್ದ ಗುಲಾಮ್ ಮೆಹಬೂಬ್ ವಕೀಲರ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರಕ್ಕೆ ಪ್ರಯತ್ನಿಸುತ್ತಿದ್ದಾಗ ಖಂಡ್ರೆಯವರು ಗಾಳಿಯಲ್ಲಿ ಗುಂಡು ಹಾರಿಸಿ ಆಗಬಹುದಾದ ಅಚಾತುರ್ಯ ತಡೆಗಟ್ಟಿದ್ದಾರೆ. ಇಂತಹ ಹಲವಾರು ಘಟನೆಗಳು ಅವರ ಭ್ರಾತೃತ್ವ ಭಾವನೆಗೆ ಹಿಡಿದ ಕನ್ನಡಿಗಳಾಗಿವೆ. ಜಾತಿ-ಮತಗಳೆಂಬ ಭೇದಭಾವ ಮಾಡದೆ ಸಮಾಜದ ಎಲ್ಲ ಹೆಣ್ಣುಮಕ್ಕಳನ್ನು ಪೂಜ್ಯತೆಯಿಂದ ಗೌರವಿಸಿದ್ದರಿಂದಲೇ ಇವತ್ತಿಗೂ ಭೀಮಣ್ಣವನರ ಬಗ್ಗೆ ಎಲ್ಲ ಹೆಣ್ಣುಮಕ್ಕಳಿಗೂ ಅಪಾರವಾದ ಗೌರವ ಭಾವವಿದೆ.

***

೨. ಕರ್ನಾಟಕ ಏಕೀಕರಣದ ರೂವಾರಿ

ಪೂಜ್ಯ ಶ್ರೀ ಡಾ. ಚೆನ್ನಬಸವ ಪಟ್ಟದ್ದೇವರು, ಜಯದೇವಿತಾಯಿ ಲಿಗಾಡೆ, ಪ್ರಭುರಾವ ಕಂಬಳಿವಾಲೆ ಮಾರ್ಗದರ್ಶನದಲ್ಲಿ ಭೀಮಣ್ಣ ಖಂಡ್ರೆಯವರು ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಪಾಲ್ಗೊಳ್ಳಲು ಸಿದ್ಧರಾದರು. ೧೯೫೪ರಲ್ಲಿ ಭಾಲ್ಕಿ ತಾಲೂಕಿನ ಕುರುಬಖೇಳಗಿ ಗ್ರಾಮದಲ್ಲಿ ಕನ್ನಡ ನಾಡು-ನುಡಿಯ ಸಂರಕ್ಷಣೆ ಮತ್ತು ಕರ್ನಾಟಕ ಏಕೀಕರಣಕ್ಕೆ ಹೋರಾಡುವ ದೀಕ್ಷೆ ಸ್ವೀಕರಿಸಿದರು. ಕನ್ನಡಕ್ಕಾಗಿ ತನು ಮನ ಧನವನ್ನರ್ಪಿಸುವ ಅಗ್ನಿದೀಕ್ಷೆಯನ್ನು ಪಡೆದುಕೊಂಡರು. ಅವರಲ್ಲಿದ್ದ ಅಂತಃಶಕ್ತಿಗೆ ಸೊಲ್ಲಾಪುರದ ಜಯದೇವಿತಾಯಿ ಲಿಗಾಡೆ ಮತ್ತು ಚೆನ್ನಬಸವ ಪಟ್ಟದ್ದೇವರು ಪ್ರೇರಣೆಯಾಗಿದ್ದರು. ಅಂದಿನಿಂದ ಇಂದಿನವರೆಗೂ ಆ ದೀಕ್ಷೆಯನ್ನು ನಿರಂತರವಾಗಿ ಪಾಲಿಸಿಕೊಂಡು ಬರುತ್ತಿದ್ದಾರೆ. ಕನ್ನಡ ನಾಡು ನುಡಿಗೆ ಧಕ್ಕೆಯಾದರೆ ಉರಿದೇಳುತ್ತಾರೆ! ನೂರರ ಸಂಭ್ರಮದಲ್ಲಿರುವ ಅವರು ಅರಳುಹುರಿದಂತೆ ಈಗಲೂ ಮಾತನಾಡುತ್ತಾರೆ. ಆರ್.ವಿ. ಬೀಡಪ ನೇತೃತ್ವದಲ್ಲಿ 'ಕರ್ನಾಟಕ ಹೋರಾಟ ಸಮಿತಿ'ಯನ್ನು ಹುಟ್ಟುಹಾಕಿ, ಅದರ ಕಾರ್ಯದರ್ಶಿಗಳಾಗಿ ಸಲ್ಲಿಸಿದ ಸೇವೆ ಅವಿಸ್ಮರಣೀಯವಾಗಿದೆ.

ಕೇಂದ್ರ ಸರ್ಕಾರವು ೧೯೫೩ರಲ್ಲಿ ಫಜಲ್ ಅಲಿಯವರ ಅಧ್ಯಕ್ಷತೆಯಲ್ಲಿ ಹೃದಯನಾಥ ಕುಂಜ್ರು, ಕೆ.ಎಂ. ಪಣಿಕ್ಕರ್ ಸದಸ್ಯರಾಗಿದ್ದ ರಾಜ್ಯ ಪುನರ್ವಿಂಗಡಣಾ ಆಯೋಗ(ಎಸ್.ಆರ್.ಸಿ.)ವನ್ನು ನೇಮಿಸಿತು. ಆ ಫಜಲ್ ಅಲಿ ಆಯೋಗವು

ಸರ್ವೇಕ್ಷಣ ಕಾರ್ಯಕ್ಕೆ ಬೀದರಿಗೆ ಬಂದಿತು. ಪ್ರಜಾಸಮಾಜವಾದಿ ಪಕ್ಷದ ಮುಖಂಡ ಆರ್.ವಿ. ಬೀಡಪ ಮತ್ತು ಅವರ ಸ್ನೇಹಿತರನ್ನು ಭೇಟಿ ಮಾಡಿತು. ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದಂತೆ ಎಲ್ಲ ಐತಿಹಾಸಿಕ ವಿವರಗಳನ್ನು, ಸಮರ್ಥ ಪುರಾವೆಗಳನ್ನು ಆಯೋಗದವರ ಮುಂದಿಟ್ಟರು.

ಮೈಸೂರು ರಾಜ್ಯದ ಅಂದಿನ ಮುಖ್ಯಮಂತ್ರಿಗಳಾಗಿದ್ದ ಎಸ್. ನಿಜಲಿಂಗಪ್ಪನವರು ೧೯೫೪ರ ಜೂನ್ ೨೫ರಂದು ಕರ್ನಾಟಕ ಏಕೀಕರಣ ಹೋರಾಟ ಸಮಿತಿಯ ಅಧ್ಯಕ್ಷರಾಗಿದ್ದ ಆರ್. ವಿ. ಬೀಡಪ ಅವರಿಗೆ ಪತ್ರವೊಂದನ್ನು ಬರೆದು "ರಾಜ್ಯ ಪುನರ್ ವಿಂಗಡಣಾ ಸಮಿತಿ ಸದ್ಯದಲ್ಲೆ ಬೀದರ, ರಾಯಚೂರು, ಕಲ್ಬುರ್ಗಿ ಜಿಲ್ಲೆಗಳಿಗೆ ಭೇಟಿ ಕೊಡಲಿದೆ. ಮುಂದೆ ನಿರ್ಮಾಣಗೊಳ್ಳಲಿರುವ ಕರ್ನಾಟಕ ರಾಜ್ಯಕ್ಕೆ ಈ ಜಿಲ್ಲೆಗಳನ್ನು ಸೇರಿಸುವಂತೆ, ಈ ಮೂರು ಜಿಲ್ಲೆಯವರ ಮನಸ್ಸಿನಲ್ಲಿರುವ ಸಂದೇಹಗಳನ್ನು ನಿವಾರಿಸಬೇಕೆಂದು, ಏಕೀಕರಣ ಪರವಾದ ಜನಾಭಿಪ್ರಾಯವನ್ನು ಸಮಿತಿಯ ಮುಂದೆ ಚೆನ್ನಾಗಿ ಬಿಂಬಿಸಬೇಕೆಂದು" ಸೂಚಿಸಿದರು. ಈ ಕುರಿತು ತುರ್ತಾಗಿ ಆರ್.ವಿ. ಬಿಡಪ್, ಭೀಮಣ್ಣ ಖಂಡ್ರೆಯವರು ಕಂಬಳಿಬಾಬಾ ಅವರ ಜೊತೆ ಸುದೀರ್ಘವಾಗಿ ಚರ್ಚಿಸಿ ಅದಕ್ಕೆ ಬೇಕಾಗುವ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡರು.

ಮುಂಬೈ ಕರ್ನಾಟಕದಲ್ಲಿ ಏಕೀಕರಣಕ್ಕಾಗಿ ಹೋರಾಟ ಮಾಡುತ್ತಿದ್ದ ಹಳ್ಳಿಕೇರಿ ಗುದ್ಲೆಪ್ಪ, ಎಸ್. ಆರ್. ಕಂಠಿಯವರು ಸಹ ಫಜಲ್ ಅಲಿ ಕಮೀಷನ್ ಎದುರಿಗೆ ಸಮರ್ಥವಾಗಿ ವಾದ ಮಂಡಿಸಲು ಬೀದರಿಗೆ ಆಗಮಿಸಿದ್ದರು. ಆಗ ಅವರಿಗೆ ಬೀದರ ಜಿಲ್ಲೆಯನ್ನು ಹೈದ್ರಾಬಾದ ರಾಜ್ಯದಿಂದ ಕರ್ನಾಟಕಕ್ಕೆ ಸೇರಿಸಲು ಒತ್ತಾಯಿಸಿ, ನೂರಾರು ಜನರ ಸಹಿ ಸಂಗ್ರಹ ಮಾಡಿದ್ದ ಮನವಿ ಪತ್ರಗಳನ್ನು ಸಲ್ಲಿಸಿದರು. ಹಾಗಾಗಿ ಇದೊಂದು ರಾಜಕೀಯ ಹೋರಾಟವಾಗಿ ಪರಿಣಮಿಸಿತು. ಸಮಗ್ರ ಕರ್ನಾಟಕದ ಬುನಾದಿಗೆ ಕಾರಣವಾಯಿತು.

ಗಡಿನಾಡಿನ ಕೆಲ ಮುಖಂಡರು ಅನೇಕ ರೀತಿಯಲ್ಲಿ ಕಿತಾಪತಿ ಮಾಡುತ್ತಿದ್ದರು. ಭಾಲ್ಕಿ, ಔರಾದ ತಾಲೂಕಾಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಮರಾಠಿಗರು ಹುಯಿಲೆಬ್ಬಿಸುತ್ತಿದ್ದರು. ಅಂತಹ ವಿವರಗಳನ್ನೊಳಗೊಂಡ ವಿಷಯವು ಪ್ರಭುರಾವಜಿಯವರ ಆಯ್ದ ಪತ್ರ ವ್ಯವಹಾರಗಳಿಂದ ಗೊತ್ತಾಗುತ್ತದೆ. ಕಮಲನಗರದ ಮಾಧವರಾವ ಪಾಟೀಲ, ನಾಗಶೆಟ್ಟಿ ಮಾಲಿಪಾಟೀಲ, ಶಾಂತಪ್ಪಾ ಖತಗಾಂವ, ಸಿದ್ಧಪ್ಪಾ ಮಿರ್ಚೆ, ಗುರಪ್ಪಾ ಟೋಣ್ಣೆ, ಅಪ್ಪಾರಾವ ಪಾಟೀಲ ಬಾಳೂರು (ಬಾಲೂರು) ಮೊದಲಾದವರ ಸಹಿ ಇರುವ ದಿನಾಂಕ ೧೧ ಮೇ ೧೯೫೭ರಲ್ಲಿ ಕಂಬಳಿಬಾಬಾ ಅವರಿಗೆ ಬರೆದ ಮರಾಠಿ ಪತ್ರದ ಕನ್ನಡ ಅನುವಾದ ಹೀಗಿದೆ: "ತಮಗೆ ಈ ಎಲ್ಲ ವಿಷಯ ಗೊತ್ತಿದೆ. ಈ ಭಾಗದಲ್ಲಿ ಮಹಾರಾಷ್ಟ್ರಿಯನ್ನರು ಎಷ್ಟೆಲ್ಲ ಗಡಬಡ ಮಾಡುತ್ತಿದ್ದಾರೆಂಬುದು. ಕೆಲ ಮರಾಠಿ ಜನರು ಕನ್ನಡದ ಕಟ್ಟಾ ವೈರಿಗಳಾಗಿದ್ದಾರೆ. ಸಂತಪೂರ, ಭಾಲ್ಕಿ ತಾಲೂಕಾಗಳು ಮಹಾರಾಷ್ಟ್ರದಲ್ಲಿ ಸೇರ್ಪಡೆಗೊಂಡಿವೆ ಎಂದು ಬಳವಂತರಾವ, ಬಾಪೂರಾವ ಏಕಂಬೇಕರ್ ಮೊದಲಾದ ಜನ ಇಲ್ಲಿ ಪ್ರಚಾರ ಮಾಡುತ್ತಿರುವುದರಿಂದ ನಾವು ಭಯಭೀತರಾಗಿದ್ದೇವೆ. ಇನ್ನೂ ಏನೂ ಆಗಿರದ ಕಾರಣ ಅವರು ಲಿಂಗಾಯತ ಜನರಿಗೆ ಬಹಳ ತೊಂದರೆ ಕೊಡುತ್ತಿದ್ದಾರೆ. ಒಂದು ವೇಳೆ "ಝೂನಲ್ ಕೌನ್ಸಿಲ್"ನಲ್ಲಿ ಮೈಸೂರು ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಎಸ್. ನಿಜಲಿಂಗಪ್ಪ ಸಾಹೇಬರು ಸಂತಪೂರು, ಭಾಲ್ಕಿ ತಾಲೂಕಾಗಳನ್ನು ಮುಂಬಾಯಿಗೆ ಕೊಟ್ಟರೆ ನಮ್ಮ ಜೀವನ ಕಠಿಣವಾಗುತ್ತದೆ. ಅವರ ಸಂಖ್ಯೆ ಕಡಮೆಯಾಗಿದ್ದರೂ ಗುಂಡಾಗರ್ದಿಯಲ್ಲಿ ಮುಂದಿದ್ದಾರೆ. ಆದ ಕಾರಣ ತಾವು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಈ ವಿಷಯವನ್ನು ತಿಳಿಸಿರಿ. ನಮ್ಮ ಜೀವ, ಆಸ್ತಿ-ಪಾಸ್ತಿಗೆ ತೊಂದರೆಯಾಗದಂತೆ ರಕ್ಷಿಸಲು ಮುಂದಾಗಬೇಕೆಂದು ತಮ್ಮಲ್ಲಿ ಕೈ ಜೋಡಿಸಿ ಪ್ರಾರ್ಥಿಸಿಕೊಳ್ಳುತ್ತೇವೆ." ಪ್ರಣಾಮಗಳೊಂದಿಗೆ ತಮ್ಮವರಾದ. ....

ಮರಾಠಿಗರ ಉಪಟಳ, ಕನ್ನಡ ಭಾಷಾ ವಿರೋಧಿ ನೀತಿ ಮೊದಲಾದ ವಿಷಯಗಳ ಕುರಿತು ಪ್ರಭುರಾವಜಿಯವರು ಎಸ್. ನಿಜಲಿಂಗಪ್ಪ, ಅಂದಿನ ಗೃಹಮಂತ್ರಿ ಶ್ರೀ ವೀರೇಂದ್ರ ಪಾಟೀಲ ಅವರಿಗೆ ತಿಳಿಸಿ ಸೂಕ್ತಕ್ರಮ ಕೈಗೊಳ್ಳುವಂತೆ ವಿನಂತಿಸಿಕೊಂಡರು. ಈ ವಿಷಯದ ಹೆಚ್ಚಿನ ಮಾಹಿತಿ, ಜನಾಭಿಪ್ರಾಯಗಳನ್ನು ಸಂಗ್ರಹಿಸಲು ತಾವು ಬೀದರ ಜಿಲ್ಲೆಗೆ ಬರಬೇಕೆಂದು ಆಮಂತ್ರಣ ನೀಡಿದರು. ಇವರ ಆಗ್ರಹಕ್ಕೆ ಮಣಿದು, ಕೊಟ್ಟ ಮಾತಿಗೆ ತಪ್ಪದೆ ಬೀದರ ಜಿಲ್ಲೆಗೆ ವೀರೇಂದ್ರ ಪಾಟೀಲರು ಬಂದಾಗ ಅವರನ್ನು ಭವ್ಯವಾದ ರೀತಿಯಲ್ಲಿ ಸ್ವಾಗತಿಸಿ, ಗಡಿನಾಡು ಕನ್ನಡಿಗರ ಐಕ್ಯತೆ, ಭಾಷಿಕ ಅಭಿಮಾನವನ್ನು ತೋರಿಸಿಕೊಟ್ಟರು. ದಿನಾಂಕ ೧೯೫೭ರ ಮೇ ೧೬ರಂದು ಭಾಲ್ಕಿಯಲ್ಲಿ ನಡೆದ ಕರ್ನಾಟಕ ಏಕೀಕರಣ ಸಭೆಯಲ್ಲಿ "ಮರಾಠಿ ಜನರ ದಬ್ಬಾಳಿಕೆಯನ್ನು ತಡೆಗಟ್ಟಬೇಕು. ಗಡಿ ಕನ್ನಡಿಗರಿಗೆ ಸೂಕ್ತ ರಕ್ಷಣೆ ನೀಡಬೇಕು. ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಮೊದಲಾದ ಜೊತೆಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕ್ರಮಕೈಗೊಳ್ಳಬೇಕು. ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿ ರೇಖೆಯನ್ನು ಭಾಷೆ ಆಧಾರದ ಮೇಲೆ, ಜನತೆಯ ಒಟ್ಟು ಅಭಿಪ್ರಾಯದ ಮೇರೆಗೆ ಎಳೆಯಬೇಕೆಂದು ತಿಳಿಸಿ, ಆ ಬಗ್ಗೆ ಸವಿಸ್ತಾರವಾದ ವರದಿಯನ್ನು ಅವರ ಮುಂದಿಟ್ಟರು. ಸಾರ್ವಜನಿಕ ಸಭೆಯ ಬಳಿಕ ಮತ್ತೊಮ್ಮೆ ಖುದ್ದಾಗಿ ಭೇಟಿ ಮಾಡಿ ಸೂಕ್ತಕ್ರಮಗಳನ್ನು ಕೈಗೊಳ್ಳಬೇಕೆಂದು ಮನವಿ ಮಾಡಿಕೊಂಡರು.

ಆರ್.ವಿ. ಬೀಡಪ್, ಪ್ರಭುರಾವ ಕಂಬಳಿವಾಲೆ, ಭಾಲ್ಕಿ ಶ್ರೀಗಳು, ಭೀಮಣ್ಣ ಖಂಡ್ರೆಯವರು ತಮ್ಮ ನೂರಾರು ಬೆಂಬಲಿಗರೊಂದಿಗೆ ಭಾಲ್ಕಿಯಲ್ಲಿ 'ರೈಲು ರೋಕೋ' ಆಂದೋಲನ ನಡೆಸಿದರು. ಕೇಂದ್ರ ಸರ್ಕಾರದ ಮೇಲೆ ಪ್ರಭಾವ ಬೀರುವಲ್ಲಿ ಇದು ಸಹಾಯಕವಾಯಿತು. ಇದಕ್ಕೆ ಪ್ರತಿಕಾರವಾಗಿ ಹುಟ್ಟಿಕೊಂಡ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಗಡಿಗ್ರಾಮಗಳ ಕನ್ನಡಿಗರ ಮೇಲೆ ದೌರ್ಜನ್ಯ ಎಸಗಲು ಪ್ರಾರಂಭಿಸಿದರು. ಕನ್ನಡದ ವಿದ್ಯಾರ್ಥಿಗಳ ಮೇಲೆ ಹಲ್ಲೆ

ಮಾಡಿದರು. ಇದಕ್ಕೆ ಪ್ರತಿಯಾಗಿ ಖಂಡ್ರೆಯವರು ನೂರಾರು ಯುವಕರನ್ನು ಲಾರಿಯಲ್ಲಿ ಕಮಲನಗರಕ್ಕೆ ಕರೆದುಕೊಂಡು ಹೋಗಿ, ಮರಾಠಾ ಮುಖಂಡರನ್ನು ಸದೆಬಡೆದರು. ಮರಾಠಿ ದುರಾಭಿಮಾನಿಗಳನ್ನು ಹತ್ತಿಕ್ಕಿ ಕನ್ನಡಿಗರ ಸ್ವಾಭಿಮಾನವನ್ನು ತೋರಿಸಿಕೊಟ್ಟರು.

ಭಾಷಾವಾರು ಪ್ರಾಂತಗಳ ವಿಂಗಡಣೆಯ ಕಾಲದಲ್ಲಿ ಬೀದರನ್ನು ಮಹಾರಾಷ್ಟ್ರಕ್ಕೊ, ಆಂಧ್ರಪ್ರದೇಶಕ್ಕೊ ಸೇರಿಸುವ ಹುನ್ನಾರ ನಡೆದಿತ್ತು. ಆ ಸಂದರ್ಭದಲ್ಲಿ ಡಾ. ಚೆನ್ನಬಸವ ಪಟ್ಟದ್ದೇವರು, ಆರ್.ವಿ. ಬೀಡಪ, ಪ್ರಭುರಾವ ಕಂಬಳಿವಾಲೆ, ಭೀಮಣ್ಣ ಖಂಡ್ರೆ, ಸಿದ್ದಲಿಂಗಪ್ಪ ಕಾಕನಾಳೆ, ಮಹಾದೇವಪ್ಪ ಮೀಸೆ, ಹುಮನಾಬಾದಿನ ವಿ.ಎನ್. ಪಾಟೀಲ, ಮುಧೋಳದ ನೀಲಕಂಠರಾವ ಬಸನಾಳೆ, ಬಾಬುರಾವ ವಾರದ ಅವರಂತಹ ಅನೇಕ ಮಹನೀಯರ ನರನಾಡಿಗಳಲ್ಲಿ ಕನ್ನಡದ ರಕ್ತ ಜಾಗೃತವಾಯಿತು. ಕನ್ನಡಿಗರು ಬಹುಭಾಷಿಕರಾಗಿದ್ದರೂ ಅನ್ಯ ಭಾಷಿಕರ ಅಧೀನದಲ್ಲಿರುವುದು ಸರಿಯಲ್ಲ ಎಂದು ಅವರು ಭಾವಿಸಿದರು. ಅದಕ್ಕಾಗಿ ಬೀಡಪ, ಸಿದ್ಧಲಿಂಗಪ್ಪ ಕಾಕನಾಳೆ, ನೀಲಕಂಠರಾವ ಬಸನಾಳೆ, ವಿ.ಎನ್. ಪಾಟೀಲ ಸೇರಿದಂತೆ ಕೆಲವು ಮುಖಂಡರೊಂದಿಗೆ ಒಂದು ಶಿಷ್ಠಮಂಡಲವನ್ನು ದೆಹಲಿಗೆ ತೆಗೆದುಕೊಂಡು ಹೋಗಿ ಅಲ್ಲಿ ಪಂಡಿತ ಜವಾಹರಲಾಲ ನೆಹರು, ಗೃಹಸಚಿವ ಗೋವಿಂದ ವಲ್ಲಭಪಂತ, ಶಿಕ್ಷಣ ಸಚಿವ ಮೌಲಾನಾ ಅಬುಲ್ ಕಲಾಂ ಆಜಾದ್ ಮತ್ತು ಹೈದ್ರಾಬಾದ ಕರ್ನಾಟಕ ಪ್ರದೇಶದ ಅನೇಕ ಲೋಕಸಭಾ ಸದಸ್ಯರನ್ನು ಸಂಪರ್ಕಿಸಿ ಇಲ್ಲಿಯ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಟ್ಟರು.

ರಾಜ್ಯ ಪುನರ್ವಿಂಗಡಣಾ ಆಯೋಗದ ವರದಿ ಜಾರಿಯಾದ ನಂತರ ಮಹಾರಾಷ್ಟ್ರ ಸರ್ಕಾರವು ಕರ್ನಾಟಕ ಗಡಿಭಾಗದ ೮೦೦ ಗ್ರಾಮಗಳಲ್ಲಿ ಮರಾಠಿಗರು ಹೆಚ್ಚಾಗಿದ್ದಾರೆ. ಆ ಎಲ್ಲ ಗ್ರಾಮಗಳನ್ನು ಮಹಾರಾಷ್ಟ್ರದಲ್ಲಿ ಸೇರಿಸಬೇಕೆಂದು ದಿನಾಂಕ : ೨೬.೦೬.೧೯೫೭ರಂದು ಕೇಂದ್ರ ಸರ್ಕಾರಕ್ಕೆ ಮನವಿಪತ್ರ ಸಲ್ಲಿಸಿತು.

ಈ ಬಗ್ಗೆ ಪರಿಶೀಲಿಸಲು ತಮ್ಮ ತಮ್ಮ ಪ್ರತಿನಿಧಿಗಳನ್ನು ನೇಮಿಸಲು ಶಿಫಾರಸ್ಸು ಮಾಡಿದಾಗ ಮಹಾರಾಷ್ಟ್ರ ಸರ್ಕಾರವು ಶ್ರೀ ಹರಿವಿನಾಯಕ ಪಾಟಸಕರ್, ಎಂ.ಡಿ. ಭಟ್‌ರನ್ನು ನೇಮಕ ಮಾಡಿತ್ತು. ಪಾಟಸಕರ್‌ರಿಂದ ತಮಗೆ ಹೆಚ್ಚಿನ ಅನುಕೂಲವಾಗುವುದೆಂದು ಮಹಾರಾಷ್ಟ್ರ ಸರ್ಕಾರವು ಭಾವಿಸಿತ್ತು. ಕರ್ನಾಟಕ ಸರ್ಕಾರವು ಎಸ್. ಚೆನ್ನಯ್ಯ, ಎಸ್.ಎಸ್. ಮಳೀಮಠರನ್ನು ನೇಮಿಸಿತ್ತು. ಈ ನಾಲ್ವರು ಒಂದೆರಡು ಸಭೆ ನಡೆಸಿ ಸಮನ್ವಯ ಸಾಧಿಸಲು ಪ್ರಯತ್ನಿಸಿದರು. ಆದರೆ ಪಾಟಸಕರ್ ಗಡಿಗ್ರಾಮಗಳಿಗೆ ಸಂದರ್ಶನ ನೀಡಿ ಜನರ ಅಭಿಪ್ರಾಯ ಸಂಗ್ರಹಿಸಲು ಉತ್ಸುಕರಾಗಿದ್ದರು. ಆದರೆ ಭಾಷಾವಾರು ಪ್ರಾಂತ ರಚನೆ ಸಂದರ್ಭದಲ್ಲಿ ಉಂಟಾದ ಭಾಷಿಕ ಗಲಭೆಗಳು ಮತ್ತೆ ಸಂಭವಿಸುತ್ತವೆ. ಸಮಾಜದಲ್ಲಿ ಅಶಾಂತಿ ಮೂಡಬಹುದಾದ ಸಂಭವವಿರುವುದರಿಂದ ಸಂದರ್ಶನಕ್ಕೆ ಮಳೀಮಠ ನಿರಾಕರಿಸಿದರು. ಅವರನ್ನು ತಡೆಯಲು ಪ್ರಯತ್ನಿಸಿದರು. ಆದರೆ ಪಾಟಸಕರ್ ಯಾರ ಮಾತನ್ನು ಕೇಳಲಿಲ್ಲ.

ಹಠಮಾರಿ ಹಾಗೂ ಕನ್ನಡದ ವಿರೋಧಿಯಾಗಿದ್ದ ಎಚ್.ವಿ. ಪಾಟಸಕರ್‌ರು ೧೯೬೭ನೆಯ ಎಪ್ರಿಲ್ ಅಥವಾ ಮೇ ತಿಂಗಳಿನಲ್ಲಿ ಸಮೀಕ್ಷೆಗಾಗಿ ಭಾಲ್ಕಿಗೆ ಭೇಟಿ ನೀಡಿದರು. ಭೀಮಣ್ಣ ಖಂಡ್ರೆ, ಸಿದ್ಧಲಿಂಗಪ್ಪ ಕಾಕನಾಳೆ, ಆರ್.ವಿ. ಬೀಡಪ ಸೇರಿದಂತೆ ಸಾವಿರಾರು ಜನರು ಪಾಟಸಕರ್ ವಿರುದ್ಧ ಘೋಷಣೆ ಕೂಗಿದರು. ಪಾಟಸಕರ್ ತಲೆಯ ಮೇಲಿಂದ ಟೋಪಿಯನ್ನು ತೆಗೆದುಕೊಂಡು ಗಾಳಿಯಲ್ಲಿ ಹಾರಿಸಿದರು. ಇದರಿಂದ ಅವಮಾನಿತರಾಗಿ ಅವರು ಹಿಂದಿರುಗಿದರು. ಈ ಆಪಸಿ ಕಮಿಟಿಯ ಸದಸ್ಯರು ಯಾವುದೇ ನಿರ್ಣಯ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ. ಪಾಟಸಕರ್ ಅವಮಾನಕ್ಕೆ ಖಂಡ್ರೆಯವರೆ ನೇರಕಾರಣವೆಂದು ಪೋಲೀಸರು ಅವರನ್ನು ಬಂಧಿಸಿ ಕೇಸು ದಾಖಲಿಸಿದರು. ಮುಂದೆ ಬಿ.ಡಿ. ಜತ್ತಿಯವರು ಕರ್ನಾಟಕ ಮುಖ್ಯಮಂತ್ರಿಯಾಗಿದ್ದಾಗ ಭೀಮಣ್ಣ ಖಂಡ್ರೆಯವರ ಮೇಲೆ ದಾಖಲಿಸಿದ್ದ ಕೇಸನ್ನು ಹಿಂತೆಗೆದುಕೊಂಡರು. ಒಂದು ವೇಳೆ ಭೀಮಣ್ಣ

ಖಂಡ್ರೆ ಮತ್ತು ಅವರ ಸ್ನೇಹಿತರು ಪಾಟಸಕರ್, ಭಟ್‌ರು ಭಾಲ್ಕಿಗೆ ಬಂದಾಗ ಮೃದುಧೋರಣೆ ತಾಳಿದ್ದರೆ, ತಮ್ಮ ಪಾಡಿಗೆ ತಾವು ಸುಮ್ಮನೆ ಕುಳಿದುಕೊಂತರೆ ಬೀದರ ಜಿಲ್ಲೆಯ ಅನೇಕ ಗ್ರಾಮಗಳು ಮಹಾರಾಷ್ಟ್ರದ ಪಾಲಾಗುತ್ತಿದ್ದವೇನೋ?

ಖಂಡ್ರೆಯವರ ಜೊತೆಗೆ ಇಲ್ಲಿಯವರು ನಿರಂತರ ಹೋರಾಟ ಮಾಡಿದ್ದರಿಂದ ಬೀದರ ಒಂದು ಜಿಲ್ಲೆಯಾಗಿ ಉಳಿದು ಕರ್ನಾಟಕದ ಕಿರೀಟವಾಗಿ ಗುರುತಿಸಿಕೊಂಡಿತು. ಖಂಡ್ರೆಯವರ ಅಖಂಡ ಕರ್ನಾಟಕ ನಿರ್ಮಾಣದ ಹಿಂದಿನ ಶ್ರಮವನ್ನು ಗುರುತಿಸಿ ಕರ್ನಾಟಕ ಸರ್ಕಾರವು ೨೦೦೬ ನವ್ಹಂಬರ್ ೧ರ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಶ್ರೀ ಖಂಡ್ರೆಯವರಿಗೆ "ಕರ್ನಾಟಕ ಏಕೀಕರಣ ಪ್ರಶಸ್ತಿ" ನೀಡಿ ಗೌರವಿಸಿತು.

***

೩. ರಾಜಕೀಯ ಶಕ್ತಿಯಾಗಿ ಖಂಡ್ರೆ

೧೯೪೯-೫೦ರಲ್ಲಿ ಆಚಾರ್ಯ ನರೇಂದ್ರದೇವ, ಜಯಪ್ರಕಾಶ ನಾರಾಯಣ, ರಾಮಮನೋಹರ ಲೋಹಿಯಾ, ಅಶೋಕ ಮೇಹ್ತಾ ಅವರ ಪ್ರಭಾವದಿಂದಾಗಿ ಖಂಡ್ರೆಯವರು ಪ್ರಜಾ ಸಮಾಜವಾದಿ ಪಕ್ಷದ ಕಾರ್ಯಕರ್ತರಾಗಿ ರಾಜಕೀಯದಲ್ಲಿ ಧುಮುಕಿದರು. ಪ್ರಭುರಾವ ಕಂಬಳಿವಾಲೆಯವರು ಪ್ರಜಾ ಸಮಾಜವಾದಿ ಪಕ್ಷದ ನೇತಾರರಾಗಿದ್ದರು. ಪ್ರಾರಂಭದಲ್ಲಿ ಕಂಬಳಿಬಾಬಾ ಅವರ ಮಾರ್ಗದರ್ಶನದಲ್ಲಿ ಆರ್.ವಿ. ಬೀಡಪ್ ಅವರು ಅಧ್ಯಕ್ಷರಾಗಿ, ಶ್ರೀ ಭೀಮಣ್ಣ ಖಂಡ್ರೆಯವರು ಜಿಲ್ಲಾ ಕಾರ್ಯದರ್ಶಿಗಳಾಗಿ ನಿಯುಕ್ತಿಗೊಂಡು ಕೆಲಸ ಮಾಡಿದರು.

೧೯೫೩ರಲ್ಲಿ ಭಾಲ್ಕಿ ಪುರಸಭೆಯ ಮೊದಲ ಚುನಾಯಿತ ಅಧ್ಯಕ್ಷರಾಗಿ ಪುರಸಭೆಯ ಕಾರ್ಯ ಚಟುವಟಿಕೆಗಳಿಗೆ ಭದ್ರವಾದ ಅಡಿಪಾಯ ಹಾಕಿದರು. ಗಾಂಧಿಗಂಜ್ ವಿಸ್ತಾರ, ರಸ್ತೆ ಅಗಲೀಕರಣ, ದಾರಿದೀಪ ಮುಂತಾದ ಅಭಿವೃದ್ಧಿಪರ ಚಟುವಟಿಕೆಗಳನ್ನು ಕೈಗೊಂಡು ಜನಮೆಚ್ಚುಗೆಗೆ ಪಾತ್ರರಾದರು. ಪುರಸಭೆ ಅಧ್ಯಕ್ಷರಾಗಿ ಮಾಡಿದ್ದ ಸೇವಾ ಕಾರ್ಯಗಳ ಆಧಾರದ ಮೇಲೆ ವಿಧಾನ ಸಭೆ ಚುನಾವಣೆಗೆ ಸ್ಪರ್ಧಿಸಲು ಅಣಿಯಾದರು.

೧೯೫೭ನೆಯ ಸಾಲಿನಲ್ಲಿ ಮೊದಲನೆಯ ನವಮೈಸೂರು ವಿಧಾನಸಭೆಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಔರಾದ-ಭಾಲ್ಕಿ ಸಂಯುಕ್ತ ಕ್ಷೇತ್ರದಿಂದ

ಸ್ಪರ್ಧಿಸಿ ಸೋತರು. ೧೯೬೨ರಲ್ಲಿ ಪ್ರಜಾ ಸಮಾಜವಾದಿ ಪಕ್ಷದಿಂದ ಭಾಲ್ಕಿ ವಿಧಾನ ಸಭಾ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾದರು. ಅಶೋಕ್ ಮೆಹ್ತಾ ನೇತೃತ್ವದಲ್ಲಿನ ಪ್ರಜಾ ಸಮಾಜವಾದಿ ಪಕ್ಷವು ಕಾಂಗ್ರೆಸ್ಸಿನಲ್ಲಿ ವಿಲೀನಗೊಂಡಿದ್ದರಿಂದ ಆ ಪಕ್ಷದ ಶಾಸಕರಾಗಿದ್ದ ಭೀಮಣ್ಣ ಖಂಡ್ರೆ, ಕೆ.ಎಚ್. ರಂಗನಾಥ, ಬಿ.ಎಲ್. ಗೌಡ, ಕೆ. ಲಕ್ಕಪ್ಪ ಮುಂತಾದ ಹದಿನಾರು ಜನ ಶಾಸಕರು ಕಾಂಗ್ರೆಸ್ ಪಕ್ಷ ಸೇರ್ಪಡೆಗೊಂಡರು. ೧೯೬೭, ೧೯೭೮, ೧೯೮೩ರಲ್ಲಿ ಭಾಲ್ಕಿ ಕ್ಷೇತ್ರದಿಂದ ಶಾಸಕರಾಗಿ ಮಹತ್ವದ ಕೆಲಸ ಮಾಡಿದರು. ಶಾಸನ ಸಭೆಯಲ್ಲಿ ಸುಮ್ಮನೆ ಕುಳಿತುಕೊಳ್ಳದೆ ಮಹತ್ವದ ಚರ್ಚೆಗಳಲ್ಲಿ ಪಾಲ್ಗೊಂಡು ಜನತೆಯ ಆಶೋತ್ತರಗಳಿಗೆ ಸ್ಪಂದಿಸಿ, ಜನನಾಯಕರಾಗಿ ಮೆರೆದರು. ೧೯೬೮ರ ವೇಳೆಗಾಗಲೇ ಬೀದರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಆಯ್ಕೆಗೊಂಡು ಅವರು ಜಿಲ್ಲೆಯ ತುಂಬೆಲ್ಲಾ ಕಾಂಗ್ರೆಸ್ ಭದ್ರವಾಗಿ ನೆಲೆನಿಲ್ಲುವಂತೆ ಮಾಡಿದರು. ಕಾಂಗ್ರೆಸ್ ಕಾರ್ಯಕರ್ತರ ಸಮರ್ಥ ಪಡೆಯನ್ನು ಸಿದ್ಧಪಡಿಸಿದರು.

೧೯೮೮ ಮತ್ತು ೧೯೯೪ರಲ್ಲಿ ಎಂ.ಎಲ್.ಸಿ. ಆಗಿ ಆಯ್ಕೆಯಾಗಿದ್ದರು. ಶಾಸನ ಸಭೆಯ ಹಲವಾರು ಸಮಿತಿಯ ಸದಸ್ಯರಾಗಿ, ಅಧ್ಯಕ್ಷರಾಗಿ, ಪಾರ್ಲಿಮೆಂಟರಿ ವ್ಯವಹಾರಗಳ ಅಧ್ಯಯನ ಸಂಸ್ಥೆಯ ಉಪಾಧ್ಯಕ್ಷರಾಗಿ, ಎಂ. ವೀರಪ್ಪ ಮೊಯಿಲಿ ಸಚಿವ ಸಂಪುಟದಲ್ಲಿ ಸಾರಿಗೆ ಸಚಿವರಾಗಿ ೧೯೯೨ರಿಂದ ೧೯೯೪ರ ವರೆಗೆ ಕಾರ್ಯ ನಿರ್ವಹಿಸಿದ ಹೆಗ್ಗಳಿಕೆ ಅವರದು.

ತಮ್ಮ ಅಧಿಕಾರಾವಧಿಯಲ್ಲಿ ಹಿಂದುಳಿದ ಬೀದರ ಜಿಲ್ಲೆಯ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದರು. ಅವುಗಳಲ್ಲಿ ಕಾರಂಜಾ ನೀರಾವರಿ ಯೋಜನೆ ಪ್ರಮುಖವಾದುದು. ಬೀದರ ವಿಭಾಗೀಯ ರಸ್ತೆ ಸಾರಿಗೆ ಕಚೇರಿ ಸ್ಥಳಾಂತರ, ಖಾಸಗಿ ಸ್ವಾಮ್ಯದ ಬಸ್ಸುಗಳ ಓಡಾಟಕ್ಕೆ ನಿರ್ಬಂಧ, ನಕಲಿ ಬಸ್ ಚೀಟಿ ರಹಸ್ಯ ಬಯಲು, ಭಾಲ್ಕಿಯಲ್ಲಿ ಬಸ್ ಡಿಪೋ, ನೂರು ಹಾಸಿಗೆಗಳ ಆಸ್ಪತ್ರೆ, ಆರ್.ಟಿ.ಓ. ಕಚೇರಿ, ಹೆಚ್ಚುವರಿ ಪೊಲೀಸ್ ಠಾಣೆಯಂತಹ ಹಲವಾರು

ಜನೋಪಯೋಗಿ ಕಾರ್ಯ ಯೋಜನೆಗಳನ್ನು ಮಂಜೂರಿ ಮಾಡಿಸಿಕೊಂಡು ಈ ನೆಲದಲ್ಲಿ ಅನುಷ್ಠಾನಗೊಳಿಸಿದರು. ೧೯೮೦ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿ ಸಭೆಯ ಸದಸ್ಯರಾಗಿ, ಕಾರ್ಯದರ್ಶಿಗಳಾಗಿ ಆಯ್ಕೆಯಾಗಿದ್ದರು. ರೈತ ಸೆಲ್ ವಿಭಾಗದ ಸಂಚಾಲಕರಾಗಿ, ಮುಖ್ಯಸ್ಥರಾಗಿ ದುಡಿದಿರುವ ಅನುಭವ ಅವರಿಗಿದೆ.

ಪ್ರಾದೇಶಿಕ ಅಸಮತೋಲನವನ್ನು ತೊಡೆದುಹಾಕಲು ಹೈದ್ರಾಬಾದ ಕರ್ನಾಟಕವನ್ನು ಸಂವಿಧಾನದ ೩೭೧ನೆಯ ವಿಧಿಗೆ ಸೇರಿಸಬೇಕೆಂಬ ಹೋರಾಟ ಸಮಿತಿಯ ಗೌರವಾಧ್ಯಕ್ಷರಾಗಿ, ಸನ್ಮಾನ್ಯ ವೈಜಿನಾಥ ಪಾಟೀಲರ ಸಹವರ್ತಿಯಾಗಿ ಮಹತ್ವದ ಸೇವೆ ಸಲ್ಲಿಸಿದ್ದಾರೆ. ಅನೇಕ ಸಭೆ-ಸಮಾರಂಭ, ಜಾಗೃತಿ ಸಮಾವೇಶಗಳನ್ನು ಏರ್ಪಡಿಸಿ, ಅದರಲ್ಲಿ ಯಶಸ್ವಿಯಾಗಿದ್ದಾರೆ.

***

೪. ರೈತರ ಕ್ರಿಯಾಶಕ್ತಿ

ರಾಜ್ಯ ಪುನರ್ವಿಂಗಡಣಾ ಪೂರ್ವದಲ್ಲಿ ಅಂದರೆ ೧೯೪೫–೫೦ರ ಕಾಲಾವಧಿಯಲ್ಲಿ ಬೀದರ ಭಾಗವು ಹೈದ್ರಾಬಾದ ಪ್ರಾಂತದ ವೆಲ್ಲೋಡಿ ಸರಕಾರದ ಆಧೀನದಲ್ಲಿತ್ತು. ವೆಲ್ಲೋಡಿ ಸರಕಾರವು ಸರ್ಫ್–ಏ–ಖಾಸ್ ಕಂದಾಯ ವಲಯಕ್ಕೆ ಸೇರಿದ ಪ್ರದೇಶದಲ್ಲಿ ಪ್ರತಿ ಎಕರೆಗೆ ಮೂರು ರೂಪಾಯಿ ಕಂದಾಯವನ್ನು, ಜಾಹಗೀರು ಜಮೀನು ವಲಯಕ್ಕೆ ಸೇರಿದ ಪ್ರತಿ ಎಕರೆಗೆ ಹದಿನೈದು ಕಂದಾಯವನ್ನು ವಸೂಲಿ ಮಾಡುತ್ತಿತ್ತು. ಸರ್ಕಾರದ ಈ ತಾರತಮ್ಯ ವಿರುದ್ಧ ಹೋರಾಟಕ್ಕೆ ಮುಂದಾದರು.

ರೈತರ ಸಮಸ್ಯೆಗಳನ್ನು ಬಲ್ಲ ಪ್ರಭುರಾವ ಕಂಬಳಿವಾಲೆ, ಕಿಸಾನ ಪರಿಷತ್ತಿನ ಪ್ರಾಂತೀಯ ಅಧ್ಯಕ್ಷರಾಗಿದ್ದ ಆರ್.ವಿ. ಬಿಡಪ್, ಕಾಶಪ್ಪ ಖಂಡ್ರೆ, ಭೀಮಣ್ಣ ಖಂಡ್ರೆ, ಅಡಿವೆಪ್ಪ ಚಂದ್ರೆ, ಮಹಾದೇವಸಿಂಗ್, ಮಹಾದಪ್ಪ ಮೀಸೆ, ಧರ್ಮಪಾಲ್ ಮೊದಲಾದವರು ರೈತರ ಮೇಲಾಗುತ್ತಿದ್ದ ಶೋಷಣೆಯ ಬಗ್ಗೆ ಚರ್ಚಿಸಿದರು. ಅವರ ನಿರ್ದೇಶನದಂತೆ ಒಂದು ಕಿಸಾನ ಮೋರ್ಚಾವನ್ನು ಹೈದ್ರಾಬಾದಿಗೆ ತೆಗೆದುಕೊಂಡು ಹೋಗಲು ನಿರ್ಧರಿಸಲಾಯಿತು. ರೈತ ಹೋರಾಟದ ಅಧ್ಯಕ್ಷರಾಗಿದ್ದ ಆರ್.ವ್ಹಿ. ಬೀಡಪ್, ಮಹಾದೇವ ಸಿಂಗ್ ನೇತೃತ್ವದಲ್ಲಿ ಹೋರಾಟಕ್ಕೆ ಅಣಿಯಾದರು. ಈ ಬಗ್ಗೆ ಭೀಮಣ್ಣ ಖಂಡ್ರೆಯವರು 'ಚಲೋ ಶಾಹ ಮಂಜಿಲ್'

ಸಂಘಟನಾ ಕಾರ್ಯದರ್ಶಿಯಾಗಿ ನೇಮಕಗೊಂಡರು. ಭಾಲ್ಕಿಯ ಜಾಹಗೀರದಾರರಾಗಿದ್ದ ದತ್-ಉದ್- ದೌಲಾ ವಿರುದ್ಧ ಕೋರ್ಟ್‌ನಲ್ಲಿ ಹೂಡಲಾಗಿದ್ದ ದಾವೆ ಬಗ್ಗೆ ಮತ್ತು ರೈತರ ಸಮಸ್ಯೆಯನ್ನು ಶೀಘ್ರವಾಗಿ ಪರಿಶೀಲಿಸುವ ದಿಶೆಯಲ್ಲಿ ಚರ್ಚಿಸಲು ನ್ಯಾಯವಾದಿಗಳಾಗಿದ್ದ ಮಜಗೆಯವರ ಸಲಹೆಯನ್ನು ಖಂಡ್ರೆಯವರು ಪಡೆದರು. ಘೋಂಗಡಿಹೊತ್ತ ೧೪೦೦ ಜನರ ರೈತರೊಂದಿಗೆ ಕೂಡಿಕೊಂಡು ಹೈದರಾಬಾದಿನವರೆಗೆ ಪಾದಯಾತ್ರೆ ಮಾಡಿದರು. ಶಾಹ ಮಂಜಿಲ್ ಎದುರುಗಡೆ ದಿನಾಂಕ ೦೬.೦೬.೧೯೫೧ರಂದು ಧರಣಿ ಕೂತರು. ೧೫ ಎಕರೆ ಜಮೀನು ಇರುವ ರೈತರ ಕಂದಾಯವನ್ನು ಮನ್ನಾ ಮಾಡಬೇಕೆಂಬ ಪ್ರಮುಖ ಬೇಡಿಕೆಯನ್ನಿತ್ತರು.

ಮುಖ್ಯಮಂತ್ರಿ ಎಂ.ಕೆ. ವೆಲ್ಲೋಡಿ ಅವರು ಕಂದಾಯ ಮಂತ್ರಿಗಳಾಗಿದ್ದ ಶ್ರೀ ಬಿ. ರಾಮಕಿಶನರಾವ ಮತ್ತು ಶ್ರೀ ವಿನಾಯಕರಾವ ಕೊರಟಕರ್ ಅವರನ್ನು ಸಂಪರ್ಕಿಸಿ ಭೂಕಂದಾಯ ಮತ್ತು ಲೇವಿಗಳಲ್ಲಿದ್ದ ತಾರತಮ್ಯವನ್ನು ಸರಿಪಡಿಸಿದರು. ಆದರೆ ಎಂ.ಕೆ. ವೆಲ್ಲೋಡಿ ನೇತೃತ್ವದ ಸರ್ಕಾರವು ರೈತರ ಕಂದಾಯದ ಶೇಕಡಾ ೫೦ರಷ್ಟು ಹೊರೆಯನ್ನು ಕಡಿಮೆ ಮಾಡಿತು. ಭೀಮಣ್ಣ ಖಂಡ್ರೆಯವರು ಕಾರ್ಯದರ್ಶಿಗಳಾಗಿ ಹಮ್ಮಿಕೊಂಡ ಹೋರಾಟಕ್ಕೆ ಸಂದ ಮೊದಲನೆಯ ಜಯವಾಗಿತ್ತು.

೧೯೬೭ರ ಚುನಾವಣೆಯಲ್ಲಿ ಗೆದ್ದು, ವಿಧಾನಸಭೆಯಲ್ಲಿ ಕಾರಂಜಾ ನೀರಾವರಿ ಯೋಜನೆಗೆ ಮಂಜೂರಿ ಪಡೆದಿರುವುದರಿಂದ ಬೀದರ ಜಿಲ್ಲೆಯ ಕೆಲಮಟ್ಟಿನ ರೈತರಿಗಾದರೂ ಈ ಕಾರಂಜಾ ಯೋಜನೆಯ ಫಲ ದೊರಕುವಂತಾಯಿತು. ಇತ್ತೀಚಿನ ಕೆಲ ಸ್ವಾರ್ಥ ರಾಜಕಾರಣಿ ಮತ್ತು ಅಧಿಕಾರಿಗಳ ಅಪವಿತ್ರ ಮೈತ್ರಿಯಿಂದಾಗಿ ಕಾರಂಜಾ ಯೋಜನೆ ಪೂರ್ಣ ಪ್ರಮಾಣದಲ್ಲಿ ಯಶಸ್ವಿಯಾಗಲಿಲ್ಲ.

೧೯೭೬ರ ಡಿಸೆಂಬರ್ ತಿಂಗಳಿನಲ್ಲಿ ಭಾಲ್ಕಿಯಿಂದ ಮರೂರ ಗ್ರಾಮದವರೆಗೆ ಸುಮಾರು ಹತ್ತು ಕಿಲೋಮೀಟರ್‌ವರೆಗಿನ ರಸ್ತೆಯನ್ನು ಯುವಜನರ ಶ್ರಮದಾನ ಯೋಜನೆಯಡಿಯಲ್ಲಿ ಐದು ಸಾವಿರ ಯುವ ಕಾರ್ಯಕರ್ತರಿಂದ ಒಂದೇ ವಾರದಲ್ಲಿ ಮಾಡಲಾಗಿತ್ತು. ರಸ್ತೆ ಬದಿಯಲ್ಲಿ ಒಂದು ಸಾವಿರ ಮರಗಿಡಗಳನ್ನು ನೆಡಲಾಗಿತ್ತು. ಈ ರಸ್ತೆಯನ್ನು ಸಂಜಯಗಾಂಧಿ ಅವರು ೨೬-೧೨-೧೯೭೬ರಂದು ಉದ್ಘಾಟಿಸಿ, ಲತಾ ಠಾಕೂರ ರಸ್ತೆ ಎಂದು ನಾಮಕರಣ ಮಾಡಿದರು. ಆ ಗಿಡಗಳಲ್ಲಿ ಫಲಗೊಂಡ ಜಾಮ್(ಪೇರಲ್) ಹಣ್ಣುಗಳನ್ನು ರಾಜೀವ ಗಾಂಧಿಯವರಿಗೆ ನೀಡಿ 'ತಮ್ಮ ನೆಟ್ಟ ಮರಗಳ ಫಲ ಅಣ್ಣನಿಗೆ ಸಿಕ್ಕಿತು' ಎಂದು ಖಂಡ್ರೆಯವರು ನೆನಪಿಸಿಕೊಟ್ಟರು.

೨೧-೦೧-೧೯೮೦ರಂದು ಭಾಲ್ಕಿಯ ಶ್ರೀ ಚೆನ್ನಬಸವೇಶ್ವರ ಕಾಲೇಜಿನ ಆವರಣದಲ್ಲಿ ರಾಜ್ಯ ಮಟ್ಟದ ಪ್ರಥಮ ರೈತ ಸಮ್ಮೇಳನ ಹಮ್ಮಿಕೊಳ್ಳಲಾಗಿತ್ತು. ರಾಜ್ಯದ ಎಲ್ಲೆಡೆಯಿಂದಲೂ ರೈತ ಪ್ರತಿನಿಧಿಗಳು, ಸುಮಾರು ಎರಡು ಲಕ್ಷ ಜನರು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅಂದಿನ ಮುಖ್ಯಮಂತ್ರಿ ಆರ್. ಗುಂಡೂರಾವ ಸಮ್ಮೇಳನವನ್ನು ಉದ್ಘಾಟಿಸಿದ್ದರು. ಎಂ.ಎಫ್ ಖಾನ್, ಆರ್.ವಾಯ್. ಘೋರ್ಪಡೆ, ಕೆ.ಎಚ್. ಪಾಟೀಲರು ಈ ಸಮ್ಮೇಳನದ ಮುಖ್ಯ ಅತಿಥಿಗಳಾಗಿದ್ದರು.

ಸಮ್ಮೇಳನದಲ್ಲಿ ಮಾರಾಟ ತೆರಿಗೆ ರದ್ದತಿ, ಸಾಲ ಮನ್ನಾ, ಸುಲಭ ಬೆಲೆಯಲ್ಲಿ ಬಿತ್ತನೆ ಬೀಜ ವಿತರಣೆ, ಕೃಷಿ ಉತ್ಪನ್ನಗಳ ಬೆಲೆ ನಿರ್ಧಾರ, ಸಬ್ಸಿಡಿ ದರದಲ್ಲಿ ರಸಗೊಬ್ಬರ ಪೂರೈಕೆ, ಕಡಿಮೆ ಬೆಲೆಯಲ್ಲಿ ಸಾಗುವಳಿ ಸಾಮಗ್ರಿಗಳ ವಿತರಣೆಯಂತಹ ಹಲವಾರು ವಿಷಯಗಳನ್ನು ಚರ್ಚಿಸಿದರು. ಸಮ್ಮೇಳನದಲ್ಲಿ ಠರಾವು ಮಾಡಿದ ೨೦ ನಿರ್ಣಯಗಳನ್ನು ಪರಿಶೀಲಿಸಲು ಸರ್ಕಾರವು ೧೬ ಜನ ಪರಿಣಿತರ ಸಮಿತಿಯನ್ನು ರಚಿಸಿತು. ಆ ಸದಸ್ಯರಲ್ಲಿ ಇವರೊಬ್ಬರಾಗಿದ್ದರು. ೨೦ ಬೇಡಿಕೆಗಳ ಪೈಕಿ ಸರ್ಕಾರವು ೧೬ ಬೇಡಿಕೆಗಳಿಗೆ ಒಪ್ಪಿಗೆ ನೀಡಿತು.

ಕಿಸಾನ್ ಸೆಲ್ ಕರ್ನಾಟಕ ಘಟಕದ ಅಧ್ಯಕ್ಷರಾಗಿದ್ದ ಭೀಮಣ್ಣ ಖಂಡ್ರೆಯವ
೧೯೮೧ರ ಫೆಬ್ರವರಿ ೧೬ರಂದು ದೆಹಲಿಯಲ್ಲಿ ನಡೆದ ರೈತ ಸಮ್ಮೇಳನ
ಕರ್ನಾಟಕ ರಾಜ್ಯದಿಂದ ಹದಿನಾರು ಸಾವಿರ ರೈತರನ್ನು ದೆಹಲಿ ರೈತ ಮೇ
ಕರೆದೊಯ್ದಿದ್ದರು. ಕರ್ನಾಟಕ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ, ರೈತ ಕುಟುಂಬ
ವಾರಸುದಾರರೂ ಆಗಿದ್ದರಿಂದ ಈ ಸಂಘಟನೆಯ ನೇತೃತ್ವವಹಿಸಲು ಅವರಿ
ಸಾಧ್ಯವಾಯಿತು. ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ಶ್ರೀಮತಿ ಇಂದಿರಾ ಗಾಂ
ಇವರನ್ನು ಮುಕ್ತವಾಗಿ ಪ್ರಶಂಸಿದರು. ಸಮ್ಮೇಳನದಲ್ಲಿ ಮಂಡಿಸಲಾದ ಗೊತ್ತುವಳಿ
ಪರಿಣಾಮವಾಗಿ ಕರ್ನಾಟಕ ಸರ್ಕಾರ ರೈತರ ಹಕ್ಕುಗಳ ರಕ್ಷಣೆಗಾಗಿ ಭ
ಸುಧಾರಣಾ ಕಾಯ್ದೆ ಜಾರಿಗೊಳಿಸಿತು. ದೇವರಾಜ ಅರಸ್ ಸರಕಾರ
ಕಾಯ್ದೆ ತರುವ ಮೂಲಕ ರೈತ ಸಮುದಾಯದ ಪಾಲಿಗೆ ಆಶಾಕಿರಣವಾಯಿ

೦೮-೧೧-೧೯೮೨ರಲ್ಲಿ ಭಾಲ್ಕಿಯಲ್ಲಿ ಹಮ್ಮಿಕೊಂಡ ರಾಜ್ಯ ರೈತ
ಮೂರನೆಯ ಸಮ್ಮೇಳನಕ್ಕೆ ಅಖಿಲ ಭಾರತ ಕಾಂಗ್ರೆಸ್ ಸಮಿತಿ
ಕಾರ್ಯದರ್ಶಿಯಾಗಿದ್ದ ರಾಜೀವ ಗಾಂಧಿಯವರನ್ನು ಆಹ್ವಾನಿಸಲಾಗಿ
ಮುಖ್ಯಮಂತ್ರಿ ಆರ್. ಗುಂಡೂರಾವ ಅವರ ಮುಂದೆ ರೈತರ ಬೇಡಿಕೆಗಳ
ಮಂಡಿಸಿ, ಸೇಕಡಾ ೫೦ರಷ್ಟು ಮಾರುಕಟ್ಟೆ ಶುಲ್ಕ ಕಡಿಮೆ ಮಾಡಿಸಿದರು.

ರೈತರ ಪ್ರತಿನಿಧಿಯಾಗಿ ಸಮ್ಮೇಳನದಲ್ಲಿ ಮಾತನಾಡುತ್ತ- "ರೈತರ ಹಲ
ದುಃಖ ದುಮ್ಮಾನಗಳಿಗೆ ಹೆಚ್ಚಿನ ಕಂದಾಯ, ಮಾರುಕಟ್ಟೆಯ ಶುಲ್ಕ ಪ್ರಮು
ಕಾರಣವಾಗಿವೆ. ಕಂದಾಯ ವಸೂಲಿಯ ಕಠಿಣ ಕ್ರಮಗಳನ್ನು ಹಿಂ
ತೆಗೆದುಕೊಳ್ಳಬೇಕೆಂದು ಸಮಾವೇಶದಲ್ಲಿ" ಪ್ರತಿಪಾದಿಸಿದರು. ಇದ
ಅರ್ಥಮಾಡಿಕೊಂಡ ರಾಜೀವ ಗಾಂಧಿಯವರು ಸಮ್ಮೇಳನದಲ್ಲಿಯೇ ಕರ್ನಾಟ
ಆಗಿನ ಮುಖ್ಯಮಂತ್ರಿ ಆರ್. ಗುಂಡೂರಾವ್ ಅವರಿಗೆ ಕಂದಾಯ ಕಡಿ
ಮಾಡುವಂತೆ ಸೂಚನೆ ನೀಡಿದರು. ಇದರಿಂದಾಗಿ ಕರ್ನಾಟಕದ ರೈತ
ಬಹಳಷ್ಟು ಅನುಕೂಲವಾಯಿತು. ಈ ಸಮ್ಮೇಳನವು ಖಂಡ್ರೆಯವರನ್ನು ಪ್ರಸಿ

ತಂದಿತ್ತಲ್ಲದೆ ೧೯೮೩ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ವಿಧಾನ ಸಭೆಗೆ ಆಯ್ಕೆ ಮಾಡಿ ಕಳುಹಿಸಿತು.

೧೯೯೭-೯೮ರಲ್ಲಿ ನೈಸರ್ಗಿಕ ವಿಕೋಪದಿಂದ ಹಿಂಗಾರು ಮತ್ತು ಮುಂಗಾರು ಬೆಳೆ ಬರಲಿಲ್ಲ. ಮೇಲಾಗಿ ಆ್ಯಸಿಡಿಕ್ ರೇನ್ ಎಂಬ ಬೆಂಕಿಮಳೆ ಸುರಿಯಿತು. ಅಷ್ಟಿಷ್ಟು ಪ್ರಮಾಣದಲ್ಲಿ ಬೆಳೆದ ಬೆಳೆಗಳೆಲ್ಲ ನಾಶವಾದವು. ಆದಕಾರಣ ರೈತರು ಸೂಕ್ತಕ್ರಮಕ್ಕಾಗಿ ಆಗಿನ ಜನತಾ ದಳ ಸರ್ಕಾರದ ಮುಂದೆ ಪರಿಹಾರ ಕೋರಿ ಬೇಡಿಕೆಯನ್ನಿಟ್ಟಿದ್ದರು. ಸರ್ಕಾರವು ರೈತರ ಬೇಡಿಕೆಗೆ ಸ್ಪಂದಿಸದ ಕಾರಣದಿಂದಾಗಿ ಬೀದರ ಜಿಲ್ಲೆಯಾದ್ಯಂತ ಸುಮಾರು ೨೩ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರು. ಇಂತಹ ಸಂದರ್ಭದಲ್ಲಿ ಭೀಮಣ್ಣ ಖಂಡ್ರೆಯವರು ಸ್ವತಃ ಮುಂದಾಳತ್ವವಹಿಸಿ ದಿನಾಂಕ ೦೭-೦೩-೧೯೯೮ರಂದು ಬೀದರ ಜಿಲ್ಲಾಧಿಕಾರಿಗಳ ಕಛೇರಿ ಎದುರು ರೈತರೊಂದಿಗೆ ಪ್ರತಿಭಟನೆ ಮಾಡಿ ಧರಣಿ ಕುಳಿತರು. ಬೆಂಕಿಮಳೆ ಪ್ರಕೋಪಕ್ಕೆ ಸ್ಪಂದಿಸುತ್ತಿದ್ದ ಖಂಡ್ರೆಯವರ ಸಂಘಟನಾ ಶಕ್ತಿಗೆ ಮೆಚ್ಚಿಕೊಂಡ ಸೋನಿಯಾ ಗಾಂಧಿಯವರು ೨೬.೦೬.೧೯೯೮ರಂದು ಭಾಲ್ಕಿಗೆ ಆಗಮಿಸಿದ್ದರು. ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ವತಿಯಿಂದ ಆತ್ಮಹತ್ಯೆ ಮಾಡಿಕೊಂಡ ಪ್ರತಿರೈತ ಕುಟುಂಬಗಳಿಗೆ ಹತ್ತು ಸಾವಿರ ರೂಪಾಯಿಗಳ ಚೆಕ್ ವಿತರಿಸಿದರು.

ಕರ್ನಾಟಕ ಸರ್ಕಾರವು ಜಂಟಿ ಸದನ ಸಮಿತಿಯ ವರದಿಯಂತೆ ಸಂತ್ರಸ್ತ ರೈತರಿಗೆ ಪರಿಹಾರ ನೀಡಲು ಒಪ್ಪಿಕೊಂಡಿತು. ಆದರೆ ಪರಿಹಾರ ಧನವು ರೈತರಿಗೆ ಸಮರ್ಪಕವಾಗಿ ತಲುಪಲಿಲ್ಲ. ಆ ಬಗ್ಗೆ ಸಾಕಷ್ಟು ಹೋರಾಟ ಮಾಡಿದರೂ ಸರ್ಕಾರ ಸ್ಪಂದಿಸಲಿಲ್ಲ. ಆದಕಾರಣ ಖಂಡ್ರೆಯವರು ಮಾನವಹಕ್ಕು ಆಯೋಗದಲ್ಲಿ, ಸುಪ್ರೀ ಕೋರ್ಟಿನಲ್ಲಿ ನ್ಯಾಯಸಮ್ಮತ ರೀತಿಯಲ್ಲಿ ಹೋರಾಟ ಮಾಡಿ ರೈತರಿಗೆ ನ್ಯಾಯ ಒದಗಿಸಿಕೊಟ್ಟರು.

ಬೀಜಾಂದೋಲನ:

೧೯೭೨ರ ವೇಳೆಗೆ ಈ ಭಾಗದಲ್ಲಿ ಭೀಕರ ಬರಗಾಲ ಬಿದ್ದಿತ್ತು. ಬಿತ್ತಿ ಬೆಳೆ ಬೆಳೆಯಲಿಲ್ಲ. ಹಣ ಕೊಟ್ಟರೂ ದನಗಳಿಗೆ ಮೇವು ಸಿಗಲಿಲ್ಲ. ಕೆರೆ ಬಾವಿಗಳ ಬತ್ತಿದವು. ಎಲ್ಲೇಡೆ ನೀರಿನ ಸಮಸ್ಯೆ ಉದ್ಭವಿಸಿತು. ದನಕರುಗಳ ಸಾಯಲಾರಂಭಿಸಿದವು. ಇಂತಹ ಸಂದರ್ಭದಲ್ಲಿ ರೈತರು ಕಂಗಾಲು ಆದರು ಕಣ್ಣೆದುರಿನಲ್ಲಿಯೆ ಸಾಯುತ್ತಿರುವ ತಮ್ಮ ದನ ಕರುಗಳು ಎಲ್ಲಾದರೂ ಬದುಕ ಎಂದು ಬಡಿದು ಅಟ್ಟಿದರು. ಜನರು ವಲಸೆ ಹೋದರು.

೧೯೭೨ರ ಜೂನ್‌ನಲ್ಲಿ ಮಳೆಯಾದಾಗ ಭೂಮಿ ಹದಗೊಳಿಸಿದರು ಯಾರಲ್ಲೂ ಕೇಳಿದರೂ ಬೀಜ ಸಿಗಲಿಲ್ಲ. ಸರ್ಕಾರವೂ ರೈತರ ಸಮಸ್ಯೆ ಕಿವಿಗೊಡಲಿಲ್ಲ. ಸರಕಾರಿ ಗೋದಾಮುಗಳಲ್ಲಿ ಸಾಕಷ್ಟು ದಾಸ್ತಾನು ಇದ್ದರು ಕೃಷಿ ಅಧಿಕಾರಿಗಳು ರೈತರ ನೆರವಿಗೆ ಧಾವಿಸಲಿಲ್ಲ. ರೈತರ ಸಮಸ್ಯೆಗಳನ್ನ ಅನುಭವಿಸಿದ್ದ, ಕೇಳಿ ತಿಳಿದು ಅರ್ಥ ಮಾಡಿಕೊಂಡಿದ್ದ ಖಂಡ್ರೆಯವರು ಬೀ ಕೇಳಿ ಕರ್ನಾಟಕ ಸರ್ಕಾರಕ್ಕೂ, ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಅವರಿಗ ಪತ್ರ ಬರೆದರು. ಅದಕ್ಕೆ ಉತ್ತರ ಬರಲಿಲ್ಲ. ಯಾವುದೇ ರೀತಿಯ ಪ್ರಯೋಜನವ ಆಗಲಿಲ್ಲ. ಆಗ ಅನಿವಾರ್ಯವಾಗಿ ಸರ್ಕಾರದ ವಿರುದ ಸಂಘರ್ಷಕ್ಕಿಳಿಯಬೇಕಾಯಿತು.

ಭೀಮಣ್ಣ ಖಂಡ್ರೆಯವರು ಬೀಜಾಂದೋಲನಕ್ಕೆ ಟೊಂಕಕಟ್ಟಿ ನಿಂತಾ ಇದೊಂದು ಚರಿತ್ರಾರ್ಹ ಚಳವಳಿಯಾಗಿ ಪರಿಣಮಿಸಿತು. ಅವರ ಧೈರ್ಯ ಸಾಹಸ, ಆತ್ಮವಿಶ್ವಾಸಕ್ಕೊಂದು ನಿದರ್ಶನವಾಯಿತು. ಖಂಡ್ರೆಯವರ ಹೋರಾಟ ಹತ್ತು ಸಾವಿರ ರೈತರು ಬೆಂಬಲಿಸಿ ಧರಣಿ ಕುಳಿತರು. ಧರಣಿಯಿಂ ಪ್ರಯೋಜನವಾಗುವ ಲಕ್ಷಣ ಕಂಡುಬರಲಿಲ್ಲ. ಆಗ ಖಂಡ್ರೆಯವರು ಕೈಗೊಳ್ಳು ನಿರ್ಧಾರಕ್ಕೆ ೪೦ ಜನ ನ್ಯಾಯವಾದಿಗಳು, ೩೦೦ ಜನ ಕಾರ್ಯಕರ್ತರ

ಸಾವಿರಾರು ಸ್ವಯಂಸೇವಕರು ಬೆಂಬಲ ನೀಡಿದರು. ಇದರಿಂದ ಉತ್ಸಾಹಿತರಾದ ಖಂಡ್ರೆಯವರು ಗೋದಾಮುಗಳ ಬೀಗ ಮುರಿದು ಅಲ್ಲಿದ್ದ ಬೀಜವನ್ನು ಹಂಚುವ ಕಾರ್ಯ ಪ್ರಾರಂಭಿಸಿದರು. ಸರ್ಕಾರದ ವಿರುದ್ಧ ಬಂಡಾಯವೆದ್ದು ಉಗ್ರಾಣದ ಬೀಗ ಮುರಿದು ಬೀಜ ಹಂಚಿದ್ದಕ್ಕಾಗಿ ಪೊಲೀಸರು ಖಂಡ್ರೆಯವರನ್ನು ಸೇರಿದಂತೆ ಹಲವರನ್ನು ದಸ್ತಗಿರಿ ಮಾಡಿ ಜೈಲಿಗೆ ಹಾಕಿದರು. ಇದರಿಂದ ರೈತರ ಪ್ರತಿಭಟನೆ ಮತ್ತಷ್ಟು ಜೋರಾಯಿತು. ಪ್ರತಿಭಟನೆಯಿಂದ ಹಿಂದೆ ಸರಿಯುವಂತೆ ಕೃಷಿ ಸಚಿವ ಮತ್ತು ಖಂಡ್ರೆಯವರ ಆಪ್ತ ಸ್ನೇಹಿತರಾಗಿದ್ದ ಕೆ.ಎಚ್. ಪಾಟೀಲ ತಿಳಿಹೇಳಿದರೂ ಖಂಡ್ರೆಯವರು ಕೇಳಲಿಲ್ಲ. ರೈತರಿಗೆ ಬೀಜ ಸಿಗುವವರೆಗೆ ನಾನು ಜೈಲಿನಿಂದ ಹೊರಗಡೆ ಬರುವುದಿಲ್ಲವೆಂದು ಹಠ ಹಿಡಿದರು. ಅವರ ಸಂಘಟನಾ ಶಕ್ತಿ, ಕಾರ್ಯೋತ್ಸಾಹ ಗಮನಿಸಿ ಪ್ರಧಾನಿ ಇಂದಿರಾ ಗಾಂಧಿ ಅವರು ಬೇಷರತ್ತಿನ ಮೇರೆಗೆ ಎಲ್ಲರನ್ನು ಕಾರಾಗೃಹದಿಂದ ಬಿಡುಗಡೆ ಮಾಡಬೇಕೆಂದು ನಿರ್ದೇಶನ ನೀಡಿದ್ದರಿಂದ ದೇವರಾಜ ಅರಸು ಸರ್ಕಾರವು ಅವರನ್ನು ಬಿಡುಗಡೆ ಮಾಡಿತು.

***

೫. ಕುಟುಂಬ ಯೋಜನೆಯ ಅನುಷ್ಠಾನ

ಇಂದಿರಾ ಗಾಂಧಿಯವರ ಕಾಲದಲ್ಲಿ ಕೇಂದ್ರ ಸರ್ಕಾರವು ಪ್ರಧಾನ ಮಂತ್ರಿಗಳ ೨೦ ಅಂಶಗಳ ಕಾರ್ಯಕ್ರಮದಲ್ಲಿ ಕುಟುಂಬ ಯೋಜನೆಯ ಅನುಷ್ಠಾನವೂ ಒಂದಾಗಿತ್ತು. ಯಾರನ್ನೂ ಯಾವ ವಯಸ್ಸಿನವರನ್ನು, ಎಷ್ಟು ಮಕ್ಕಳನ್ನು ಹೆತ್ತ ತಂದೆ/ತಾಯಿಯನ್ನು ಕುಟುಂಬ ಯೋಜನೆಯ ಸಂತಾನಹರಣ ಶಸ್ತ್ರ ಚಿಕಿತ್ಸಾ ಪ್ರಕ್ರಿಯೆಗೆ ಅಳವಡಿಸಬೇಕೆಂಬ ಸ್ಪಷ್ಟವಾದ ಮಾರ್ಗಸೂಚಿಗಳಿರಲಿಲ್ಲ. ಕಾಂಗ್ರೆಸ್ ಕಾರ್ಯಕರ್ತರು, ಅಧಿಕಾರಿಗಳು ಯಾವುದೇ ನಿಯಮಾವಳಿಗಳನ್ನು ಅನುಸರಿಸದೆ ತಮಗೆ ಸಿಕ್ಕವರನ್ನು ಶಸ್ತ್ರಕ್ರಿಯೆಗೆ ಒಳಪಡಿಸುತ್ತಿದ್ದರು.

ಇದು ಜನತೆಯ ಅಸಮಾಧಾನ, ಪ್ರತಿಭಟನೆಗೆ ಕಾರಣವಾಯಿತು. ಜನರು ಈ ಕುರಿತು ಸ್ಪಷ್ಟವಾದ ನಿರ್ಧಾರ ತೆಗೆದುಕೊಳ್ಳಲು ಖಂಡ್ರೆಯವರಲ್ಲಿಗೆ ಬಂದು ಮನವಿ ಮಾಡಿದರು. ಪೊಲೀಸ್ ಠಾಣೆಗೆ ತೆರಳಿ ಈ ಬಗ್ಗೆ ವಿಚಾರಿಸಿದರು. ಪೊಲೀಸರ ಬಲತ್ಕಾರದ ಬಂಧನದಿಂದ ಕೆಲವರನ್ನು ಬಿಡಿಸಿದರು. ಆಗ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಕೆಲವಡಿ ಖಂಡ್ರೆಯವರನ್ನು ಉದ್ದೇಶಿಸಿ– "ಕೇಂದ್ರ ಸರ್ಕಾರದ ಕಾರ್ಯಕ್ರಮಗಳಿಗೆ ತಾವು ಅಡ್ಡಿಯನ್ನುಂಟು ಮಾಡದೆ, ಯೋಜನೆಯ ಅನುಷ್ಠಾನಕ್ಕೆ ಸಹಾಯ ಮಾಡಿ, ಜನರ ಮನಸ್ಸನ್ನು ಪರಿವರ್ತಿಸಲು ಸಹಕರಿಸಬೇಕೆಂದು" ಕೇಳಿದರು. ಅದಕ್ಕೆ ಖಂಡ್ರೆಯವರು ಸಮ್ಮತಿಸಿದರು.

೩೦-೦೯-೧೯೭೬ರಂದು ಭಾಲ್ಕಿಯ ಚೆನ್ನಬಸವೇಶ್ವರ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡ ಕುಟುಂಬ ಯೋಜನೆಯ ತಾತ್ಕಾಲಿಕ ಶಿಬಿರಕ್ಕೆ ಬಾಜಾ ಬಜಂತ್ರಿಯೊಂದಿಗೆ ಖಂಡ್ರೆಯವರ ಮುಖಂಡತ್ವದಲ್ಲಿ ಜನಸಾಗರ ಹರಿದು ಬಂತು. ಅದರಲ್ಲಿ ಆರೋಗ್ಯ ಇಲಾಖೆ ನಿರ್ದೇಶಕರಾಗಿದ್ದ ಡಾ. ರುದ್ರಪ್ಪ, ಅವರ ನೇತೃತ್ವದಂತೆ ವೈದ್ಯರು ೨೦೧೫ ಜನರನ್ನು ಸಂತಾನಹರಣ ಶಸ್ತ್ರ ಚಿಕಿತ್ಸೆಗೆ ಒಳಪಡಿಸಿದರು.

೩೫೦ ಜನ ವೈದ್ಯರು ಅಷ್ಟು ಜನರಿಗೆ ಶಸ್ತ್ರಚಿಕಿತ್ಸೆ ಮಾಡಿದ್ದರೆ, ೪೦೦ ಜನ ದಾದಿಯರು ಅವರ ಶುಶ್ರೂಷೆ ಮಾಡಿದರು. ಅಭೂತ ಪೂರ್ವ ಪ್ರಮಾಣದಲ್ಲಿ ಯಶಸ್ವಿಯಾದ ಸಂತಾನಹರಣ ಶಸ್ತ್ರಚಿಕಿತ್ಸಾ ಕಾರ್ಯಕ್ರಮವು ವಿಶ್ವದಾಖಲೆ ಸ್ಥಾಪಿಸಿತು. ಸ್ವತಃ ಸಂಜಯ ಗಾಂಧಿಯವರೇ ಪ್ರಚಾರ ನೀಡಿ ದೆಹಲಿಯಲ್ಲಿ ಆಯೋಜಿಸಿದ ಶಿಬಿರದಲ್ಲಿ ದಿನಕ್ಕೆ ೨೫೦ಕ್ಕಿಂತ ಹೆಚ್ಚು ಜನರಿಗೆ ಶಸ್ತ್ರ ಚಿಕಿತ್ಸೆ ಮಾಡಲಾಗಲಿಲ್ಲ. ಬೀದರ ಜಿಲ್ಲೆಯ ಅಧಿಕಾರಿಗಳೆಲ್ಲರೂ ಸೇರಿ ಎಷ್ಟೇ ಪ್ರಯತ್ನಪಟ್ಟರೂ ೩೫೦ ಜನರಿಗೆ ಮಾತ್ರ ಚಿಕಿತ್ಸೆ ಮಾಡಲಾಗಿತ್ತು. ಆದರೆ ಖಂಡ್ರೆಯವರು ಜನರ ಮನಸ್ಸನ್ನು ಪರಿವರ್ತಿಸಿ ೨೦೧೫ ಜನರಿಗೆ ಏಕಛತ್ರದಡಿಯಲ್ಲಿ ಶಸ್ತ್ರ, ಚಿಕಿತ್ಸೆ ಮಾಡಿಸಿ ಈ ಯೋಜನೆಯನ್ನು ಅನುಷ್ಠಾನ ಗೊಳಿಸಿದ್ದು ಸಾಮಾನ್ಯ ಮಾತಲ್ಲ!

ಈ ಸಂಗತಿಯನ್ನು ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೋರೇಷನ್ (ಬಿಬಿಸಿ) ಲಂಡನ್ ಮತ್ತು ಕೇಂದ್ರ ಸರ್ಕಾರದ ಪ್ರಸಾರ ಭಾರತಿಯು ಜಗತ್ತಿನಾದ್ಯಂತ ಎರಡು ಸಲ ಪ್ರಸಾರ ಮಾಡಿ ವಿಶೇಷ ಮಹತ್ವ ನೀಡಿತು. ಆರ್. ಗುಂಡೂರಾವ ಸರ್ಕಾರವು ಇವರನ್ನು ಅದ್ದೂರಿಯಾಗಿ ಸನ್ಮಾನಿಸಿತು. ಇದಕ್ಕೆಲ್ಲ ಅವರ ಜನಪ್ರಿಯತೆ, ಕರ್ತೃತ್ವ ಶಕ್ತಿ, ಜನಬೆಂಬಲವೇ ಕಾರಣವೆಂದು ಹೇಳಬಹುದು.

೬. ಶೈಕ್ಷಣಿಕ ರಂಗದ ಚಿಂತಕ

ಹಳಗನ್ನಡ ನಡುಗನ್ನಡ ಸಾಹಿತ್ಯದ ತವರುನೆಲ, ಕಾವೇರಿಯಿಂದ ಗೋದಾವರಿವರೆಗೆ ಹರಡಿಕೊಂಡಿದ್ದ ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಆದಿಲ್‌ಶಾಹಿ, ಬಹಮನಿ ಸುಲ್ತಾನ, ಮರಾಠ ಹಾಗೂ ನಿಜಾಮರ ಆಳ್ವಿಕೆಯ ಕಾಲದಲ್ಲಿ ಪಾರ್ಸಿ ಮತ್ತು ಉರ್ದು ಭಾಷೆಗಳು ಮನ್ನಣೆಗೊಳಗಾದವು. ಏಕೀಕೃತ ಪ್ರಾಂತವು ಬೇರೆ ಬೇರೆಯವರ ಆಳ್ವಿಕೆಗೊಳಪಟ್ಟು ವಿದಳನಗೊಂಡಿತು. ಪೇಶ್ವೆಗಳ ಆಡಳಿತದಲ್ಲಂತೂ ಮರಾಠಿ ಆಡಳಿತ ಭಾಷೆಯಾಗಿದ್ದರಿಂದ ಕನ್ನಡದ ಸ್ಥಾನಮಾನ ಇಳಿಮುಖವಾಗತೊಡಗಿತು. ನಿಜಾಮರು ತಾಲೂಕಾ ಮಟ್ಟದಲ್ಲಿ ಉರ್ದು ಹಾಗೂ ಮರಾಠಿ ಬಲ್ಲವರನ್ನು, ಗ್ರಾಮ ಮಟ್ಟದಲ್ಲಿ ಮೋಡಿ ಲಿಪಿಯನ್ನು ಓದಲು ಬರೆಯಲು ಬಲ್ಲವರನ್ನು ನೇಮಿಸಿಕೊಂಡರು. ಆಡಳಿತ ಭಾಷೆಯ ಆಕ್ರಮಣಕ್ಕೆ ಕನ್ನಡಿಗರು ತುತ್ತಾಗುತ್ತಿದ್ದರು. ಬರವಣಿಗೆಯಲ್ಲಿ ಉರ್ದು ಬಿಟ್ಟರೆ ಮೋಡಿಯನ್ನು ಬಳಸಲಾಗುತ್ತಿತ್ತು. ಅಧಿಕಾರಶಾಹಿಗಳ ಮರ್ಜಿಗಾಗಿ ಸಾರ್ವಜನಿಕ ಸಭೆ

ಸಮಾರಂಭಗಳಲ್ಲಿ ಕನ್ನಡ ಬಿಟ್ಟು ಉರ್ದು ಅಥವಾ ಮರಾಠಿಯಲ್ಲಿ ಭಾಷಣ ಮಾಡಬೇಕಿತ್ತು. ಮೇಲ್ವರ್ಗದ ಜನರಿಗೂ ಕನ್ನಡೇತರ ಭಾಷೆಯಲ್ಲಿ ಮಾತನಾಡುವುದು ಗೌರವದ ವಿಷಯವಾಗಿತ್ತು.

ಗ್ರಾಮಾಂತರ ಪ್ರದೇಶದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮರಾಠಿ, ಉರ್ದು ಮಾಧ್ಯಮದಲ್ಲಿ ನೀಡಲಾಗುತ್ತಿತ್ತು. ಖಾಸಗಿಯಾಗಿ ಕನ್ನಡ ಬಲ್ಲ ಅಯ್ಯಗಳು ಪಿಯ್ಯಲ (ಗಾಂವಠಿ) ಶಾಲೆಗಳನ್ನು ನಡೆಸುತ್ತಿದ್ದರು ಇವರಿಗೆ ಸ್ಥಳೀಯರು ಪದಾರ್ಥ ರೂಪದಲ್ಲಿ ಸಂಬಳ ನೀಡುತ್ತಿದ್ದರು. ಅನುಕೂಲಸ್ಥರ ಮನೆಯಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡುತ್ತಿದ್ದರು. ಮಠ, ದೇವಾಲಯಗಳಲ್ಲಿ ಗಾಂವಠಿ ಶಾಲೆಗಳು ನಡೆಯುತ್ತಿದ್ದವು. ಬೀದರ ಜಿಲ್ಲೆಯಲ್ಲಿ ಕನ್ನಡ ಕಲಿಕೆಗಾಗಿ ಅಲ್ಲಲ್ಲಿ ಗಾಂವಠಿ ಶಾಲೆಗಳಿದ್ದವು. ಅವುಗಳ ನಡುವೆ ವ್ಯವಸ್ಥಿತ ಸಾಂಗತ್ಯವಿರಲಿಲ್ಲ. ಹಂತಹಂತದ ಕಲಿಕೆಯಾಗಲಿ, ವರ್ಗವಾರು ವಿಂಗಡಣೆಯಾಗಲಿ ಇದ್ದಿಲ್ಲ. ವಯೋಮಿತಿಯನ್ನು ಗಮನಿಸಿ ಆಯಾ ತರಗತಿಗೆ ಸೇರಿಸಿಕೊಳ್ಳಲಾಗುತ್ತಿತ್ತು. ಓದು ಬರಹ ಲೆಕ್ಕ ಪತ್ರಗಳ ಕಲಿಕೆಯ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಬೌದ್ಧಿಕತೆಯನ್ನು ಅಳೆಯಲಾಗುತ್ತಿತ್ತು.

ರಾಯಕಾಶೀರಾಯ ದೇಶಮುಖರು ಪೂಜ್ಯ ಡಾ. ಚನ್ನಬಸವ ಪಟ್ಟದ್ದೇವರನ್ನು ಪಟ್ಟಾಧಿಕಾರಕ್ಕೆ ಆಯ್ಕೆ ಮಾಡಿ ಭಾಲ್ಕಿ ಹಿರೇಮಠಕ್ಕ ಭದ್ರವಾದ ಅಡಿಪಾಯ ಹಾಕಿದರು. ಅವರು ನಿಜಾಮ ಅಧಿಕಾರಿಯಾಗಿದ್ದರು. ನಿಷ್ಠೆ ಮತ್ತು ಪ್ರಾಮಾಣಿಕ ಸೇವೆಗಾಗಿ ನಿಜಾಮನಿಂದ 'ರಾಯ' ಎಂಬ

ಬಿರುದು ಪಡೆದಿದ್ದರೂ ಅವರು ಕನ್ನಡಕ್ಕೆ ನಿಷ್ಠರಾಗಿದ್ದರು. ೧೨ ವರ್ಷಗಳ ವರೆಗೆ ತಮ್ಮ ಮನೆಯಲ್ಲಿ ಖಾಸಗಿ ಕನ್ನಡ ಪಾಠಶಾಲೆಯನ್ನು ನಡೆಸಿದರು. ಅದು ತಮ್ಮ ಸ್ವಂತ ಖರ್ಚಿನಿಂದ. ಚಂದ್ರಪ್ಪ ಮಾಸ್ಟರ್ ರಾಯಚೂರು ಅವರು ಕನ್ನಡ ಶಿಕ್ಷಕರಾಗಿದ್ದರು. ನಿಜಾಮ ಸರ್ಕಾರದ ಅಧೀನದಲ್ಲಿದ್ದರೂ, ರಜಾಕಾರ ಹಾವಳಿಯ ಕಾಲದಲ್ಲೂ, ಮರಾಠಿಗರ ಒತ್ತಡದಲ್ಲೂ ಕನ್ನಡವನ್ನು ಕೈಗೆತ್ತಿಗೊಂಡು ಪೂರೈಸಿದ್ದು ದೇಶಮುಖರ ಮಹತ್ಸಾಧನೆಯಾಗಿ ನಿಲ್ಲುತ್ತದೆ.

ಇದಕ್ಕೆಲ್ಲ ಭಾಲ್ಕಿ ಪರಮ ಪೂಜ್ಯರ ಅವಿಶ್ರಾಂತ ಶ್ರಮ, ಸೇವಾಕಾಂಕ್ಷೆ, ಕನ್ನಡ ಕೈಂಕರ್ಯಗಳೇ ಮುಖ್ಯ ಕಾರಣವಾಗಿವೆ. "ಕನ್ನಡವು ಸರ್ವತ್ರ ವಿಜೃಂಭಿಸಬೇಕು. ಕನ್ನಡವೇ ಸಾರ್ವಭೌಮ ಭಾಷೆಯಾಗಬೇಕು" ಎಂಬ ನಿರ್ದಿಷ್ಟ ಉದ್ದೇಶದಿಂದ ಭಾಲ್ಕಿ ಶ್ರೀಗಳು ಕನ್ನಡ ಕಟ್ಟುವಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಈ ವಿಷಯದಲ್ಲಿ ಡಾ॥ ಭೀಮಣ್ಣ ಖಂಡ್ರೆಯವರು ಪೂಜ್ಯರಿಗೆ ಸಹಕಾರಿಯಾಗಿದ್ದರು.

ಉರ್ದು ಪ್ರಾಬಲ್ಯವಿದ್ದಾಗ ಕನ್ನಡಕ್ಕೆ ಈ ಭಾಗದಲ್ಲಿ ಯಾವುದೇ ಮಾನ್ಯತೆ ಇರಲಿಲ್ಲ. ಅಂತಹ ಸಂದರ್ಭದಲ್ಲಿ ಡಾ. ಚೆನ್ನಬಸವ ಪಟ್ಟದ್ದೇವರ ಶೈಕ್ಷಣಿಕ ಕನಸುಗಳಿಗೆ ನೀರೆರೆಯುತ್ತ ಶಿಕ್ಷಣ ರಂಗದಲ್ಲಿ ಅಪೂರ್ವ ದಾಖಲೆಗಳನ್ನು ಸಾಧಿಸಿದ್ದಾರೆ. ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ, ಬೀದರ; ಸತ್ಯನಿಕೇತನ ಶಿಕ್ಷಣ ಸಂಸ್ಥೆ, ಭಾಲ್ಕಿ ಮೊದಲಾದ ಹಲವಾರು ಶಿಕ್ಷಣ ಸಂಸ್ಥೆಗಳ ಸದಸ್ಯರಾಗಿ, ಪದಾಧಿಕಾರಿಗಳಾಗಿ ಅವುಗಳ ಬೆಳವಣಿಗೆಗೆ ಕಾರಣರಾಗಿದ್ದಾರೆ. ಎಲ್ಲಕ್ಕೂ ಮುಖ್ಯವಾಗಿ ೧೯೬೩ರಲ್ಲಿ ಪ್ರಾರಂಭಗೊಂಡ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ

ಸಂಸ್ಥಾಪಕ ಅಧ್ಯಕ್ಷರಾಗಿ ೨೫ ವರ್ಷಗಳ ವರೆಗೆ ಸಂಸ್ಥೆಯನ್ನು ಮುನ್ನಡೆಸಿದರು. ಚೆನ್ನಬಸವೇಶ್ವರ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಭಾಲ್ಕಿ; ಅಕ್ಕಮಹಾದೇವಿ ಪ್ರೌಢ ಶಾಲೆ ಮತ್ತು ಪ.ಪೂ ಕಾಲೇಜು, ಭಾಲ್ಕಿ; ಅಕ್ಕಮಹಾದೇವಿ ಮಹಿಳಾ ಕಾಲೇಜು, ಬೀದರ; ಅಕ್ಕಮಹಾದೇವಿ ಕನ್ಯಾ ಪ್ರೌಢ ಶಾಲೆ, ಬೀದರ; ಶಾಂತಿವರ್ಧಕ ಪ.ಪೂ. ಕಾಲೇಜು, ಕಮಲನಗರ; ಶ್ರೀ ಸಿದ್ಧರಾಮೇಶ್ವರ ಪದವಿ ಮಹಾವಿದ್ಯಾಲಯ, ಕಮಲನಗರ; ಚೆನ್ನಬಸವೇಶ್ವರ ಪ್ರಾಥಮಿಕ ಶಾಲೆ, ಕಮಲನಗರ; ಔದ್ಯೋಗಿಕ ತರಬೇತಿ ಕೇಂದ್ರ, ಕಮಲನಗರ; ಗ್ರಾಮೀಣ ಅಭಿಯಾಂತ್ರಿಕ ಮಹಾವಿದ್ಯಾಲಯ, ಭಾಲ್ಕಿ; ಕೈಗಾರಿಕಾ ತರಬೇತಿ ಸಂಸ್ಥೆ, ಭಾಲ್ಕಿ; ಹರಳಯ್ಯ ಪಾಲಿಟೆಕ್ನಿಕ್, ಭಾಲ್ಕಿ; ಶಾಂತಿವರ್ಧಕ ಶಿಕ್ಷಕ ತರಬೇತಿ ಸಂಸ್ಥೆ, ಬಿ.ಕೆ.ಆಯ್.ಟಿ. ಈ ಮೊದಲಾದ ಶಾಲಾ ಕಾಲೇಜುಗಳ ಅಭಿವೃದ್ಧಿಗೆ ನಿರಂತರವಾಗಿ ಶ್ರಮಿಸಿ ದುಡಿದಿದ್ದಾರೆ. ಈಗ ಈ ಶಿಕ್ಷಣ ಸಂಸ್ಥೆಯ ಎಲ್ಲಾ ಜವಾಬ್ದಾರಿಯನ್ನು ಯುವನಾಯಕ ಶ್ರೀ ಈಶ್ವರ ಖಂಡ್ರೆಯವರು ವಹಿಸಿಕೊಂಡು ಮುನ್ನಡೆಸುತ್ತಿದ್ದಾರೆ.

***

೭. ಸಹಕಾರ ಕ್ಷೇತ್ರದ ಧುರೀಣತ್ವ

ಪರಸ್ಪರ ಪೂರಕವಾಗುವ, ಸ್ವಾವಲಂಬನೆಗೆ ಭದ್ರವಾದ ಬುನಾದಿ ಹಾಕುವ ಸಹಕಾರ ಕ್ಷೇತ್ರದಲ್ಲಿ ಬಲವಾದ ನಂಬಿಕೆ ಹೊಂದಿರುವ ಡಾ. ಭೀಮಣ್ಣ ಖಂಡ್ರೆಯವರು ಬೀದರ ಜಿಲ್ಲಾದ್ಯಂತ ನೂರಾರು ಸಹಕಾರ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ, ಅವುಗಳ ಅಭಿವೃದ್ಧಿಗೆ ಕಾರಣಕರ್ತೃಗಳಾಗಿದ್ದಾರೆ. ಡಿ.ಸಿ.ಸಿ. ಬ್ಯಾಂಕಿನ ನಿರ್ದೇಶಕರಾಗಿ ಇದುವರೆಗೂ ಸೇವೆ ಸಲ್ಲಿಸುತ್ತಿದ್ದಾರೆ. ಹಳ್ಳಿಖೇಡದಲ್ಲಿ ಬೀದರ ಸಹಕಾರ ಸಕ್ಕರೆ ಕಾರ್ಖಾನೆ ಪ್ರಾರಂಭಿಸಲು ೧೯೬೭-೬೮ರ ವರೆಗೆ ಹಳ್ಳಿ-ಹಳ್ಳಿಗೆ ಸಂಚರಿಸಿದರು. ಶೇಕಡಾ ೬೦ರಷ್ಟು ಶೇರು ಹಣವನ್ನು ಭೀಮಣ್ಣ ಖಂಡ್ರೆಯವರು ಸಂಗ್ರಹಿಸಿ ಬೀದರ ಸಹಕಾರ ಸಕ್ಕರೆ ಕಾರ್ಖಾನೆಯ ಸಂಸ್ಥಾಪಕರಾಗಿದ್ದಾರೆ. ೦೨-೦೪-೧೯೬೮ರಿಂದ ೨೭-೦೩-೧೯೮೪ರ ವರೆಗೆ ಅದರ ಅಧ್ಯಕ್ಷರಾಗಿ ದುಡಿದಿದ್ದಾರೆ. ಇವರ ಅವಧಿಯಲ್ಲಿ ಕಾರ್ಖಾನೆಯು ಸರ್ವಾಂಗೀಣ ಪ್ರಗತಿ ಸಾಧಿಸಿತು.

ರಾಷ್ಟ್ರಮಟ್ಟದಲ್ಲಿಯೆ ಅತ್ಯಂತ ಕಡಿಮೆ ವೆಚ್ಚದಲ್ಲಿ ಉತ್ತಮ ಗುಣಮಟ್ಟದ ಸಕ್ಕರೆ ಉತ್ಪಾದಿಸಿ, ೧೯೮೧ರಲ್ಲಿ ಮುಖ್ಯಮಂತ್ರಿಗಳಾದ ಡಿ. ದೇವರಾಜ ಅರಸು ಅವರಿಂದ 'ಶುಗರ್ ಟೈಕೂನ್' ಎಂಬ ಪ್ರಶಸ್ತಿಯನ್ನು ಮೊದಲಿಗೆ ಸ್ವೀಕರಿಸಿದ ಹೆಗ್ಗಳಿಕೆ ಇವರದು. ಕಬ್ಬು ಅರೆಯುವಿಕೆಯ ಪ್ರಮಾಣವನ್ನು ಹೆಚ್ಚಿಸಿ, ಸಾವಿರಾರು

ಜನರಿಗೆ ಉದ್ಯೋಗಾವಕಾಶ ಕಲ್ಪಿಸಿಕೊಟ್ಟರು. ಎಕ್ಸ್‌ಪೋರ್ಟ್ ಕ್ವಾಲಿಟಿಯ ಉತ್ತಮ ಗುಣಮಟ್ಟದ ಸಕ್ಕರೆಯನ್ನು ಉತ್ಪಾದಿಸಿ ರಾಷ್ಟ್ರೀಯ ಮಟ್ಟದಲ್ಲಿ ಕಾರ್ಖಾನೆಗೆ ಪ್ರಥಮ ಬಹುಮಾನ ಬರುವಂತೆ ಮಾಡಿದ್ದು ಖಂಡ್ರೆಯವರ ಮಹತ್ವದ ಸಾಧನೆಯಾಗಿದೆ. ಇವರ ಸೇವೆಯನ್ನು ಮನಗಂಡ ರಾಷ್ಟ್ರೀಯ ಸಹಕಾರ ಸಕ್ಕರೆ ಕಾರ್ಖಾನೆಗಳ ಒಕ್ಕೂಟವು ಇವರನ್ನು ನಿರ್ದೇಶಕರ ಮಂಡಳಿಯ ಸದಸ್ಯರನ್ನಾಗಿ ಆಯ್ಕೆ ಮಾಡಿದೆ. ಅಲ್ಲದೆ ನವದೆಹಲಿಯಲ್ಲಿರುವ ಅಖಿಲ ಭಾರತ ಸಕ್ಕರೆ ರಫ್ತು ನಿಗಮದ ನಿರ್ದೇಶಕರ ಮಂಡಳಿಯ ಸದಸ್ಯರಾಗಿ ಇವರು ಕರ್ತವ್ಯ ನಿರ್ವಹಿಸಿದ್ದಾರೆ.

ದಿವಂಗತ ಗುರುಪಾದಪ್ಪ ನಾಗಮಾರಪಳ್ಳಿಯವರ ನೇತೃತ್ವದ ಇಮಾಮಪುರದಲ್ಲಿನ ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆಯ ನೋಂದಣಿ, ಶೇರು ಸಂಗ್ರಹ ಮುಂತಾದ ಕಾರ್ಯಗಳಿಗೆ ಖಂಡ್ರೆಯವರು ಪ್ರಾಮಾಣಿಕವಾಗಿ ಸಹಕರಿಸಿದ್ದಾರೆ. ರೈತರ ಸಮಸ್ಯೆಗೆ ಸ್ಪಂದಿಸುವಂತಹ ಮತ್ತೊಂದು ಕಾರ್ಖಾನೆ ಸ್ಥಾಪನೆಯಾದದ್ದು ಅವರಿಗೆ ಅಭಿಮಾನದ ಸಂಗತಿಯಾಗಿತ್ತು. ಸಹಕಾರ ಕ್ಷೇತ್ರದಲ್ಲಿನ ಅಚಲವಾದ ನಂಬಿಕೆಯಿಂದಾಗಿ, ಬೀದರ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಬ್ಬು ಬೆಳೆಯುತ್ತಿರುವುದರಿಂದಾಗಿ ೧೯೯೧–೨೦೦೨ರ ವರೆಗೆ ಶೇರು ಸಂಗ್ರಹಿಸಿ, ೨೦೦೩ರಲ್ಲಿ ಮಹಾತ್ಮಾ ಗಾಂಧಿ ಸಹಕಾರ ಸಕ್ಕರೆ ಕಾರ್ಖಾನೆಯನ್ನು ಹುಣಜಿಯಲ್ಲಿ ಸ್ಥಾಪಿಸಿದರು. ಕಾರ್ಖಾನೆಯ ರೂಪುರೇಷೆ, ಕಾರ್ಯಕ್ಷಮತೆಗಳಿಗೆಲ್ಲ ಇವರೇ ಕಾರಣರಾಗಿದ್ದಾರೆ. ೨೫೦೦ ಮ್ಯಾಟ್ರಿಕ್ ಟನ್ ಕಬ್ಬು ಅರೆಯುವ ಸಾಮರ್ಥ್ಯವನ್ನು ಈ ಕಾರ್ಖಾನೆ ಹೊಂದಿದೆ. ೧೨ ಸಾವಿರ ರೈತ ಕುಟುಂಬಗಳಿಗೆ, ಸಾವಿರಾರು ಕೂಲಿಕಾರ್ಮಿಕರಿಗೆ, ನೂರಾರು ಸಿಬ್ಬಂದಿಗಳಿಗೆ ಕಾರ್ಖಾನೆಯು ಆಧಾರ ಸ್ಥಂಭವಾಗಿದೆ. ಇದೀಗ ಹುಣಜಿ ಸಹಕಾರ ಸಕ್ಕರೆ ಕಾರ್ಖಾನೆಯು ೮ ಮೇಗಾವ್ಯಾಟ್ ಕ್ಷಮತೆಯ ಕೋ–ಜನರೇಶನ್ ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭಿಸಿದೆ. ಈ ಎರಡು ಕಾರ್ಖಾನೆಗಳಿಂದಾಗಿ ಬೀದರ ಜಿಲ್ಲೆಯ ೪೦

ಸಾವಿರಕ್ಕೂ ಮೇಲ್ಪಟ್ಟ ಕಬ್ಬು ಉತ್ಪಾದಕರಿಗೂ, ಸಾವಿರಾರು ಜನ ಕೂಲಿಕಾರ್ಮಿಕರಿಗೆ ಅನುಕೂಲವಾಗಿದೆ.

ಹುಣಜಿ (ಎ)ಯಲ್ಲಿ ಸ್ಥಾಪಿಸಲಾದ ಮಹಾತ್ಮಾ ಗಾಂಧಿ ಸಕ್ಕರೆ ಕಾರ್ಖಾನೆ ತನ್ನ ಕ್ಷಮತೆಯನ್ನು ೨೫೦೦ ಟಿಸಿಡಿಯಿಂದ ೩೫೦೦ ಟಿಸಿಡಿ ವರೆಗೆ ವಿಸ್ತರಿಸಿಕೊಂಡಿರುವುದು ಹೆಮ್ಮೆಯ ಸಂಗತಿಯಾಗಿದೆ. ಕಾರ್ಖಾನೆಯ ಸರ್ವಾಂಗೀಣ ಅಭಿವೃದ್ಧಿಗೆ ರೂ. ೯.೬೩ ಕೋಟಿಗಳಿಗಿಂತ ಹೆಚ್ಚು ಹಣ ಭರಿಸಲಾಗಿದೆ. ೮ ಮೇ.ವ್ಯಾಟ ಕ್ಷಮತೆಯ ಸಹವಿದ್ಯುತ್ ಘಟಕವನ್ನು ರೂ. ೫.೯೬ ಕೋಟಿಗಳ ಸ್ವಂತ ಹಣದ ವಿನಿಯೋಗದಲ್ಲಿ ಸಾಧಿಸಲಾಗಿದೆ. ಇದಲ್ಲದೇ ಕಾರ್ಖಾನೆಯ ಅಧಿಕಾರಿ, ಸಿಬ್ಬಂದಿ ಮತ್ತು ಕಾರ್ಮಿಕರ ವಸತಿಗಾಗಿ ಮನೆಗಳನ್ನು, ಕಾರ್ಖಾನೆಯ ಸುತ್ತಲೂ ಕಂಪೌಂಡ ಗೋಡೆ, ಆಡಳಿತ ಕಚೇರಿ, ಸ್ಟೋರ, ಕಬ್ಬು ವಿಭಾಗದ ಕಟ್ಟಡ ಮತ್ತು ಹೆಚ್ಚುವರಿ ಸಕ್ಕರೆ ಗೋದಾಮಿಗಾಗಿ ಒಟ್ಟು ರೂ. ೨೧.೮೯ ಕೋಟಿಗಳನ್ನು ವಿನಿಯೋಗಿಸಲಾಗಿದ್ದು, ಗೋದಾಮಿಗಾಗಿ ಪಡೆದ ರೂ. ೨.೮೧ ಕೋಟಿ ಸಾಲ ಹೊರತಾಗಿ, ಎಲ್ಲ ಕಟ್ಟಡ ಕಾಮಗಾರಿಗಳಿಗಾಗಿ ರೂ. ೨೧.೮೯ ಕೋಟಿಗಳ ಖರ್ಚನ್ನು ಕಾರ್ಖಾನೆ ಸ್ವಂತಹ ಹಣದಿಂದಲೇ ವಹಿಸಲಾಗಿರುತ್ತದೆ. ಅಲ್ಲದೇ ಕೇನ-ಕ್ಯಾರಿಯರ್ ವಿಸ್ತರಿಸಲು ೧೩ ಎಕರೆ ಜಮೀನ ಖರೀದಿಗಾಗಿಯೂ ರೂ. ೭೦.೨೯ ಲಕ್ಷಗಳನ್ನು ಕಾರ್ಖಾನೆಯ ಹಣವನ್ನು ವಿನಿಯೋಗಿಸಲಾಗಿದೆಂದು ಶ್ರೀ ಜೆ.ಸಿ. ಪಾರಾ ಅವರು ತಿಳಿಸಿದ್ದಾರೆ. ಈ ಎಲ್ಲ ಕಾರ್ಯಚಟುವಟಿಕೆಗಳನ್ನು ಪೂರೈಸಲು ಶ್ರೀ ಭೀಮಣ್ಣ ಖಂಡ್ರೆಯವರು ತಮ್ಮ ಇಳಿವಯಸ್ಸಿನಲ್ಲಿಯೂ ಮಹಾತ್ಮಾ ಗಾಂಧಿ ಸಹಕಾರ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರಾಗಿ ಜಿಲ್ಲೆಯ ೧೮೦೦೦ ರೈತ ಸದಸ್ಯರ ಹಾಗೂ ನೂರಾರು ಉದ್ಯೋಗಿಗಳ ಸೇವೆಯಲ್ಲಿ ನಿರತರಾಗಿರುವುದು ಅಭಿನಂದನೀಯ ವಿಷಯವಾಗಿದೆ.

***

೮. ವೀರಶೈವ ಮಹಾಸಭೆಯ ಸಾರಥ್ಯ

ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷ ಸ್ಥಾನ ಇವರನ್ನು ಹುಡುಕಿಕೊಂಡು ಬಂದಿತು. ಇದನ್ನು ಅವರು ಬಯಸದೇ ಬಂದಿರುವ ಭಾಗ್ಯವೆಂದು ಭಾವಿಸಿದರು. ೧೯೯೯ರಲ್ಲಿ ಮಹಾಸಭೆಯ ಅಧಿಕಾರ ಸ್ವೀಕರಿಸಿದರು. ಪುನಃ ೨೫-೧೨-೨೦೦೫ರಲ್ಲಿ ಮತ್ತೆ ಸರ್ವಾನುಮತದಿಂದ ಅಧ್ಯಕ್ಷರಾದರು. ಮಹಾಸಭೆಯ ಆಜೀವ ಸದಸ್ಯರ ಸಂಖ್ಯೆ ೩೦೦೦ ಇದ್ದುದ್ದನ್ನು ೭೫ ಸಾವಿರಕ್ಕೆ ಹೆಚ್ಚಿಸಿದರು. ಯಾವುದಾದರೂ ಮಠದ ಅಥವಾ ಬಾಡಿಗೆಯ ಕೋಣೆಯಲ್ಲಿ ನಡೆಯುತ್ತಿದ್ದ ಮಹಾ ಸಭೆಯ ಕಾರ್ಯ ಚಟುವಟಿಕೆಗಳನ್ನು ವಿಸ್ತರಿಸುವ ಉದ್ದೇಶದಿಂದ ಬೆಂಗಳೂರಿನಲ್ಲಿ ಬೃಹತ್ ಪ್ರಮಾಣದಲ್ಲಿ ೨೫ ಕೋಟಿ ವೆಚ್ಚದಲ್ಲಿ ಮೂರಂತಸ್ತಿನ ಭವ್ಯ ಕಟ್ಟಡ ಕಟ್ಟಿ ಮಹಾಸಭೆಗೆ ಭದ್ರವಾದ ನೆಲೆಯನ್ನೊದಗಿಸಿದರು. ವೀರಶೈವ ಲಿಂಗಾಯತ ಮುಖಂಡರನ್ನು, ಮಠಾಧೀಶರನ್ನು ಒಂದೇ ವೇದಿಕೆಯಡಿಯಲ್ಲಿ ತಂದು ಒಗ್ಗಟ್ಟನ್ನು ಪ್ರದರ್ಶಿಸಿದ್ದು ಇವರ ಮಹತ್ವದ ಸಾಧನೆಯಾಗಿದೆ.

ದೇಶದುದ್ದಕ್ಕೂ ಇರುವ ವೀರಶೈವ ಲಿಂಗಾಯತರನ್ನು, ಒಳಪಂಡದವರನ್ನು ಸಂಘಟಿಸಿ, ಎಲ್ಲರ ನಡುವೆಯೂ ಭಾವನಾತ್ಮಕ ಸಂಬಂಧ ಬೆಸೆದಿದ್ದಾರೆ. ಪಂಚಾಚಾರ್ಯರು, ವಿರಕ್ತರು, ದೇಶಿಕರು, ಬಸವ ಸಂಪ್ರದಾಯಿಗಳನ್ನು ಒಂದೆಡೆ

ಕೂಡಿಸಿದರು. ಪರಸ್ಪರರ ನಡುವೆ ಇದ್ದಂತಹ ಮೇಲು-ಕೀಳು ಭಾವನೆಗಳನ್ನು ದೂರ ಸರಿಸಿದರು. ಆ ಎಲ್ಲರನ್ನು ಸಮಾನ ವೇದಿಕೆಗೆ ತಂದು ಸಮಾಜದ ಏಳ್ಗೆಗೆ ಶ್ರಮಿಸುವಂತೆ ಮಾಡಿದ ಶ್ರೇಯಸ್ಸು ಇವರದ್ದಾಗಿದೆ. ೨೦೧೧ರ ಎಪ್ರಿಲ್ ೧೭ರಿಂದ ೧೯ರ ವರೆಗೆ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಸುತ್ತೂರಿನಲ್ಲಿ ಜರುಗಿದ ವೀರಶೈವ ಮಹಾಸಭೆಯ ಅಧಿವೇಶನ ಇವರು ಸಂಘಟಿಸಿದ ಮಹತ್ವದ ಕಾರ್ಯಕ್ರಮವಾಗಿದೆ.

೨೦೧೦ರ ಏಪ್ರಿಲ್ ೯ರಿಂದ ೧೩ರ ವರೆಗೆ ಶಿವಯೋಗ ಮಂದಿರದಲ್ಲಿ ವೀರಶೈವ ಮಹಾಸಭೆ ಹಾಗೂ ಶಿವಯೋಗ ಮಂದಿರದ ಶತಮಾನೋತ್ಸವವನ್ನು ರಾಷ್ಟ್ರೀಯ ನೇತಾರರ, ಎಲ್ಲ ಗುರುವೃಂದದವರ ಸಮ್ಮುಖದಲ್ಲಿ ಯಶಸ್ವಿಯಾಗಿ ನೆರವೇರಿಸಿದರು. ೨೦೧೧ರ ಮಾರ್ಚ್ ೫ ಮತ್ತು ೬ರಂದು ಬಸವಕಲ್ಯಾಣದಲ್ಲಿ ಹುತಾತ್ಮರ ದಿನಾಚರಣೆಯನ್ನು ಏರ್ಪಡಿಸಿದರು. ಈ ಕಾರ್ಯಕ್ರಮವು ವೀರಶೈವ ಧರ್ಮದ ವಿಶ್ವಸಂದೇಶವನ್ನು ಜಗತ್ತಿಗೆ ಸಾರುವಲ್ಲಿ ಮಹತ್ವದ ಪಾತ್ರ ವಹಿಸಿತು. ಬಸವಾದಿ ಶಿವಶರಣರ-ಶರಣೆಯರ ವ್ಯಕ್ತಿತ್ವಕ್ಕೆ ಧಕ್ಕೆಯನ್ನುಂಟು ಮಾಡಿದ ಅನೇಕ ಕೃತಿಗಳ ವಿರುದ್ಧ ಮುಟ್ಟುಗೋಲು ಹಾಕಿಕೊಳ್ಳುವಂತೆ ಪ್ರತಿಭಟನೆ ಮಾಡಿದರು. ಅವುಗಳಲ್ಲಿ ಸಿ. ವೀರಣ್ಣನವರ '೧೨ನೆಯ ಶತಮಾನದ ಕಾಯಕಜೀವಿಗಳ ಚಳವಳಿ', ಹೆಚ್.ಎಸ್. ಶಿವಪ್ರಕಾಶರ 'ಮಹಾಚೈತ್ರ', ಡಾ. ಪಿ.ವಿ. ನಾರಾಯಣರ 'ಧರ್ಮಕಾರಣ', ಡಾ. ಬಂಜಗೆರೆ ಜಯಪ್ರಕಾಶರ 'ಆನುದೇವಾ ಹೊರಗಣವನು' ಮತ್ತು ಬಸವಣ್ಣನವರ ಮತ್ತು ಅಕ್ಕಮಹಾದೇವಿಯವರ ವಚನಾಂಕಿತಗಳನ್ನು ತಿದ್ದುಪಡಿ ಮಾಡಿ ಪ್ರಕಟಿಸಲಾದ ಮಾತೆ ಮಹಾದೇವಿಯವರ 'ವಚನದೀಪ್ತಿ', 'ಅಕ್ಕನ ಅಮರವಾಣಿ' ಕೃತಿಗಳ ವಿರುದ್ಧ ಪ್ರತಿಭಟನೆ ಮಾಡಿ ಬಹಿಷ್ಕಾರ ಹಾಕಿದರು. ಈ ರೀತಿ ಒಬ್ಬ ವ್ಯಕ್ತಿಯಾಗಿ, ಸಮಾಜದ ಶಕ್ತಿಯಾಗಿ ಕೆಲಸ ಮಾಡಿದ ಖಂಡ್ರೆಯವರ ಸಾಧನೆಗಳು ಅಗಾಧವಾಗಿವೆ.

**

೬. ಸಮಕಾಲೀನರ ಅಭಿಪ್ರಾಯಗಳು

ಕರ್ನಾಟಕ ಜನಪರ ಮತ್ತು ಧೀಮಂತ ನಾಯಕರಲ್ಲೊಬ್ಬರಾದ ಡಾ॥ ಭೀಮಣ್ಣ ಖಂಡ್ರೆಯವರದು ಅಪರೂಪದ ವ್ಯಕ್ತಿತ್ವ. ಜನಮುಖಿ ಸುಧಾರಣೆಗಳಿಗಾಗಿ ಜೀವ ಸವೆಸಿದ ಅವರು ಶತಮಾನದ ಹೊಸ್ತಿನಲ್ಲಿದ್ದಾರೆ. ಅವರ ಹೋರಾಟದ ಬದುಕು, ಮಾನವೀಯ ಸಂವೇದನೆಗಳು, ರಾಜಕೀಯ ಸೇವಾ ಕಾರ್ಯಗಳು, ಮೌಲ್ಯಾಧಾರಿತ ಚಿಂತನೆಗಳು ಪ್ರಸಿದ್ಧವಾಗಿವೆ. ನೈತಿಕತೆಗೆ ಹೆಸರಾದ ಖಂಡ್ರೆಯವರ ಜೀವನದ ಬಹುತೇಕ ಘಟನೆಗಳು ಸಮಾಜಕ್ಕೆ ಮಾದರಿಯಾಗಿವೆ.

ಅವರ ಬಗ್ಗೆ ನಾಡಿನ ಪೂಜ್ಯರು, ರಾಜಕೀಯ ಧುರೀಣರು, ಅಧಿಕಾರಿಗಳು, ಅವರ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ ಗೌರವಾನ್ವಿತ ಮಹನೀಯರು "ಲೋಕನಾಯಕ" (ಡಾ॥ ಭೀಮಣ್ಣ ಖಂಡ್ರೆಯವರ ಅಭಿನಂದನ ಗ್ರಂಥ)ಕ್ಕೆ ಕಳುಹಿಸಿದ ಅಭಿಪ್ರಾಯಗಳು ನೂರಾರು. ಅವುಗಳ ಪೈಕಿ ಪೂಜ್ಯ ಸುತ್ತೂರು ಶ್ರೀಗಳ, ಭಾಲ್ಕಿ ಹಿರೇಮಠ ಪೂಜ್ಯರ, ರಾಜಕೀಯ ನಾಯಕರಾದ ಬಿ.ಎಸ್. ಯಡಿಯೂರಪ್ಪ ಮತ್ತು ಡಾ॥ ಭೀಮಣ್ಣ ಖಂಡ್ರೆಯವರ ಆಪ್ತಕಾರ್ಯದರ್ಶಿಯಾಗಿ, ಅವರ ಸಂಸ್ಥೆಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿರುವ ಡಾ॥ ವೈಜಿನಾಥ ಭಂಡೆಯವರ ಅಭಿಪ್ರಾಯಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ.

ಈ ನಾಲ್ವರ ಅಭಿಪ್ರಾಯಗಳಿಗೆ ಕಳಸವಿಟ್ಟಂತೆ ಸ್ವತಃ ಭೀಮಣ್ಣ ಖಂಡ್ರೆಯವ
ದಾಖಲಿಸಿಕೊಂಡಿರುವ ತಮ್ಮ ಆತ್ಮಕಥೆಯಲ್ಲಿನ ಸಂಗತಿಗಳು ರೋಚಕತೆಯಿಂ
ಕೂಡಿವೆ. ಸಮಕಾಲೀನ ಸಂದರ್ಭದಲ್ಲಿ ಕಾಣಿಸಿಕೊಳ್ಳುತ್ತಿರುವ ನೈತಿಕ ಅಧಃಪತನ
ಕಡಿವಾಣ ಹಾಕಬಲ್ಲ, ನಿಯಂತ್ರಿಸುವಂತಹ ಹಲವಾರು ಅಂಶಗಳು 'ನನ್ನ ಬಾಲ್ಯ
ನೆನಪುಗಳು ಮತ್ತು ಮರೆಯಲಾಗದ ಸಂಬಂಧಗಳು' ಸಂಪುಟದ
ಅಡಕಗೊಂಡಿವೆ. 'ನನ್ನ ಬದುಕಿನ ಉದ್ದೇಶ' ಪಠ್ಯವನ್ನು ಪ್ರಸ್ತುತ ಕೃತಿಯ
ಚೌಕಟ್ಟಿಗೆ ಆಯ್ಕೆ ಮಾಡಿಕೊಳ್ಳಲಾಗಿದೆ. ಇದು ಅವರ ಬದುಕಿನ ಉದ್ದೇಶವನ
ಕಟ್ಟಿಕೊಡುತ್ತದೆ.

"ಡಾ॥ ಭೀಮಣ್ಣ ಖಂಡ್ರೆಯವರು ಕಳೆದ ನಾಲ್ಕಾರು ದಶಕಗಳಿಗೂ ಮಿಕ್ಕಿ
ಅವಧಿಯಲ್ಲಿ ನಿಸ್ವಾರ್ಥತೆಯಿಂದ ಸಮಾಜಸೇವೆ ಮಾಡಿದ ಮಹನೀಯರ
ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಕೆಲವೆ ಅಪರೂಪದ ರಾಜಕಾರಣಿಗಳ
ಒಬ್ಬರು. ಕರ್ನಾಟಕ ಏಕೀಕರಣದ ಮುಂಚೂಣಿಯಲ್ಲಿದ್ದ ಇವರು ಬಿದರ ಜಿಲ್ಲೆಯ
ಕರ್ನಾಟದಲ್ಲಿಯೆ ಉಳಿಯಲು ತುಂಬ ಶ್ರಮಿಸಿದವರು. ಶಿಕ್ಷಣ, ರಾಜಕೀಯ
ಸಮಾಜಸೇವೆ ಮುಂತಾದ ಹಲವಾರು ಜನಪರ ಚಟುವಟಿಕೆಗಳಲ್ಲಿ ಸಕ್ರಿಯವಾ
ತೊಡಗಿಕೊಂಡು, ಶ್ರೀ ಸಾಮಾನ್ಯರ ಸರ್ವತೋಮುಖ ಅಭಿವೃದ್ಧಿ
ಕಾರಣರಾಗಿದ್ದಾರೆ. ಭಾಲ್ಕಿ ನಗರಸಭಾಧ್ಯಕ್ಷರಾಗಿ ದೀರ್ಘಕಾಲ ಸೇವೆಸಲ್ಲಿಸಿ
ಇವರು ಕರ್ನಾಟಕ ರಾಜ್ಯ ವಿಧಾನಸಭೆ ಮತ್ತು ವಿಧಾನ ಪರಿಷತ್ತುಗಳ ಸದಸ್ಯರಾ
ಸಾರಿಗೆ ಸಚಿವರಾಗಿ ವಿವಿಧ ರೀತಿಯಲ್ಲಿ ಸೇವೆ ಸಲ್ಲಿಸಿದ್ದಾರೆ. ಮಾನವೀಯ
ಮೌಲ್ಯಗಳನ್ನೆ ತಮ್ಮ ಜೀವನದ ಉಸಿರಾಗಿಸಿಕೊಂಡು, ಯಾರಿಗೂ ಅಂಜ
ಶರಣರಾಗಿ ಬಾಳಿದ್ದಾರೆ. ಇವರ ನಿಸ್ವಾರ್ಥ ಬದುಕನ್ನು ಗಮನಿಸಿ ಗುಲಬರ್ಗಾ
ವಿಶ್ವವಿದ್ಯಾಲಯವು ಗೌರವ ಡಾಕ್ಟರ್ ಆಫ್ ಲಾ ಪದವಿಯನ್ನು ಪ್ರದಾನಿಸಿ
ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಸದಸ
ಸಂಖ್ಯೆಯನ್ನು ಅಭಿವೃದ್ಧಿಪಡಿಸಿದುದು ಮತ್ತು ಬೆಂಗಳೂರಿನಲ್ಲಿ ವೀರಶೈ

ಲಿಂಗಾಯತ ಭವನವನ್ನು ನಿರ್ಮಿಸಿದುದು ಇವರ ಅಸಾಧಾರಣ ಕರ್ತೃತ್ವಶಕ್ತಿಯ ದ್ಯೋತಕವಾಗಿದೆ. ಈ ಇಳಿವಯಸ್ಸಿನಲ್ಲಿಯೂ ತುಂಬ ಉತ್ಸಾಹದಿಂದ ಜನಪರ ಕಾರ್ಯಗಳಲ್ಲಿ ನಿರತರಾಗಿರುವ ಡಾ॥ ಖಂಡ್ರೆಯವರು ಮುಂದಿನ ಜನಾಂಗಕ್ಕೆ ದಾರಿದೀಪವಾಗಬಲ್ಲ ಸಾಮರ್ಥ್ಯ ಹೊಂದಿದ್ದಾರೆ.

ಪೂಜ್ಯ ಶ್ರೀ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು
ಜಗದ್ಗುರು ವೀರಸಿಂಹಾಸನ ಮಹಾಸಂಸ್ಥಾನಮಠ, ಸುತ್ತೂರು,
ಮೈಸೂರು ಜಿಲ್ಲೆ

* * *

ಲೋಕನಾಯಕ ಶ್ರೀ ಭೀಮಣ್ಣ ಖಂಡ್ರೆಯವರು ಕೇವಲ ವ್ಯಕ್ತಿಯಲ್ಲ ಪ್ರಚಂಡ ಶಕ್ತಿಯಾಗಿದ್ದಾರೆ. ತೊಂಬತ್ತರ ಇಳಿ ವಯಸ್ಸಿನಲ್ಲಿಯೂ ಅವರ ಪ್ರಭಾವ ಶಕ್ತಿ ಕುಗ್ಗಿಲ್ಲ. ಬೀದರ ಜಿಲ್ಲೆಯ ಜನತೆಯ ಎಲ್ಲರ ಹೃದಯದಲ್ಲಿ ವಿರಾಜಮಾನರಾಗಿದ್ದಾರೆ. ಅವರೊಬ್ಬ ಜನನಾಯಕ, ಜನತೆಯ ನಾಯಕ, ಜನಪ್ರಿಯ ನಾಯಕ, ಲೋಕನಾಯಕರೆಂದು ಅವರ ವೈರಿಯೂ ಒಪ್ಪಿಕೊಳ್ಳುತ್ತಾನೆ. ಭೀಮಣ್ಣ ಖಂಡ್ರೆಯವರು ಒಂದು ಕರೆ ಕೊಟ್ಟರೆ ಸಾಕು, ಬೀದರ ಜಿಲ್ಲೆಯ ಮೂಲೆ-ಮೂಲೆಗಳಿಂದ ಲಕ್ಷ-ಲಕ್ಷ ಜನ ಬರುತ್ತಾರೆ. ಅಂತಹ ಶಕ್ತಿ ಅವರಿಗೆ ಹಿಂದೆಯೂ ಇತ್ತು; ಇಂದೂ ಇದೆ, ಎಂದು ಹೇಳಲು ಹೆಮ್ಮೆ ಎನಿಸುತ್ತದೆ.

ನಮ್ಮ ಶ್ರೀಮಠಕ್ಕೂ ಅವರಿಗೂ ಅವಿನಾಭಾವ ಸಂಬಂಧ ಇದೆ. ನಮ್ಮ ಗುರುಗಳು ಈ ಭಾಗದಲ್ಲಿ ಶಿಕ್ಷಣ ಪ್ರಸಾರವಾಗಬೇಕು, ಎಂದು "ಶಾಂತಿವರ್ಧಕ ಶಿಕ್ಷಣ ಸಂಸ್ಥೆ" ಸ್ಥಾಪಿಸಿದ್ದರು. ಹಗಲು ರಾತ್ರಿ ದುಡಿಯುತ್ತಿದ್ದರು. ಖಂಡ್ರೆಯವರು ಮುಂದೆ ಬಂದು, ಗುರುಕಾರ್ಯಕ್ಕೆ ಟೊಂಕಕಟ್ಟಿ ನಿಂತರು. ಬಸವಕಲ್ಯಾಣದ ಕಡೆ ಯಾವುದೆ ಸರಕಾರ ಯಾವ ಮಠಾಧೀಶರು ಲಕ್ಷ್ಯ ಹಾಕದಿದ್ದಾಗ, ನಮ್ಮ

ಗುರುಗಳು ಬಸವಕಲ್ಯಾಣಕ್ಕೆ ಬಂದು ಅನುಭವ ಮಂಟಪ ನಿರ್ಮಾಣವಾಗಬೇಕು ಎಂದು ಸಂಕಲ್ಪ ತೊಟ್ಟರು. ನಮ್ಮ ಗುರುಗಳಾದ ಚೆನ್ನಬಸವ ಪಟ್ಟದ್ದೇವರ ಆ ಸಂಕಲ್ಪಶಕ್ತಿ ಪೂರ್ಣ ಮಾಡಲು ಅಹೋರಾತ್ರಿ ಖಂಡ್ರೆಯವರು ಶ್ರಮಿಸಿದರು. ಇಂದಿಗೂ ಆ ಸಂಬಂಧ ಹಾಗೆ ಮುಂದುವರೆದಿದೆ, ಎಂದು ಹೇಳಲು ಅಭಿಮಾನಪಡುತ್ತೇನೆ.

ಪೂಜಾನಿಷ್ಟರೂ, ನೀತಿವಂತರೂ ತತ್ವನಿಷ್ಟರು, ಛಲವಂತರೂ ನ್ಯಾಯ ನಿಷ್ಠುರಿ ದಾಕ್ಷಣ್ಯ ಪರನಾನಲ್ಲ ಲೋಕವಿರೋಧಿ ಶರಣನಾರಿಗೂ ಅಂಜುವವನಲ್ಲ ಎಂಬ ಬಸವವಾಣಿ ನಿತ್ಯ ಬದುಕಿನಲ್ಲಿ ಅಳವಡಿಸಿಕೊಂಡವರು ಯಾವ ಪಕ್ಷದಲ್ಲಿದ್ದರೂ ಅನ್ಯಾಯ ಕಂಡರೆ, ಅಸತ್ಯ ಕಂಡರೆ, ಪ್ರತಿಭಟನೆ ಮಾಡಿ, ಅವರಿಗ ಎದುರಿಸಿ, ನ್ಯಾಯ ಪಡೆಯುತ್ತಿದ್ದರು. ಇದರಿಂದ ಮುಂದೆ ತಮ್ಮ ರಾಜಕೀಯ ಭವಿಷ್ಯಕ್ಕೆ ತೊಂದರೆಯಾದೀತೆಂದು ಜೀವನದುದ್ದಕ್ಕೂ ಲೆಕ್ಕ ಹಾಕಿದವರೆ ಅಲ್ಲ ವ್ಯಕ್ತಿ ಪೂಜಕರಲ್ಲ, ತತ್ವನಿಷ್ಠರು. ಎಂಜಲಿಗಾಗಿ ಆಸೆ ಮಾಡಿದವರಲ್ಲ; ತತ್ವಸಿದ್ಧಾಂತವ ಉಸಿರು ಮಾಡಿಕೊಂಡವರು. ಪಕ್ಷದ ಹೆಸರಿನಲ್ಲಿ ಮಿಂಚಿದವರಲ್ಲ; ತಮ್ಮ ವ್ಯಕ್ತಿತ್ವದಿಂದ ಪಕ್ಷವನ್ನು ಮಿಂಚಿಸಿದವರು. ಇವರು ಶತಾಯುಷಿಯಾಗಲಿ ಧರ್ಮಗುರು ಬಸವರಕ್ಷೆ ಲಿಂ. ಪೂಜ್ಯ ಚೆನ್ನಬಸವ ಪಟ್ಟದ್ದೇವರ ಆಶೀರ್ವಾದ ಶಕ್ತಿ ಸದಾ ಇರಲೆಂದು ಹೃದಯಪೂರ್ವಕ ಹಾರೈಸುತ್ತೇವೆ.

ಪೂಜ್ಯ ಶ್ರೀ ಮ.ಘ.ಚ.ಡಾ. ಬಸವಲಿಂಗ ಪಟ್ಟದ್ದೇವರು
ಹಿರೇಮಠ ಸಂಸ್ಥಾನ, ಭಾಲ್ಕಿ, ಜಿ: ಬೀದರ

* * *

ಕರ್ನಾಟಕ ಕಂಡ ಧೀಮಂತ ನಾಯಕ ಶ್ರೀ ಭೀಮಣ್ಣ ಖಂಡ್ರೆಯವರು ೯೦ ವಸಂತಗಳನ್ನು ಪೂರ್ಣಗೊಳಿಸಿದ ಸಂದರ್ಭದಲ್ಲಿ ಅಭಿನಂದನ ಗ್ರಂಥವನ್ನು ಸಮರ್ಪಿಸುತ್ತಿರುವದು ಸಂತಸದ ಸಂಗತಿಯಾಗಿದೆ. ಶ್ರೀಯುತರು ರೈತಪರ ಹೋರಾಟ, ರಾಜಕಾರಣ, ವೀರಶೈವ ಸಮಾಜದ ಸಂಘಟನೆ, ಶೈಕ್ಷಣಿಕ ಸಂಘದ ಅಭಿವೃದ್ಧಿ, ಮತ್ತಿತರ ಅನೇಕ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದ್ದು, ಅನುಕರಣಾರ್ಥಕ ಸೇವೆ ಸಲ್ಲಿಸುವ ಮೂಲಕ ಸಾರ್ವಜನಿಕ ಜೀವನದಲ್ಲಿ ಅಳಿಸಲಾಗದ ಹೆಜ್ಜೆಗುರುತುಗಳನ್ನು ಮೂಡಿಸಿದ್ದಾರೆ.

ಬಸವ ತ್ವತಗಳನ್ನು ತಮ್ಮ ವೈಯಕ್ತಿಕ ಮತ್ತು ಸಾರ್ವಜನಿಕ ಜೀವನದಲ್ಲಿ ಅತ್ಯಂತ ನಿಷ್ಠೆಯಿಂದ ಅಳವಡಿಸಿಕೊಂಡಿರುವ ಮಾನ್ಯ ಭೀಮಣ್ಣ ಖಂಡ್ರೆಯವರ ಬದುಕು ಮತ್ತು ಸಾಧನೆಯ ಅಂಶಗಳು ಸಾರ್ವಜನಿಕ ಜೀವನದಲ್ಲಿರುವವರೆಲ್ಲರೂ ಅನುಸರಿಸಬಹುದಾದ ಮಾದರಿಯಾಗಿದೆ. ನಿಷ್ಠೆ, ಶ್ರದ್ಧೆ, ಪ್ರಾಮಾಣಿಕತೆ ಮತ್ತು ದಕ್ಷತೆಯಲ್ಲಿ ಭೀಮಣ್ಣ ಖಂಡ್ರೆಯವರಿಗೆ ಸಾಟಿಯಾಗಬಲ್ಲ ವ್ಯಕ್ತಿಗಳು ವಿರಳವೆಂದೇ ಹೇಳಬಹುದು.

ಹೋರಾಟಗಾರರಾಗಿ, ರೈತ ಸಂಘಟಕರಾಗಿ, ಶಿಕ್ಷಣಸಂಸ್ಥೆಗಳ ಸಂಸ್ಥಾಪಕರಾಗಿ, ಶಾಸಕರಾಗಿ, ಸಚಿವರಾಗಿ ಹಾಗೂ ಎಲ್ಲಕ್ಕೂ ಮಿಗಿಲಾಗಿ ವೀರಶೈವ ಸಮುದಾಯವನ್ನು ಸಂಘಟಿಸಿ, ದಕ್ಷ ನಾಯಕತ್ವ ನೀಡುವಲ್ಲಿ ಮೆರೆದಿರುವ ಜನಪರ ಕಾಳಜಿ ಪ್ರಶಂಸನೀಯವಾದುದಾಗಿದೆ. ಸರಳ ಸಜ್ಜನರಾಗಿದ್ದು, ವಿಶಿಷ್ಟ ಅನುಭವವನ್ನು ಪಡೆದ ಒಬ್ಬ ಉತ್ತಮ ರಾಜಕೀಯ ಮುತ್ಸದ್ಧಿ ಮತ್ತು ದಕ್ಷ ಆಡಳಿತಗಾರರು.

ಅವರು ತಮ್ಮ ಹಲವಾರು ದಶಕಗಳ ಸುದೀರ್ಘ ಜೀವನದಲ್ಲಿ ಪರಿಪಾಲಿಸಿ, ಆಚರಿಸಿಕೊಂಡು ಬಂದಿರುವ ಗುಣವಿಶೇಷಗಳು ನಮ್ಮೆಲ್ಲರಿಗೂ ಅನುಕರಣ

ಯೋಗ್ಯವಾಗಿವೆ. ಹೈದ್ರಾಬಾದ ಕರ್ನಾಟಕ ಭಾಗದಿಂದ ಮೂಡಿಬಂದಿರುವ ಮುಂಚೂಣಿ, ಆದರ್ಶಪ್ರಾಯ ನಾಯಕರಲ್ಲಿ ಖಂಡ್ರೆಯವರು ಅಗ್ರಗಣ್ಯರು. ರಾಜ್ಯದ ಮುಖ್ಯಮಂತ್ರಿಗಳ ಹುದ್ದೆಗೆ ತಕ್ಕ ಎಲ್ಲ ಅರ್ಹತೆಗಳನ್ನು ಹೊಂದಿದವರಾದರೂ ಕೂಡಾ ರಾಜಕಾರಣದ ಸಂಕೀರ್ಣ ಸನ್ನಿವೇಶಗಳಿಂದ ಅವಕಾಶ ವಂಚಿತರಾದ ಮಾನ್ಯ ಖಂಡ್ರೆಯವರು ಉತ್ಕೃಷ್ಟ ಸಾರ್ವಜನಿಕರ ಸೇವೆಗಳ ಮೂಲಕ ತತ್ಸಮಾನ ಸಾರ್ಥಕತೆ ಕಂಡುಕೊಂಡಿದ್ದಾರೆ.

ನಿಜಬಸವಭಕ್ತ, ಶರಣ ತತ್ವಗಳ ಪ್ರತಿಪಾದಕ, ವೈಯಕ್ತಿಕ ಮತ್ತು ಸಾರ್ವಜನಿಕ ಜೀವನದಲ್ಲಿ ನಿಸ್ಪೃಹತೆ ಮತ್ತು ದಕ್ಷತೆಯಿಂದ ಸತ್ಯಶುದ್ಧ ಕಾಯಕ ಜೀವಿಯಾಗಿ ಕಂಗೊಳಿಸುತ್ತ ನಮ್ಮೆಲ್ಲರಿಗೂ ಸ್ಫೂರ್ತಿದಾಯಕರಾಗಿ, ಆದರ್ಶಪ್ರಾಯರಾಗಿದ್ದಾರೆ. ಇವರು ೯೦ ವರ್ಷಗಳ ಸಾರ್ಥಕ ಬದುಕನ್ನು ಪೂರೈಸಿರುವ ಸಂದರ್ಭದ ನೆನಪಿನಲ್ಲಿ ಉಪಯುಕ್ತ ಅಭಿನಂದನ ಗ್ರಂಥವು ಸುಂದರವಾಗಿ ಮೂಡಿಬರಲೆಂದು ಹಾಗೂ ಮಾನ್ಯರು ಶತಾಯುಷಿಗಳಾಗಿ ನಾಡಿಗೆ ಇನ್ನೂ ಹೆಚ್ಚಿನ ಸೇವೆ ಮತ್ತು ಮಾರ್ಗದರ್ಶನ ನೀಡಲೆಂದು ಶುಭ ಹಾರೈಸುತ್ತೇನೆ.

ಶ್ರೀ ಬಿ.ಎಸ್ ಯಡಿಯೂರಪ್ಪ
ಮುಖ್ಯಮಂತ್ರಿಗಳು,
ಕರ್ನಾಟಕ ಸರಕಾರ, ಬೆಂಗಳೂರು

* * *

ಶ್ರೀ ಭೀಮಣ್ಣ ಖಂಡ್ರೆಯವರು ಧಾರ್ಮಿಕ ಪರಿಸರದಲ್ಲಿ ಬೆಳೆದು ರಾಜನೀತಿ ಪ್ರವೇಶಿಸಿದರು. ಧರ್ಮದ ಮುಖಾಂತರ ಸಲ್ಲಿಸಬಹುದಾಗಿದ್ದ ತಮ್ಮ ಜನಸೇವೆಯನ್ನು ಅವರು ರಾಜನೀತಿಯ ಮುಖಾಂತರ ಸಲ್ಲಿಸಲು ಮುಂದಾದರು. ಅವರ ರಾಜನೀತಿಯು ಮಾನವೀಯ ಧರ್ಮದ ಅಡಿಪಾಯದ ಮೇಲೆ ನಿಂತಿರುವುದರಿಂದ ಅವರ ರಾಜಕಾರಣಕ್ಕೆ ಒಂದು ವಿಶಿಷ್ಟ ಮೌಲ್ಯ ಪ್ರಾಪ್ತವಾಗಿದೆ. ಅವರು ಯಾವುದೆ ಒಂದು ಕಾರ್ಯಕ್ಕೆ ಕೈ ಹಾಕುವಾಗ ಮೊದಲು ಅದರ ಹಿಂದು, ಮುಂದು ಎಲ್ಲವನ್ನು ಯೋಚಿಸಿಯೆ ಕೈಹಾಕುತ್ತಿದ್ದುದರಿಂದ ಅವರು ಒಂದು ಸಲ ಯಾವುದೆ ಕೆಲಸ ಕೈಗೆ ತೆಗೆದುಕೊಂಡರೆ ಅದನ್ನು ಪೂರ್ಣ ಸಾಧಿಸುವವರೆಗೆ ಬಿಡುತ್ತಿರಲಿಲ್ಲ. ಇವರ ಜೀವನ ಒಂದು ಹಟಯೋಗಿಯಂತೆ, ಒಬ್ಬ ಸಾಧಕನಂತೆ. ಒಂದು ಕೆಲಸದ ಮೇಲೆ ತನ್ನ ಚಿತ್ತ ಕೇಂದ್ರೀಕರಿಸಿದರೆ ಅದನ್ನು ಅದರ ಚರಮಗತಿಗೆ ತಲುಪಿಸದೆ ಬಿಡುವವರಲ್ಲ. ಆದುದರಿಂದ ಜನರು ಇವರನ್ನು ಛಲಗಾರ, ಹಟವಾದಿ ಎಂದು ಕರೆಯವುದುಂಟು. ಇವರ ಹಟ, ಛಲಗಳು ಪರಾರ್ಥಕ್ಕಾಗಿದ್ದುದರಿಂದ ಅವು ಅವರಿಗೆ ಶೋಭೆಯನ್ನು ತಂದುಕೊಡುತ್ತಿದ್ದವು. ಶ್ರೀ ಭೀಮಣ್ಣ ಖಂಡ್ರೆ ಒಬ್ಬ ಶರಣರು. ಅಕಳಂಕ ಚರಿತರು. ಅವರಲ್ಲಿರುವುದು ಶರಣರಿಗೆ ತಕ್ಕ ಛಲ. "ಛಲಬೇಕು ಶರಣಂಗೆ ಪರಸತಿ, ಪರಧನವನೊಲ್ಲೆನೆಂಬ" ಎನ್ನುವಂತೆ ಅನ್ಯರದೇನನ್ನೂ ಆಪೇಕ್ಷಿಸದೆ, ತನ್ನಿಂದ ಸಾಧ್ಯವಾದ ಜನ (ಜಂಗಮ) ಸೇವೆ ಸಲ್ಲಿಸಬೇಕೆಂಬ ಸಾತ್ವಿಕ ಛಲ ಅವರದು. ಇದನ್ನು ಸಾಧಿಸಲು ಅವರು ಹಗಲಿರುಳು ಶ್ರಮಿಸಿದರು. ಬಡವರಿಗಾಗಿ, ರೈತರಿಗಾಗಿ, ಮಹಿಳೆಯರಿಗಾಗಿ, ವಿದ್ಯಾರ್ಥಿಗಳಿಗಾಗಿ, ಕೂಲಿ-ಕಾರ್ಮಿಕರಿಗಾಗಿ ಅವರು ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅವರಂಥ ಅಪರೂಪದ ಸಾಧಕರು, ಹೋರಾಟಗಾರರು, ನಾಡು-ನುಡಿಯ ಬಗ್ಗೆ ಅಪಾರವಾದ ಅಭಿಮಾನವುಳ್ಳವರು.

ಡಾ. ವೈಜನಾಥ ಭಂಡೆ, ನಿವೃತ್ತ ಪ್ರಾಂಶುಪಾಲರು, ಭಾಲ್ಕಿ

* * *

ದೇವರು ನನ್ನನ್ನು ಏಕೆ ಹುಟ್ಟಿಸಿದ್ದಾನೊ ಗೊತ್ತಿಲ್ಲ. ನಾನು ಏನಾದರೂ ಸಾಧಿಸಿ ಈ ಜನರಿಗೆ ತೋರಿಸಬೇಕು ಎನ್ನುವ ಯಾವುದೆ ದೊಡ್ಡ ಉದ್ದೇಶ ಇಟ್ಟುಕೊಂಡು ಯಾವ ಕೆಲಸವೂ ಮಾಡಿಲ್ಲ. ಅಂದಂದಿನ ಪರಿಸ್ಥಿತಿಗಳು, ಮತ್ತು ದೇವರು ನನ್ನ ಮುಂದೆ ಒಡ್ಡಿದ ಸವಾಲುಗಳನ್ನು ಸ್ವೀಕರಿಸುತ್ತ, ಹೋರಾಡುತ್ತ ಬಂದಿದ್ದೇನೆ. ಪರಮಾತ್ಮ ನನಗೆ ಹಣ ಕೊಡಲಿಲ್ಲ; ದುಡಿಯಲು ಅವಕಾಶ ಕೊಟ್ಟನು. ನಾನು ಜನಸೇವೆಯೆ ಜನಾರ್ದನ ಸೇವೆಯೆಂದು ಪ್ರಾಮಾಣಿಕತೆಯಿಂದ ದುಡಿದಿದ್ದೇನೆ. ಯಾರಿಂದಲೂ ಲಂಚ, ರೊಕ್ಕ ತೆಗೆದುಕೊಂಡಿಲ್ಲ, ಹಿರಿಯರು ಬಿಟ್ಟು ಹೋದ ಆಸ್ತಿಗೆ ಹೊರತು ನಾನು ಯಾವ ಆಸ್ತಿಯೂ ಸಂಪಾದಿಸಲಿಲ್ಲ. ಹಿರಿಯರು ಕಟ್ಟಿಸಿದ ಮನೆ ಹೊರತು, ಒಂದು ಕೋಣೆ ಕಟ್ಟಿಸಿಕೊಂಡಿಲ್ಲ. ಒಂದು ಗುಂಟೆ ಜಮೀನು ಖರೀದಿಸಲಿಲ್ಲ. ದೇವರು ನನಗೆ ಹಣ ಕೊಡಲಿಲ್ಲವೆಂದು ನಾನೆಂದೂ ನಾನು, ನಾನೆಂಬ ಸ್ವಾರ್ಥದ ಚಿಂತೆ ಕೂಡ ಮಾಡಲಿಲ್ಲ. ನನಗೆ ಕೋಟ್ಯಾವಧಿ ಹಣದ ಬದಲು ಕೋಟ್ಯಾವಧಿ ಅಭಿಮಾನಿಗಳನ್ನು ಕೊಟ್ಟಿದ್ದಾನಲ್ಲ? ಇದೇನು ಹಣಕ್ಕಿಂತ ಕಡಿಮೆಯೆ? ಖಂಡಿತ ಇಲ್ಲ. ಜನರು ನನ್ನನ್ನು ನಂಬಿದ್ದಾರೆ. ನನಗಿಂತ ಭಾಗ್ಯಶಾಲಿಗಳಾರೂ ಇಲ್ಲ.

ಶೇಖ್ ಸಾದಿಕ್ ತನ್ನ ಪರ್ಷಿಯನ್ ಪದ್ಯವೊಂದರಲ್ಲಿ ಹೀಗೆ ಹೇಳುತ್ತಾನೆ–

'ಮನ್ ತು ಶುದಮ್। ತು ಮನ್ ಶುದೀ।
ಮನ್‌ತನ್ ಶುದಮ್। ತು ಮನ್ ಶುದೀ॥'

ಎಂದರೆ ನಾನು ನೀನಾದೆ, ನೀನು ನಾನಾದೆ। ನಾನು ಜಡಶರೀರನಾದೆ, ನೀನು ಚೇತನಾತ್ಮನಾದೆ। ನಾವಿಬ್ಬರೂ ಕೂಡಿ ಮನುಷ್ಯರಾದೇವು॥ ಇದು ನಮ್ಮ ಹಿಂದು ಅಧ್ಯಾತ್ಮ ಚಿಂತನೆಗೆ ತುಂಬ ಹತ್ತಿರವೆನಿಸುತ್ತದೆ. ನಾನು, ನೀನುಗಳ ನಡುವಿನ ಅಂತರ ಕಳೆದು ಎರಡೂ ಒಂದಾದಾಗ ಮನುಷ್ಯತ್ವ ಪ್ರಾಪ್ತವಾಗುತ್ತದೆ. "ನಾನು" ಎನ್ನುವುದು ಹೋಗಿ, "ನಾವು" ಎನ್ನುವುದು ಬರುತ್ತದೆ. ನಾನು ಕೂಡ

ಎಲ್ಲರನ್ನು ನನ್ನವರೆಂದು ತಿಳಿದುಕೊಂಡು ಬಂದಿದ್ದೇನೆ.

(ಡಾ॥ ಭೀಮಣ್ಣ ಖಂಡ್ರೆಯವರ ಆತ್ಮಕಥೆ–
ಅಪ್ರಕಟಿತ ಕೃತಿಯ ಆಯ್ದಭಾಗ : ಕೃಪೆ ಡಾ. ವೈಜಿನಾಥ ಭಂಡೆ)

ಹೀಗೆ ನಾಡಿನ ಯಾವುದೇ ಕ್ಷೇತ್ರದ ಯಾರೇ ವ್ಯಕ್ತಿಗಾಗಲಿ ಹಿರಿಯರು ಮತ್ತು ಸಾತ್ತ್ವಿಕ ಜೀವಿಗಳಾದ ಭೀಮಣ್ಣ ಖಂಡ್ರೆಯವರ ಧನಾತ್ಮಕವಾಗಿ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾರೆ. ಸಾರ್ವಜನಿಕ ಜೀವನದಲ್ಲಿ ಅವರಂತಹ ಸರಳ ಸಜ್ಜನಿಕೆಗೆ ಹೆಸರಾದ ವ್ಯಕ್ತಿಗಳು ಸಿಗುವುದು ಬಹಳ ವಿರಳ. ರಾಜಕೀಯ ಕ್ಷೇತ್ರದಲ್ಲಿದ್ದರೂ ಅವರೆಂದೂ ಸಾತ್ತ್ವಿಕತೆಯನ್ನು ಬಿಟ್ಟುಕೊಟ್ಟವರಲ್ಲ. ತಮ್ಮದಲ್ಲದ ವಸ್ತುವಿನ ಬಗ್ಗೆ ಆಸೆಪಟ್ಟವರಲ್ಲ. ಶರಣರು ಹೇಳಿದಂತೆ ಪರಧನಕ್ಕೆ ಅಪೇಕ್ಷೆಪಟ್ಟವರಲ್ಲ. ಪರರ ವಸ್ತುವಿಗೆ ಮೋಹಿಸಿದವರಲ್ಲ. ಪರಸ್ತ್ರೀಯನ್ನು ಸಹೋದರಿಯರಂತೆ ಕಂಡು ಗೌರವಿಸಿದ್ದಾರೆ. ಇದಕ್ಕೆಲ್ಲ ಅವರ ತಂದೆ ತಾಯಿಗಳಿಂದ, ಹಿರಿಯರಿಂದ, ಪೂಜ್ಯರಿಂದ ಲಭಿಸಿದ ಸಂಸ್ಕಾರವೇ ಕಾರಣವೆಂದು ಹೇಳಬಹುದಾಗಿದೆ.

***

೧೦. ಮಾನ ಸನ್ಮಾನಗಳು

ಲೋಕನಾಯಕ ಡಾ. ಭೀಮಣ್ಣ ಖಂಡ್ರೆ ಅವರು ಬೀದರ ಜಿಲ್ಲೆಯ ಹಿರಿಯ ನಾಯಕರಾಗಿದ್ದರೂ ರಾಜ್ಯ ರಾಜಕಾರಣದಲ್ಲಿ ಹೆಸರು ಮಾಡಿರುವ ಅಪರೂಪದ ಗಣ್ಯವ್ಯಕ್ತಿಗಳಾಗಿದ್ದಾರೆ. ಬಸವನಿಷ್ಠೆ, ಹಠಮಾರಿ ಸ್ವಭಾವದಿಂದಾಗಿ, ವೈಯಕ್ತಿಕವಾಗಿ ಅವರು ಬಹಳಷ್ಟು ಕಳೆದುಕೊಂಡಿದ್ದಾರೆ. ಸಭ್ಯ ಸುಸಂಸ್ಕೃತ ವ್ಯಕ್ತಿತ್ವದ ಪ್ರಭಾವಳಿ, ದೇಶಿ ಆಹಾರ ಪದ್ಧತಿ, ಉಡುಗೆ-ತೊಡಿಗೆಯನ್ನು ರೂಢಿಸಿಕೊಳ್ಳುವಷ್ಟು ನಮ್ಮವರಿಗೆ ಮಾದರಿಯಾಗಿದ್ದಾರೆ. ಬ್ರಿಟಿಷರ ಕುತಂತ್ರ ಹಾಗೂ ನಿಜಾಮರ ಪಕ್ಷಪಾತ ಆಡಳಿತದ ವಿರುದ್ಧ ಬಂಡಾಯ, ಸ್ವಾತಂತ್ರ್ಯದ ಕಹಳೆ ಊದಿದ್ದಕ್ಕಾಗಿ ಜೈಲಿಗೂ ಹೋಗಿ ಬಂದವರಾಗಿದ್ದಾರೆ. ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಧಾರ್ಮಿಕ ಕ್ಷೇತ್ರಗಳಿಗೆ ತಮ್ಮದೆ ಆದ ವಿಶಿಷ್ಟ ಕೊಡುಗೆಯನ್ನು ಕೊಟ್ಟಿದ್ದಾರೆ.

ಭೀಮಣ್ಣ ಖಂಡ್ರೆಯವರ ಸಾರ್ಥಕ ಸೇವೆ, ಜೀವನ ಸಿದ್ಧಾಂತಗಳನ್ನು ಪರಿಗಣಿಸಿ ಅನೇಕ ಸಂಘ ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ. ಕೃಷಿ ಅಧ್ಯಯನಕ್ಕಾಗಿ ಸಕ್ಕರೆ ಕಣಜವಾಗಿದ್ದ ಕೋರಿಯಾ ಪ್ರವಾಸವನ್ನು ಮುಗಿಸಿ ಬಂದಾಗ ಬೀದರ ಸಹಕಾರ ಸಕ್ಕರೆ ಕಾರ್ಖಾನೆ ವತಿಯಿಂದ ೦೮.೦೯.೧೯೮೧ರಂದು; ಚೆನ್ನಬಸವೇಶ್ವರ ಕಾಲೇಜು ಭಾಲ್ಕಿ ವತಿಯಿಂದ ೧೦.೦೯.೧೯೮೧ರಂದು ಸನ್ಮಾನಿಸಲಾಯಿತು.

ಕರ್ನಾಟಕ ಸರ್ಕಾರವು ೦೧.೧೧.೨೦೦೬ರಂದು ಸುವರ್ಣ ಕರ್ನಾಟಕ ಏಕೀಕರಣ ಪ್ರಶಸ್ತಿ ನೀಡಿದೆ. ಆ ಸಂದರ್ಭದಲ್ಲಿ ಖಂಡ್ರೆಯವರಿಗೆ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಬೀದರನ ಅಕ್ಕಮಹಾದೇವಿ ಮಹಿಳಾ ಮಹಾವಿದ್ಯಾಲಯದಲ್ಲಿ ಭವ್ಯವಾದ ರೀತಿಯಲ್ಲಿ ಅಭಿನಂದನೆ ಸಲ್ಲಿಸಲಾಯಿತು.

ಪ್ರಭುರಾವ ಕಂಬಳಿವಾಲೆ ಕನ್ನಡ ಸೇವಾ ಪ್ರತಿಷ್ಠಾನವು ಮಾನ್ಯ ಖಂಡ್ರೆಯವರ ಸೇವೆಯನ್ನು ಗಮನಿಸಿ 'ಕನ್ನಡದ ಕಣ್ಮಣಿ ಪ್ರಭುರಾವ ಕಂಬಳಿವಾಲೆ' ಪ್ರಶಸ್ತಿಯನ್ನು ೧೫.೦೫.೨೦೧೧ರಂದು ನೀಡಿದೆ. ಜಿಲ್ಲಾ ರಂಗಮಂದಿರ, ಬೀದರನಲ್ಲಿ ನಡೆದ ಸಮಾರಂಭದಲ್ಲಿ ಬೀದರ ಸಂಸದರಾದ ಎನ್. ಧರ್ಮಸಿಂಗ, ಮಾಜಿ ಸಚಿವರಾದ ವೈಜಿನಾಥ ಪಾಟೀಲ, ಶ್ರೀ ಖಾಜಿ ಅರ್ಷದ ಅಲಿ, ಬೀದರ ಜಿಲ್ಲೆಯ ಎಲ್ಲ ಶಾಸಕರು, ಡಾ॥ ಬಸವರಾಜ ಸಬರದ, ಪ್ರೊ. ಸಿದ್ರಾಮಪ್ಪ ಮಾಸಿಮಾಡೆ ಮತ್ತು ಗಣ್ಯಮಾನ್ಯರ ಸಮ್ಮುಖದಲ್ಲಿ ಈ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

ಡಾ. ಭೀಮಣ್ಣ ಖಂಡ್ರೆಯವರ ಜೀವಿತಾವಧಿಯ ಜನಸೇವೆಗಾಗಿ ಗುಲಬರ್ಗಾ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿತು. ಆಗ ಭಾಲ್ಕಿಯ ಗ್ರಾಮೀಣ ಅಭಿಯಾಂತ್ರಿಕ ಮಹಾವಿದ್ಯಾಲಯದ ಪ್ರಾಂಗಣದಲ್ಲಿ ಅದ್ದೂರಿ ಸಮಾರಂಭ ಏರ್ಪಡಿಸಿ ದಿನಾಂಕ ೦೬.೦೩.೨೦೧೨ರಂದು ಖಂಡ್ರೆಯವರಿಗೆ ಅಭಿನಂದನೆ ಸಲ್ಲಿಸಲಾಯಿತು.

***

೧೨. ಕೊನೆಯಿಲ್ಲದ ನುಡಿ

ಹಿಡಿವ ಕೈಯ ಮೇಲೆ ಕತ್ತಲೆಯಯ್ಯಾ
ನೋಡುವ ಕಂಗಳ ಮೇಲೆ ಕತ್ತಲೆಯಯ್ಯಾ
ನೆನೆವ ಮನದ ಮೇಲೆ ಕತ್ತಲೆಯಯ್ಯಾ
ಕತ್ತಲೆಯೆಂಬುದು ಇತ್ತಲೆಯಯಯ್ಯಾ
ಗುಹೇಶ್ವರನೆಂಬುದು ಅತ್ತಲೆಯಯ್ಯಾ

ಹನ್ನೆರಡನೆಯ ಶತಮಾನದಲ್ಲಿದ್ದ ಬಸವಾದಿ ಶಿವಶರಣರಿಗೆ ಮಾರ್ಗದರ್ಶಕ, ಚಲನಶೀಲ ಪ್ರಕ್ರಿಯೆಗೆ ಆಧಾರಸ್ಥಂಭವಾಗಿದ್ದ ಅಲ್ಲಮಪ್ರಭುದೇವರು ತಮ್ಮ ವಚನದ ಮೂಲಕ ಮನುಷ್ಯರು ತಮ್ಮ ಹುಟ್ಟು ಸಾವುಗಳ ನಡುವಿನ ಅವಧಿಯಲ್ಲಿ, ಬದುಕನ್ನು ಹೇಗೆ ಅರ್ಥಪೂರ್ಣಗೊಳಿಸಿಕೊಳ್ಳಬೇಕು ಎಂಬುದನ್ನು ಅತ್ಯಂತ ಸರಳವಾಗಿ ಮತ್ತು ಅಷ್ಟೇ ಸ್ಪಷ್ಟವಾಗಿ ನಿರ್ದೇಶಿಸಿದ್ದಾರೆ.

ಪ್ರತಿಯೊಬ್ಬರು ತಾವು ಯಾವ ವೃತ್ತಿಯನ್ನು ಹೇಗೆ ಪಾಲಿಸಬೇಕು. ಏನನ್ನು ಓದಬೇಕು ಅಥವಾ ಸುತ್ತಲಿನ ಜಗತ್ತನ್ನು ಹೇಗೆ ನೋಡಬೇಕು. ದೃಢ ಸಂಕಲ್ಪದಿಂದ, ಸ್ಪಷ್ಟ ಗುರಿಯೆಡೆಗೆ ಹೇಗೆ ಮುಂದೆ ಸಾಗಬೇಕು. ಅರ್ಥಪೂರ್ಣವಾಗಿ ಜೀವನವನ್ನು ನಡೆಸುವುದರ ಕಡೆಗೆ ನಿಗಾವಹಿಸಿಬೇಕು ಎನ್ನುವುದರ ಬಗ್ಗೆ ಚಿಂತಿಸಿದ್ದಾರೆ. ಈ ತೆರನಾದ ಜೀವನ ವಿಧಾನಗಳಲ್ಲಿ ಸುಪ್ತವಾಗಿ ಹುದುಗಿರುವ ಕತ್ತಲೆಯನ್ನು

ಹೇಗೆ ನಿವಾರಿಸಿಕೊಳ್ಳಬೇಕು. ಆ ಅಪರಿಮಿತ ಕತ್ತಲೆಯನ್ನು ಮೀರಿ, ತಮ್ಮೊಳಗೆ ಅರಿವಿನ ಬೆಳಕನ್ನು ಕಂಡುಕೊಳ್ಳಬೇಕು ಎಂಬುದು ಅಲ್ಲಮಪ್ರಭುದೇವರ ಈ ವಚನದ ತಿರುಳಿನಂತೆ ತಮ್ಮ ಸುದೀರ್ಘ ಬದುಕು ಪರೋಪಕಾರ ಜೀವನಕ್ಕೆ ಅನ್ವಯಿಸಿಕೊಂಡಿರುವ ಶ್ರೀ ಭೀಮಣ್ಣ ಖಂಡ್ರೆಯವರ ಜೀವನ ಸಾಧನೆಗಳು ವಿಶಿಷ್ಟವಾಗಿವೆ. ಮನುಷ್ಯನಾದವನು ಮೊದಲಿಗೆ ತನ್ನನ್ನು ತಾನು ತಿಳಿದುಕೊಳ್ಳಬೇಕು. ತನ್ನಲ್ಲಿ ಆತ್ಮವಿಶ್ವಾಸ, ಮನೋಸ್ಥೈರ್ಯ ಬೆಳೆಯಿಸಿಕೊಳ್ಳಬೇಕು. ಜೀವನದಲ್ಲಿ ಅಚಲಶ್ರದ್ಧೆ, ಸೇವಾನಿಷ್ಠೆ ನಿರಂತರ ಎಚ್ಚರಿಕೆ ಮತ್ತು ಏಕಾಗ್ರತೆಗಳಿಂದ ಪ್ರಬುದ್ಧಾವಸ್ಥೆಗೆ ತಲುಪಬೇಕು. ಇದು ಅವರ ಜೀವನಪರ್ಯಂತ ಕಾಯ್ದುಕೊಂಡು ಬಂದಿರುವ ಶರಣ ಸಂಸ್ಕೃತಿಯ ಜೀವಾಳವಾಗಿದೆ.

ದೇಶೀಯ ಆಹಾರ ಪದ್ಧತಿಯನ್ನು ಖಾದಿಧಾರಣೆ ನಿರಂತರವಾಗಿ ರೂಢಿಸಿಕೊಂಡು ಬಂದಿರುವ ಅವರು ೯೫ನೆಯ ವಯಸ್ಸಿನಲ್ಲೂ ಇಪ್ಪತ್ತರ ವಯಸ್ಸಿನವರಂತೆ ಚುರುಕಾಗಿರುವರು. ಮುಚಳಂಬಿಯ ಶ್ರೀ ನಾಗಭೂಷಣ ಶಿವಯೋಗಿಗಳಿಂದ ಕಲಿತ ಯೋಗಾಭ್ಯಾಸವನ್ನು ಇವತ್ತಿನವರೆಗೂ ಮುಂದುವರೆಸಿಕೊಂಡು ಬರುತ್ತಿದ್ದಾರೆ. ಮೂರುಮೀಟರ್ ಉದ್ದದ ಬಟ್ಟೆಯನ್ನು ಬಾಯಿಯ ಮುಖಾಂತರ ನುಂಗಿ ದೇಹದಲ್ಲಿನ ಕಲ್ಮಶವನ್ನು ಸ್ವಚ್ಛಗೊಳಿಸಿ ಕೊಳ್ಳುತ್ತಾರೆ. ಮಿತ ಆಹಾರ ಸೇವನೆ ಅವರ ಆರೋಗ್ಯದ ಗುಟ್ಟಾದರೆ ಏಕಪತ್ನಿ ವ್ರತ ಅವರ ಜೀವನ ಸಿದ್ಧಾಂತವಾಗಿದೆ. ಸಮಾಜಸೇವೆ ಬದುಕಿನ ಉಸಿರಾಗಿದೆ.

ಶ್ರೀ ಭೀಮಣ್ಣ ಖಂಡ್ರೆಯವರು ಯಾವುದೇ ರೀತಿಯ ದುಶ್ಚಟಗಳಿಗೆ ಸಿಲುಕಿದವರಲ್ಲ. ಉಡುಗೆ ತೊಡುಗೆಯಲ್ಲೂ ಎಂದೂ ವೈಭವವನ್ನು ಪ್ರದರ್ಶಿಸಿದವರಲ್ಲ. ನೇರ ನುಡಿಯ ನಿರ್ಭಿಡೆಯ ವ್ಯಕ್ತಿ–ಶಕ್ತಿಯಾಗಿರುವ ಅವರೊಬ್ಬ ಅಪರೂಪದ ಸರಳಜೀವಿಗಳು. ಅಷ್ಟೇ ಸಂಕೀರ್ಣ ಸ್ವಭಾವದ ಜನಾನುರಾಗಿಗಳು. ಮಾನವೀಯ ಅನುಕಂಪವನ್ನು ಜೀವನದುದ್ದಕ್ಕೂ ಅಳವಡಿಸಿಕೊಂಡವರು. ದೀನ–

ದಲಿತರ ರಕ್ಷಣೆಗಾಗಿಯೇ ತಮ್ಮನ್ನು ಸಮರ್ಪಿಸಿಕೊಂಡಿರುವರು. ಸಂವಿಧಾನದ ಆಶಯದಂತೆ ಜಾತ್ಯತೀತ ರಾಷ್ಟ್ರ, ವಿಶ್ವಕುಟುಂಬದ ಕನಸು ಕಂಡ ಅವರು ಜಾತಿ ಮತ ಭೇದರಹಿತ ಸಮಾಜವನ್ನು ಕಟ್ಟಲು ನಿರಂತರ ಶ್ರಮಿಸುತ್ತಿರುವರು. ಜಾತಿ ಆಧಾರಿತ ಹಾವನೂರು ವರದಿಯನ್ನು ಶಾಸನ ಸಭೆಯಲ್ಲೇ ಹರಿದು ಹಾಕಿ, ಅದನ್ನು ತುಳಿದು ಸುಟ್ಟು ಹಾಕಿರುವ ಧೀಮಂತ ನಾಯಕರು. ಚಾರಿತ್ರ್ಯಶೀಲ ಗುಣವಂತ ರಾಜಕಾರಣಿ, ಶಿಕ್ಷಣಸಿಂಧು, ರೈತಬಂಧು, ಲೋಕನಾಯಕ ಎನಿಸಿಕೊಂಡ ಮಹಾನ ಚೇತನಶಾಲಿಗಳು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು..

ಕೊನೆಯದಾಗಿ ನಾನು ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಅಪ್ರತಿಮ ಸಾಹಸಿ, ರಾಜಕೀಯ ಮುತ್ಸದ್ಧಿ, ಅಪ್ಪಟ ಸ್ವಾಭಿಮಾನಿ, ಶರಣಜೀವಿ ಆಗಿರುವಂತಹ ಡಾ॥ ಭೀಮಣ್ಣ ಖಂಡ್ರೆಯವರ ಬಗ್ಗೆ ನಾನು ಬರೆದಿರುವ ಕವನವನ್ನು ಉಲ್ಲೇಖಿಸಬಯಸುವೆ.

ಬಿಕೆ ಎಂದರೆ, ಬರೀ ಭೀಮಣ್ಣ ಖಂಡ್ರೆಯಲ್ಲ;
ಅವರೊಬ್ಬ ಜಡವ್ಯವಸ್ಥೆ ವಿರುದ್ಧ ಸಿಡಿದೆದ್ದ ಬಂಡಾಯಗಾರ,
ಮನುಷ್ಯ ಮನುಷ್ಯರ ನಡುವೆ ಅಡ್ಡಗೋಡೆಯಂತಿದ್ದ
ಜಾತಿವ್ಯವಸ್ಥೆಗೆ ಭದ್ರವಾದ ಅಡಿಪಾಯವಾಗಿದ್ದ
ಹಾವನೂರು ವರದಿಗೆ ಕೊಳ್ಳಿಯಿಟ್ಟ ಹಟವಾದಿ ನಾಯಕ.

ಬಿಕೆ ಎಂದರೆ, ಬರೀ ಭೀಮಣ್ಣ ಖಂಡ್ರೆಯಲ್ಲ;
ಅವರೊಬ್ಬ ಮಗ್ಗಲಮುಳ್ಳುಗಳ ಉಪದ್ರವ ಮೆಟ್ಟಿನಿಂತು
ನಿರ್ವಸತಿಕರಿಗೆ ಆಶಾಕಿರಣವಾಗಿದ್ದ ಜನಸ್ನೇಹಿ ನಾಯಕ.
ಹೈದರಾಬಾದ ಕರ್ನಾಟಕ ವಿಮೋಚನೆಗಾಗಿ
ಜೈಲುವಾಸ ಅನುಭವಿಸಿದ ಉಗ್ರವಾದಿ ನೇತಾರ.

ಬಿಕೆ ಎಂದರೆ, ಬರೀ ಭೀಮಣ್ಣ ಖಂಡ್ರೆಯಲ್ಲ;
ಹಿಂದೂ ಮುಸ್ಲಿಮ ದಂಗೆ ಕಾಲದ ಲೋಕನಾಯಕ.
ಕ್ರಿಯೆಗೆ ತಕ್ಕ ಪ್ರತಿಕ್ರಿಯೆ ಹೊಗೆಯಾಡುತ್ತಿರಲು
ಮುಸ್ಲಿಮ್ ಮಹಿಳೆಯರ ಮಾನ ರಕ್ಷಿಸಿ
ನೆಲೆಯನ್ನಿತ್ತು ಕಾಪಾಡಿದ ಪರದಾರ ಸಹೋದರ.

ಬಿಕೆ ಎಂದರೆ, ಬರೀ ಭೀಮಣ್ಣ ಖಂಡ್ರೆಯಲ್ಲ;
ಅವರೊಬ್ಬ ಮತೀಯ ಸಂಘರ್ಷವನು ಸೌಹಾರ್ದ ನೆಲೆಯಲಿ
ಶಮನಗೊಳಿಸಿ ಸಾಮಾಜಿಕ ಸಾಮರಸ್ಯ ಕಾಪಿಟ್ಟವೀರ.
ಕನ್ನಡಾಂಬೆಯ ಕುವರ, ಗಡಿನಾಡ ಕನ್ನಡದ ಸಂಘಟಕ.
ಕರ್ನಾಟಕ ಏಕೀಕರಣದಲಿ ಬೀದಿಗಿಳಿದ ಜನಸ್ನೇಹಿ ನಾಯಕ.
ಬಹುಜನಾಶ್ರಿತ ಲೋಕಪ್ರೀತಿಯ ಛಲದಂಕ ಮಲ್ಲ.

ಬಿಕೆ ಎಂದರೆ, ಬರೀ ಭೀಮಣ್ಣ ಖಂಡ್ರೆಯಲ್ಲ;
ಅವರೊಬ್ಬ ಎಲ್ಲ ಮಗ್ಗಲು, ಎಲ್ಲ ವಲಯ,
ಎಲ್ಲ ಜ್ಞಾನಶಾಖೆಗಳನು ತಾನಿದ್ದಲ್ಲಿಗೆ ಹಿಡಿತಂದು
ಶಾಲಾ ಕಾಲೇಜುಗಳಿಗೆ ನೆಲಗಟ್ಟು ಹಾಸಿದ ಶಿಕ್ಷಣಶಿಲ್ಪಿ;
ಸಾವಿರಾರು ಕೈಗಳಿಗೆ ಕೆಲಸ ನೀಡಿದ ಉದ್ಯೋಗದಾತ

ಬಿಕೆ ಎಂದರೆ, ಬರೀ ಭೀಮಣ್ಣ ಖಂಡ್ರೆಯಲ್ಲ;
ಅವರೊಬ್ಬ ಮಾತು ಕೃತಿಗಳ ನಡುವೆ ಭೇದಕಾಣದ
ಚಲನಶೀಲತೆ ಸಾರವನ್ನೊದಗಿಸಿದ ಪಾದರಸ ಸ್ವರೂಪಿ
ಆಗದ ವಿಷಯ ವಸ್ತು ಖಂಡಿಸುವ ಛಲಗಾರ.

ಸರಳ ಸಜ್ಜನಿಕೆಯಲಿ ನ್ಯಾಯವಾದ ಮಂಡಿಸಿ
ಜನಮನಕೆ ದಾರಿದೀಪವಾದ ಅನುಭವಿ ಮಾತುಗಾರ.

ಬಿಕೆ ಎಂದರೆ, ಬರೀ ಭೀಮಣ್ಣ ಖಂಡ್ರೆಯಲ್ಲ;
ಅವರೊಬ್ಬ ಹಿಡಿತ ತುಳಿತಕ್ಕೊಳಗಾದ ಗಡಿಕನ್ನಡವನು
ನಡುನಾಡಿಗೆ ಕರೆತರಲು ಹಗಲಿರುಳು ದುಡಿದು
ಹಿರೇಮಠಕೆ ಸಸಿಯಾಗಿ ಹಿರೇಮಣಿಯಾಗಿ
ಸಾರಸರ್ವಸ್ವವನುಣಬಡಿಸಿದ ಅಹಂನಿರವದ್ಯ
ಸತ್ವಪೂರ್ಣ ಸಜ್ಜನಶೀಲ ಬದುಕಿನ ಪ್ರತಿರೂಪ.

ಬಿಕೆ ಎಂದರೆ, ಬರೀ ಭೀಮಣ್ಣ ಖಂಡ್ರೆಯಲ್ಲ;
ಅದೊಂದು ಶರಣ ಸಂತರ ವಚನವಾಣಿಯ ಸಾರ
ಸರ್ವ ಸಿದ್ಧಾಂತಗಳ ಹದವರಿತ ನಲ್ಮೆಗಾರ.
ಚರಿತ್ರೆಗೆ, ಘನವ್ಯಕ್ತಿತ್ವಕೆ ಕುಂದುಂಟಾದಾಗ
ಬೀದಿಗಿಳಿದು ಹೋರಾಡಿದ ಧೀಮಂತ ನಾಯಕ
ನೆಲಜಲದ ಅಭಿಮಾನವುಳ್ಳ ದಿಟ್ಟ ಕನ್ನಡ ಕುವರ.

ಲೋಕನಾಯಕರಿಗೆ

ಸಾವಿರದ ಶರಣು

– ಡಾ॥ ಬಸವರಾಜ ಬಲ್ಲೂರ

ಎಣ್ಣೆ ಬತ್ತಿಯಾದಿರಿ ನೀವು ಲೋಕ ಬೆಳಗಲು
ಗಂಧದ ಕೊರಡಾದಿರಿ, ಸಮಸಮಾಜ ಕಟ್ಟಲು
ಲೋಕ ನಾಯಕರಾದಿರಿ, ಜಗದೇಳಿಗೆ ಮಾಡಲು
ಮುಡುಪಾಯ್ತು ಮನೆತನ ಜನಸೇವೆಗೈಯಲು

ಭೀಮಣ್ಣ ಖಂಡ್ರೆ ಹೆಸರಾಯ್ತು ಈ ಲೋಕಕೆ
ಅಭಿದಾನವಾಯ್ತು, ದೀನದಲಿತರ ಕಲ್ಯಾಣಕೆ
ಬಸವ ತತ್ವವೆ ಉಸಿರಾಯ್ತು, ನಿಮ್ಮ ಜೀವಕೆ
ನೆಲೆಯಾಯ್ತು ಬದುಕು ಕಾಯಕ–ದಾಸೋಹಕೆ

ನ್ಯಾಯನಿಷ್ಠೂರಿ ನೀವು ಲೋಕದನ್ಯಾಯಕೆ
ತಲೆಬಾಗಿದವರು ಯಾವತ್ತು ಜನಹಿತಕಲ್ಯಾಣಕೆ
ಛಲದಂಕಮಲ್ಲರು ಸಾಮಾಜಿಕ ನ್ಯಾಯಕೆ
ತತ್ವನಿಷ್ಟರು ನೀವು ಸಾತ್ವಿಕ ಸ್ವಾಭಿಮಾನಕೆ

ಹೊರಗೆ ರಾಜಕಾರಣಿ ಒಳಗೆ ಮಹಾಮುತ್ಸದ್ಧಿ
ಇರಲ್ಹೊರಗೆ ಮನುಷ್ಯವೃತ್ತಿ, ಒಳಗಧ್ಯಾತ್ಮ ಬುದ್ಧಿ
ಒಳಹೊರಗೂ ಕಾಯ ವಾಚ ಮನದಿ ಶುದ್ಧಿ
ತಂದು ಕೊಟ್ಟರಿ ಸ್ವಾತಂತ್ರ್ಯ ಹೋರಾಟದಿ ಗೆದ್ದಿ

ರಜಾಕಾರ, ನಿಜಾಮರಿಂದ ವಿಮೋಚನೆ
ಉಳಿದವು ಜನಮಾನಸದ ಮಾನಹರಣ,
ತಾವನುಭವಿಸಿದಿರಿ ಹಲದಿನ ಸೆರೆಮನೆ
ತಮ್ಮಿಂದಾಯಿತು ಕನ್ನಡ ಏಕೀಕರಣ

ರಜಾಕಾರರ ಸೇಡಿಗೆ ಪ್ರತಿ ಸೇಡಿಲ್ಲವೆಂದಿರಿ
ಪ್ರೀತಿಯಿಂದ ಜಗವ ಗೆಲುವುದ ಅರಿತಿರುವಿರಿ
ಕೋಮುದ್ವೇಷ ತಂಪೆರೆದು ಸೌಹಾರ್ದ ಸಾರಿ
ಹಿಂದೂ ಮುಸ್ಲಿಂ ಭಾಯಿಭಾಯಿ ನುಡಿದಿರಿ

ಹಿಡಿದಿರಿ ಶ್ರೀ ಚನ್ನಬಸವಪಟ್ಟದ್ದೇವರ ಚರಣ
ಲಿಗಾಡೆ ತಾಯಿಯ ಹಿತವಚನ ಅನುದಿನ
ಜೊತೆಯಾಯ್ತು ಕಂಬಳಿವಾಲೆ ಪ್ರಭುವಿನ
ಹೋರಾಟದಿ ಮಾಡಿದಿರಿ ಕರ್ನಾಟಕೇಕೀಕರಣ

ಬದುಕು ಕಟ್ಟಿದಿರಿ ನೀವು ನಾಡ ಜನಕೆಲ್ಲ
ಸೇವೆ ಸಂದಿತು ಅನ್ನ ಹಾಕುವ ರೈತರಿಗೆಲ್ಲ
ನ್ಯಾಯಪರ ನಡೆಸಿದ, ಜನಾಂದೋಲನಗಳೆಲ್ಲ
ವರವಾಯಿತು, ಉತ್ತರ ಕರ್ನಾಟಕಕೆಲ್ಲ

ಸಂಸ್ಥೆಕಟ್ಟಿ ಅರಿವಿಗೆ ಕುರುಹಾಗಿ ಶಿಕ್ಷಣ
ಜಾರಿಮಾಡಿ ಕುಟುಂಬಯೋಜನೆ
ಬಾಳ ಅರ್ಥಬಲಕೆ ಸಹಕಾರ ಧುರೀಣ
ಮಹಾಸಭೆ ಬೆಳೆದರಿತು ಹೆಜ್ಜೆ ಹಿಂದಣ

ಕನ್ನಡ ಸಮಾಜ ಕಟ್ಟಿ ಬೆಳೆಸಿದಿರಿ
ಜನನಾಯಕ ಈಶ್ವರ ಹೆಗಲಿಗೆ ಹೊರಿಸಿಹಿರಿ
ಹಸನಾಯ್ತು ಜನ ಮನದ ಜೀವಪರಿ
ಹೆಸರಾಯ್ತು ನಿಮ್ಮಿಂದ ಈ ಲೋಕದೈಸಿರಿ

ಸುತ್ತಲಿನ ಬಾಳಿಗೆ ನೀವು ಸದಾ ಸ್ಫೂರ್ತಿ
ನಿಮ್ಮಿಂದ ಬಂತು ನಾಡಿಗೆ ಹೊಸ ಕೀರ್ತಿ
ಶರಣು ಶರಣಾರ್ಥಿ ಶರಣು ಶರಣಾರ್ಥಿ
ತಮಗಿದೊ ಸಾವಿರದ ಶರಣು ಶರಣಾರ್ಥಿ

***

ಅನುಬಂಧ: ೧

ಲೋಕನಾಯಕ ಶ್ರೀ ಭೀಮಣ್ಣ ಖಂಡ್ರೆಯವರ ಪ್ರಮುಖ ಜೀವನ ಘಟನಾವಳಿ

ವರ್ಷ-ತಿಂಗಳು-ದಿನ	ಘಟನೆ
೧೯೨೭-೦೧-೦೮	ತಾಯಿಯ ತವರುಮನೆ ಗೋರ್ಟಾ(ಬಿ)ದಲ್ಲಿ ಶ್ರೀ ಭೀಮಣ್ಣ ಖಂಡ್ರೆಯವರ ಜನನ
೧೯೩೨-೩೩	ಗೋರ್ಟಾ ಹಿರೇಮಠದ ಶಾಲೆಯಲ್ಲಿ ಶ್ರೀ ರೇವಣಸಿದ್ಧಯ್ಯ ಸ್ವಾಮಿಯವರಿಂದ ಕನ್ನಡ ಮತ್ತು ಸೋದರಮಾವ ಶ್ರೀ ನಿರಂಜನಪ್ಪ ಅವರಿಂದ ಬಾಳಬಂಧ (ದೇವನಾಗರಿ) ಅಕ್ಷರಾಭ್ಯಾಸ
೧೯೩೪	ತಂದೆ ಶ್ರೀ ಶಿವಲಿಂಗಪ್ಪ ಖಂಡ್ರೆ ಲಿಂಗೈಕ್ಯ.
೧೯೩೪ರಿಂದ ೩೬	ಭಾಲ್ಕಿ ಹಿರೇಮಠದ ಖಾಸಗಿ ಶಾಲೆಯಲ್ಲಿ ಶ್ರೀ ಚೆನ್ನವೀರಯ್ಯ ಮಠಪತಿಯವರಿಂದ ಕನ್ನಡ ಮತ್ತು ಶ್ರೀ ಬಸಪ್ಪ ಕರ್ಕಾಳೆಯವರಿಂದ ಮೋಡಿ ಅಕ್ಷರಾಭ್ಯಾಸ. ನಾಲ್ಕನೆಯ ವರ್ಗದವರೆಗೆ ಅಧ್ಯಯನ
೧೯೩೭-೧೯೪೦	ಬೀದರಿನ ನಿಜಾಮ ಸರಕಾರದ ಮದರಸಾ ವಸ್ತಾನಿಯಾ(ಉನ್ನತ ಅಧ್ಯಯನ)ದಲ್ಲಿ ಅಧ್ಯಯನ
೧೯೩೯-೦೩-೧೯	ಬೀದರ ಕೋಮಗಲಭೆ ಉಸ್ಮಾನ ಗಂಜ್ ಅಗ್ನಿ ದುರಂತ. ಶ್ರೀ ಬಸವಂತರಾವ ಶೆಟಕಾರ

	ನಾರಾಯಣಖೇಡ ಹತ್ಯೆ.
೧೯೪೧ ಜೂನ್	ಬಾಂಬೆ ಪ್ರೆಸಿಡೆನ್ಸಿ ಸರಕಾರ ವ್ಯಾಪ್ತಿಗೆ ಮೊಮಿನಾಬಾದಿನ ಸ್ವಾಮಿ ರಮಾನಂದ ತೀರ್ಥರ ಪ್ರೌಢಶಾಲೆಗೆ ಸೇರ್ಪಡೆ
೧೯೪೧-೧೯೪೨	ಉದರಶೂಲೆ. ಮುಚಳಂಬಿಯ ಸದ್ಗುರು ನಾಗಭೂಷಣ ಶಿವಯೋಗಿಗಳಲ್ಲಿ ಯೋಗ ಚಿಕಿತ್ಸೆ ಮತ್ತು ಯೋಗಾಭ್ಯಾಸ
೧೯೪೨-೧೯೪೩	ಮಹಾರಾಷ್ಟ್ರದ ಬಾರ್ಸಿ ಜಿಲ್ಲೆಯ ಏಡಸಿಯ ಶ್ರೀ ರಾಮಲಿಂಗೇಶ್ವರ ಬೆಟ್ಟದಲ್ಲಿ ತಪೋನುಷ್ಠಾನ
೧೯೪೩	ತಾಯಿಯ ಹಿತವಚನದಂತೆ ಭಾಲ್ಕಿಗೆ ಪುನರಾಗಮನ. ಒಂದು ಲಾರಿ ಜೋಳ ಮತ್ತು ಆಹಾರಧಾನ್ಯಗಳನ್ನು ಸಂಗ್ರಹಿಸಿ ಕಲೆಕ್ಟರ್ ಮುಖಾಂತರ ಬಿಹಾರ ಬರಗಾಲ ಪೀಡಿತರಿಗೆ ರವಾನೆ
೧೯೪೨-೪೪	'ಮುನ್ಸಿ-ಫಾಜಲ್' ಪರೀಕ್ಷೆಗೆ ನೋಂದಣಿ. ಆಳವಾದ ಅಧ್ಯಯನದಿಂದ ಹೈದರಾಬಾದ ಪ್ರಾಂತಕ್ಕೆ ಪ್ರಥಮ ರ್‍ಯಾಂಕ್‌ದಲ್ಲಿ ಉತ್ತೀರ್ಣ
೧೯೪೫	ಶ್ರೀಮತಿ ಲಕ್ಷ್ಮೀಬಾಯಿಯವರೊಂದಿಗೆ ಮದುವೆ
೧೯೪೬	ಚಿಕಲಚಾಂದಾ ಹೊಲದಲ್ಲಿ ಗುಡಿಸಲು ಹಾಕಿಕೊಂಡು ಏಕಾಂತವಾಸ. ಯೋಗ ಮತ್ತು ತಪೋನುಷ್ಠಾನ ಚೆನ್ನಬಸವ ಪಟ್ಟದ್ದೇವರ ಆಗ್ರಹದ ಮೇರೆಗೆ ಶರಣರಂತೆ ಸಂಸಾರ ದಲ್ಲಿದ್ದುಕೊಂಡು ಪಾರಮಾರ್ಥ ಸಾಧನೆ ಮತ್ತು ಸಮಾಜ ಸೇವೆಗೆ ನಿರ್ಧಾರ
೧೯೪೭	ಬಿ.ಶಾಮಸುಂದರ ಅವರನ್ನು ಭಾಲ್ಕಿಗೆ ಕರೆಸಿ ದಲಿತ ಜಾಗೃತಿ ಸಭಾ, ಉದಗೀರ ಮತ್ತು ಬೀದರ

	ಶಾಹಗಂಜದಲ್ಲಿ ಶಾಮಸುಂದರ ಅವರೊಂದಿಗೆ ಕೂಡಿಕೊಂಡು ಜನಸಭೆಗೆ ಸಹಕಾರ
೧೯೪೭	ಜಾತೀಯತಾ ನಿರ್ಮೂಲನೆಗಾಗಿ ಪೂಜ್ಯ ಚೆನ್ನಬಸವ ಪಟ್ಟದ್ದೇವರ ನೇತೃತ್ವದಲ್ಲಿ ಹರಿಜನರಿಗೆ ಐತಿಹಾಸಿಕ ಭಾಲಕೇಶ್ವರ ದೇವಾಲಯದಲ್ಲಿ ಪ್ರವೇಶ.
೧೯೪೭	ವಕಾಲತ್ ಅಧ್ಯಯನಕ್ಕಾಗಿ ಹೈದರಾಬಾದ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಪ್ರವೇಶ
೧೯೪೮	ಜನೆವರಿ ಭಾಲ್ಕಿ ಆರ್ಯ ಸಮಾಜ ಕಾರ್ಯಕರ್ತ ರೊಂದಿಗೆ ಕೂಡಿಕೊಂಡು ರಾಮ ಮಂದಿರ ಮೈದಾನದಲ್ಲಿ ತಿರಂಗಾ ಹಾರಿಸಿ ನಿಜಾಮ ಸರಕಾರದೊಂದಿಗೆ ಬಂಡಾಯ ಸಾರಿರುವುದ ಕ್ಕಾಗಿ ಒಂದು ತಿಂಗಳು ಸೆರೆಮನೆ ವಾಸ
೧೯೪೮	ಫೆಬ್ರುವರಿ ರಜಾಕಾರರಿಂದ ಖಂಡ್ರೆ ಮನೆಯ ಮೇಲೆ ಮೊಲದನೆಯ ಸಲ ದಾಳಿ, ಖಂಡ್ರೆ ಮೇಲುಗೈ
೧೯೪೮	ಮಾರ್ಚ್ ರಜಾಕಾರರದಿಂದ ಖಂಡ್ರೆ ಮನೆಯ ಮೇಲೆ ಎರಡನೆಯ ಸಲ ದಾಳಿ, ಖಂಡ್ರೆಯವರ ಮೇಲುಗೈ
೧೯೪೮ ಮೇ ೧೦	ಗೋರ್ಟಾ ಮೇಲೆ ರಜಾಕಾರರ ದಾಳಿ ಗೋರ್ಟಾ ಅಗ್ನಿಕಾಂಡ
೧೯೪೮ ಜೂನ್	ಶ್ರೀ ಭೀಮಣ್ಣ ಖಂಡ್ರೆ ಮುಂಜಾಗ್ರತಾ ಕ್ರಮವಾಗಿ ಬಂಧನ, ಎರಡನೆಯ ಸಲ ಸೆರೆಮನೆ ವಾಸ
೧೯೪೮ ಜುಲೈ	ಖಂಡ್ರೆ ಶಸ್ತ್ರಾಸ್ತ್ರ ಜಪ್ತಿ, ಹೊಲ-ಮನೆ-ಜಾನುವಾರಗಳೆಲ್ಲ ಸರಕಾರದಿಂದ ಹರಾಜು

	ಹಾಕಿದ ನಂತರ ಶ್ರೀ ಭೀಮಣ್ಣ ಖಂಡ್ರೆ ಬಿಡುಗಡೆ
೧೯೪೮ ಜುಲೈ	ಬೀದರ ಸೆರೆಮನೆಯಿಂದ ಬಿಡುಗಡೆ ಹೊಂದಿ ಸೋಲಾಪುರಕ್ಕೆ ಪ್ರಯಾಣ. ಶ್ರೀ ರಾಮಶೆಟ್ಟೆಪ್ಪ ಖಂಡ್ರೆ ಮನೆಯಲ್ಲಿ ಆಶ್ರಯ
೧೯೪೮ ಆಗಸ್ಟ್	ಸೋಲಾಪುರದಲ್ಲಿ ಕಾಂಗ್ರೆಸ್ ಕಚೇರಿ ತೆರೆದು ಶಸ್ತ್ರಾಸ್ತ್ರ ಸಂಗ್ರಹ, ಗೋರಿಲ್ಲಾ ಯುದ್ಧ ತರಬೇತಿ, ಬಾರ್ಡರ್ ಕ್ಯಾಂಪ್ ಶಿಬಿರಾರ್ಥಿಗಳಿಗೆ ಶಸ್ತ್ರಾಸ್ತ್ರ ಪೂರೈಕೆ. ಪಾಂಜರ್ ಪೋಳ ಘರ್ಷಣೆಯಲ್ಲಿ ರಜಾಕಾರರನ್ನು ಹಿಮ್ಮೆಟ್ಟಿಸಿದ ಸ್ವಾತಂತ್ರ್ಯ ಹೋರಾಟಗಾರರು.
೧೯೪೮ರ ಸೆಪ್ಟೆಂಬರ್ ೧೩	ಭಾರತ ಒಕ್ಕೂಟದಿಂದ ನಿಜಾಮ ರಾಜ್ಯದ ಮೇಲೆ 'ಆಪರೇಶನ್ ಪೋಲೋ' ಸೈನಿಕ ಕಾರ್ಯಾಚರಣೆ ಪ್ರಾರಂಭ
೧೯೪೮ರ ಸೆಪ್ಟೆಂಬರ್ ೧೭	ಭಾರತ ಒಕ್ಕೂಟ ಸೈನ್ಯಕ್ಕೆ ಹೈದರಾಬಾದ ನಿಜಾಮ್ ಮೀರ್ ಉಸ್ಮಾನ್ ಅಲಿಖಾನ್ ಶರಣಾಗತಿ
೧೯೪೮ ಅಕ್ಟೋಬರ್	ಶ್ರೀ ಭೀಮಣ್ಣ ಖಂಡ್ರೆ ಅವರಿಂದ ಶಾಂತಿ ಸ್ಥಾಪನೆಗಾಗಿ ಪ್ರಯತ್ನ. ಮುಸ್ಲಿಮ ಮಹಿಳೆಯರಿಗೆ ರಕ್ಷಣೆ.
೧೯೪೯	ಉಸ್ಮಾನಿಯಾ ವಿಶ್ವವಿದ್ಯಾಲಯದಿಂದ 'ವಕಾಲತ್' ಪರೀಕ್ಷೆಯಲ್ಲಿ ಉತ್ತೀರ್ಣ
೧೯೫೦	ಭಾಲ್ಕಿಯ ಮುನ್ಸಿಫ್ ಕೋರ್ಟಿನಲ್ಲಿ ಲೀಗಲ್ ಪ್ರಾಕ್ಟೀಸು ಪ್ರಾರಂಭ
೧೯೫೧ ಜೂನ್-೨೫	ಬೀದರ ಜಿಲ್ಲಾ ಕಿಸಾನ ಮೋರ್ಚಾದ ಪ್ರಧಾನ ಕಾರ್ಯದರ್ಶಿಯನ್ನಾಗಿ ಜಹೀರಾಬಾದಿಂದ ಹೈದರಾಬಾದಿಗೆ 'ಚಲೋ ಶಾಹ ಮಂಜಿಲ್' ಪಾದಯಾತ್ರೆ ಪ್ರಾರಂಭ

೧೯೫೧ ಜೂನ್ ೨೮ — ಹೈದರಾಬಾದ 'ಶಾಹಮಂಜಿಲ್' ಮುಂದೆ ಕಿಸಾನ ಮೋರ್ಚಾ. ಕಂದಾಯ ತಾರತಮ್ಯ ವಿರುದ್ಧ ಮನವಿ.

೧೯೫೨ — ಪ್ರಜಾಸೋಶಿಯಲಿಸ್ಟ್ ಪಕ್ಷ ಸೇರುವ ಮುಖಾಂತರ ಸಕ್ರಿಯ ರಾಜಕಾರಣಕ್ಕೆ ಪ್ರವೇಶ

೧೯೫೩ — ಭಾಲ್ಕಿ ಪುರಸಭೆಯ ಪ್ರಥಮ ಚುನಾಯಿತ ಅಧ್ಯಕ್ಷರಾಗಿ ಆಯ್ಕೆ

೧೯೫೪ — ಭಾಲ್ಕಿಯ ದಲಿತರಿಗೆ ಗಾಂಧಿ ಗಂಜಿಗೆ ಹೊಂದಿಕೊಂಡು ಭೀಮನಗರದ ಉಚಿತ ನಿವೇಶನ ಹಂಚಿಕೆ ಸಮಾಜಕಲ್ಯಾಣ ಇಲಾಖೆಯಿಂದ ಬಾಗೀಲು, ಕಿಟಕಿ ಮತ್ತು ತಗಡಿನ ಛಾವಣಿ ಪೂರೈಕೆ

೧೯೫೪ — ಬೀದರ ಜಿಲ್ಲಾ ಕರ್ನಾಟಕ ಏಕೀಕರಣ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ. ಭಾಲ್ಕಿ ಕುರುಬಖೇಳಗಿಗಳಲ್ಲಿ ಜನಜಾಗೃತಿ ಸಭೆ. ಭಾಲ್ಕಿಯಲ್ಲಿ ರೇಲ್-ರೋಕೋ ಆಂದೋಲನ

೧೯೫೪ ಜುಲೈ ೧೩ — ಬೀದರಗೆ ಆಗಮಿಸಿರುವ ರಾಜ್ಯ ಪುನರ್ವಿಂಗಡಣಾ (ಫಜಲ್ ಅಲಿ) ಆಯೋಗದ ಮುಂದೆ ತಾವು ಸಂಗ್ರಹಿಸಿದ್ದ ೫೦೦ ಮನವಿ ಪತ್ರಗಳ ಸಲ್ಲಿಕೆ ಮತ್ತು ಕಲ್ಯಾಣ ನಾಡು ಕರ್ನಾಟಕದ ಅವಿಭಾಜ್ಯ ಅಂಗವೆಂದು ಬಲವಾಗಿ ಪ್ರತಿಪಾದನೆ.

೯೫೬ ಅಕ್ಟೋಬರ್ — ಬೀದರ ಜಿಲ್ಲೆಯ ಪ್ರತ್ಯೇಕ ಅಸ್ತಿತ್ವ ಕಾಪಾಡಿಕೊಳ್ಳಲು ಪ್ರಧಾನಮಂತ್ರಿ ಜವಾಹರಲಾಲ ನೆಹರು, ಗೃಹಸಚಿವ ಗೋವಿಂದ ವಲ್ಲಭ ಪಂತ ಅವರ ಹತ್ತಿರ ದೆಹಲಿಗೆ ನಿಯೋಗ

೧೯೫೬-೧೧-೦೧	ಕರ್ನಾಟಕ ಏಕೀಕರಣ. ನಾಲ್ಕು ತಾಲುಕಗಳಿಂದೊಡಗೂಡಿದ ಬೀದರ ಜಿಲ್ಲೆ ಅಂದಿನ ಮೈಸೂರು ರಾಜ್ಯಕ್ಕೆ ಸೇರ್ಪಡೆ
೧೯೫೭	ಮೈಸೂರು ವಿಧಾನಸಭಾ ಚುನಾವಣೆಗೆ ಪಿಎಸ್‌ಪಿ ಅಭ್ಯರ್ಥಿಯಾಗಿ ಭಾಲ್ಕಿ-ಔರಾದ ಜಂಟಿ ಮತಕ್ಷೇತ್ರದ ಜನರಲ್ ಸೀಟಿಗೆ ಸ್ಪರ್ಧೆ. ಮಹಾರಾಷ್ಟ್ರ ಏಕೀಕರಣ ಸಮಿತಿ ಸಮರ್ಥಿತ ಸ್ವತಂತ್ರ ಉಮೇದುವಾರರ ಇದಿರಲ್ಲಿ ೨೦೦ ಮತಗಳ ಅಂತರದಿಂದ ಸೋಲು
೧೯೫೭ ಡಿಸೆಂಬರ್ ೨೭	ಕಮಲನಗರದಲ್ಲಿ ಕನ್ನಡ ವಿದ್ಯಾರ್ಥಿಗಳ ಮೇಲೆ ಎಂ.ಇ.ಎಸ್. ಕಾರ್ಯಕರ್ತರಿಂದ ಹಲ್ಲೆ. ರಾತ್ರೋರಾತ್ರಿ ವಿದ್ಯಾರ್ಥಿಗಳ ರಕ್ಷಣೆಗಾಗಿ ಕಮಲನಗರಕ್ಕೆ ದೌಡು.
೧೯೬೧ ಎಪ್ರಿಲ್-ಮೇ	ಕರ್ನಾಟಕ ಮಹಾರಾಷ್ಟ್ರ ಗಡಿವಿವಾದ ಸರ್ವೇಕ್ಷಣೆಗಾಗಿ ಮಹಾರಾಷ್ಟ್ರದ ಪ್ರತಿನಿಧಿಯಾಗಿ ಭಾಲ್ಕಿಗೆ ಬಂದಿದ್ದ ಶ್ರೀ ಎಚ್.ವಿ. ಪಾಟಸ್ಕರ ಅವರ ಟೋಪಿ ಗಾಳಿಗೆ ತೂರಿದ ಆಪಾದನೆಯ ಮೇರೆಗೆ ಕರ್ನಾಟಕ ಏಕೀಕರಣ ಕಾರ್ಯದರ್ಶಿಯಾಗಿದ್ದ ಶ್ರೀ ಭೀಮಣ್ಣ ಖಂಡ್ರೆ ಬಂಧನ ಶ್ರೀ ಆರ್.ವಿ. ಬೀಡಪ ಅವರ ಮೇಲೆ ಅರೆಸ್ಟ್ ವಾರಂಟ್
೧೯೬೨	ಕರ್ನಾಟಕ ವಿಧಾನ ಸಭೆಯ ಸಾರ್ವತ್ರಿಕ ಚುನಾವಣೆಯ ಭಾಲ್ಕಿ ಮತಕ್ಷೇತ್ರಕ್ಕೆ ಪಿಎಸ್‌ಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಮೊದಲನೆಯ ಸಲ ಕರ್ನಾಟಕ ವಿಧಾನಸಭೆ ಪ್ರವೇಶ.
೧೯೬೩ ಸಪ್ಟೆಂಬರ್ ೦೪	ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ನೋಂದಣಿ ಮತ್ತು ಅದರ ಅಧ್ಯಕ್ಷರಾಗಿ ಸ್ವೀಕಾರ

೧೯೬೪ ಜೂನ್ ೨೧	ಪ್ರಜಾ ಸೋಶಿಯಲಿಸ್ಟ್ ಪಕ್ಷ ಮತ್ತು ಕಮ್ಯುನಿಷ್ಟ ಪಾರ್ಟಿ ಆಫ್ ಇಂಡಿಯಾಗಳು ವಿಧಿಯುಕ್ತವಾಗಿ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಲ್ಲಿ ವಿಲೀನೀಕರಣ
೧೯೬೬	ಬೀದರ ಜಿಲ್ಲಾ ಕಾಂಗ್ರೆಸ್ ಕಮೀಟಿಯ ಅಧ್ಯಕ್ಷರಾಗಿ ಆಯ್ಕೆ
೧೯೬೬ ಅಕ್ಟೋಬರ್ ೨೫	ಮಹಾಜನ್ ಕಮೀಶನ್ ನೇಮಕ.
೧೯೬೭	ಬೀದರದಲ್ಲಿ ಮಹಾಜನ್ ಕಮೀಶನ್ ಮುಂದೆ ಮನವಿ ಪತ್ರ ಸಲ್ಲಿಕೆ. ಮತ್ತು ಉಪವಾಸ ಉಳಿದು ಒಂದು ಲಕ್ಷ ೨೫ ಸಾವಿರ ಕನ್ನಡಿಗರ ಸಹಿ ಸಂಗ್ರಹಿಸಿ ದೆಹಲಿಗೆ ಹೋಗಿ ಕಮೀಶನ್ ಮುಂದೆ ಮಂಡನೆ.
೧೯೬೭	ಭಾಲಕಿ ಮತಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಕರ್ನಾಟಕ ವಿಧಾನ ಸಭೆಗೆ ಆಯ್ಕೆ.
೧೯೬೭	ಮಹಾಜನ ವರದಿ ಅನುಷ್ಠಾನಕ್ಕಾಗಿ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರ ಬಳಿ ದೆಹಲಿಗೆ ಶಾಸಕರ ನಿಯೋಗದಲ್ಲಿ ಸಹಭಾಗಿ
೧೯೬೮	ಖಂಡ್ರೆಯವರು ಬೀದರದಲ್ಲಿ ಸಂಘಟಿಸಿದ್ದ ಎಐಸಿಸಿ ವಾರ್ಷಿಕ ಅಧಿವೇಶನದಲ್ಲಿ ಕಾರಂಜಾ ನೀರಾವರಿ ಯೋಜನೆ ಪ್ರಸ್ತಾವನೆ ಸಲ್ಲಿಕೆ ಮತ್ತು ಮಂಜೂರಿ
೧೯೬೮-೬೯	ಭಾಲ್ಕಿಯಲ್ಲಿ ಚೆನ್ನಬಸವೇಶ್ವರ ಮಹಾವಿದ್ಯಾಲಯ ಪ್ರಾರಂಭ
೧೯೬೮ ಮಾರ್ಚ್ ೧೭	ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರಿಂದ ಚೆನ್ನಬಸವೇಶ್ವರ ಮಹಾವಿದ್ಯಾಲಯದ ಅಡಿಗಲ್ಲು ಸಮಾರಂಭ

೧೯೬೯ ಎಪ್ರಿಲ್ ೦೨	ಕೈಗಾರಿಕಾರಹಿತ ಜಿಲ್ಲೆಯಲ್ಲಿ ಮೊದಲನೆಯ ಸಲ ಬಿ.ಎಸ್.ಎಸ್.ಕೆ. (ನಿ.) ಹಳ್ಳಿಖೇಡ ಸ್ಥಾಪಿಸಿ ಮೊದಲನೆಯ ಅಧ್ಯಕ್ಷರಾಗಿ ಅಧಿಕಾರ ಸ್ವೀಕಾರ
೧೯೬೯-೭೦	ಭಾಲ್ಕಿಯಲ್ಲಿ ಅಕ್ಕಮಹಾದೇವಿ ಕನ್ಯಾ ಪ್ರೌಢಶಾಲೆ ಪ್ರಾರಂಭ
೧೯೭೧-೭೨	ಬೀದರಿನಲ್ಲಿ ಅಕ್ಕಮಹಾದೇವಿ ಮಹಿಳಾ ಮಹಾವಿದ್ಯಾಲಯ ಪ್ರಾರಂಭ
೧೯೭೨	ಅಣ್ಣ ಕಾಶಪ್ಪ ಖಂಡ್ರೆ ವಿಯೋಗದಿಂದ ೧೯೭೨ರ ಸಾರ್ವತ್ರಿಕ ಚುನಾವಣೆಯಲ್ಲಿ ಭಾಗವಹಿಸಲಿಲ್ಲ.
೧೯೭೨ ಜೂನ್-೬	ಒಂದು ವರ್ಷದ ಭೀಕರ ಅನಾವೃಷ್ಟಿ ಬರಗಾಲದ ನಂತರ ಮೊದಲನೆಯ ಮುಂಗಾರಿ ಮಳೆ
೧೯೭೨ ಜೂನ್ ೧೦	ಭಾಲ್ಕಿ ತಹಸೀಲ ಕಚೇರಿಯ ಮುಂದೆ ಹತ್ತು ಸಾವಿರ ರೈತರ ಬೀಜಾಂದೋಲನ. ಲಾಠಿ ಚಾರ್ಜ್ ಮತ್ತು ಖಂಡ್ರೆ ಮತ್ತು ಸಂಗಡಿಗರ ಬಂಧನ.
೧೯೭೬ ಸೆಪ್ಟೆಂಬರ್ ೩೦	ಒಂದು ದಿನದಲ್ಲಿ ೨೦೧೫ ಸಂತಾನಹರಣ ಶಸ್ತ್ರ ಚಿಕಿತ್ಸೆ ನಡೆಸಿ ವಿಶ್ವದಾಖಲೆ ಸ್ಥಾಪನೆ
೧೯೭೬ ಡಿಸೆಂಬರ್ ೨೬	ಶ್ರೀ ಸಂಜಯ ಗಾಂಧಿ ಭಾಲ್ಕಿಗೆ ಆಗಮನ. ಶ್ರಮದಾನದಿಂದ ರಸ್ತೆ ನಿರ್ಮಾಣ. ನೆಡುತೋಪು ಕಾರ್ಯಕ್ರಮ
೧೯೭೮	ಭಾಲ್ಕಿ ವಿಧಾನಸಭಾ ಕ್ಷೇತ್ರದಿಂದ ಪುನರಾಯ್ಕೆ. ಶಾಸಕರ ಭವನದಲ್ಲಿ ಕೋಣೆ ಕೊಡದಿರುವಾಗ ಮುಖ್ಯಮಂತ್ರಿ ಕುರ್ಚಿಯ ಮೇಲೆ ಕುಳಿತು ಪ್ರತಿಭಟನೆ.
೧೯೭೮	ಜನತಾ ಪಕ್ಷವು ಶ್ರೀಮತಿ ಇಂದಿರಾ ಗಾಂಧಿ

	ಅವರನ್ನು ಬಂಧಿಸಿ ತಿಹಾರ ಜೈಲಿಗೆ ತಳ್ಳಿದಾಗ
	ಅವರ ಬಿಡುಗಡೆಗಾಗಿ ಶ್ರೀ ಭೀಮಣ್ಣ ಖಂಡ್ರೆ
	ಹತ್ತು ಸಾವಿರ ಕಾಂಗ್ರೆಸ್ ಕಾರ್ಯಕರ್ತ
	ರೊಂದಿಗೆ ಬೀದರ ಜಿಲ್ಲಾಧಿಕಾರಿ ಕಚೇರಿಯ
	ಮುಂದೆ ಧರಣಾ ನಡೆಸಿದರು.
೧೯೭೮	ಎಪ್ರಿಲ್ ಚಿಕಮಗಳೂರು ಲೋಕಸಭಾ ಉಪ
	ಚುನಾವಣೆಯಲ್ಲಿ ಶ್ರೀಮತಿ ಇಂದಿರಾ ಗಾಂಧಿ
	ಯವರ ಮುಖ್ಯ ಪ್ರಚಾರಕರಾಗಿ ಜನಮತ ಸಂಗ್ರಹ
೧೯೭೮ ಅಗಸ್ಟ್ ೦೧	ವಿಧಾನ ಸಭೆಯಲ್ಲಿ ಜಾತಿ ಆಧಾರಿತ ಹಾವನೂರು
	ವರದಿ ಹರಿದು ಬೆಂಕಿಹಚ್ಚಿ ಪ್ರತಿಭಟನೆ. ಬಡತನ
	ಆಧಾರಿತ ಮೀಸಲಾತಿ ಕಲ್ಪಿಸಲು ಆಗ್ರಹ.
೧೯೭೮ ಸೆಪ್ಟೆಂಬರ್ ೨೨	ಬೀದರ ಜಿಲ್ಲಾ ಹಳ್ಳಿಖೇಡ(ಬಿ.)ಯಲ್ಲಿ
	ಹಾವನೂರು ವರದಿ ಪ್ರತಿಭಟನಾ ರ್‍ಯಾಲಿ
೧೯೭೮ ಸೆಪ್ಟೆಂಬರ್ ೨೮	ಶ್ರೀ ಬಸವರಾಜ ಪಾಟೀಲ ನೇತೃತ್ವದಲ್ಲಿ
	ಹುಮನಾಬಾದದಲ್ಲಿ ಹಾವನೂರು ವರದಿಯ
	ವಿರುದ್ಧ ಪ್ರತಿಭಟನಾ ರ್‍ಯಾಲಿ. ಕಲಬುರ್ಗಿಯಲ್ಲಿ
	ವಾಸ್ತವ್ಯ.
೧೯೭೮ ಸೆಪ್ಟೆಂಬರ್ ೨೬	ಹುಬ್ಬಳ್ಳಿಯ ಮೂರುಸಾವಿರ ಮಠದಲ್ಲಿ ವಾಸ್ತವ್ಯ
	ಹುಬ್ಬಳ್ಳಿಯಲ್ಲಿ ಹಾವನೂರು ವರದಿ ಪ್ರತಿಭಟನಾ
	ರ್‍ಯಾಲಿ.
೧೯೭೮ ಸೆಪ್ಟೆಂಬರ್ ೨೮	ಬಿಜಾಪುರದಲ್ಲಿ ಪ್ರತಿಭಟನಾ ರ್‍ಯಾಲಿ ಶ್ರೀ ಭೀಮಣ
	ಖಂಡ್ರೆ ಬಂಧನ ಮತ್ತು ಬಿಡುಗಡೆ
೧೯೭೮ ಸೆಪ್ಟೆಂಬರ್ ೨೯	ಗದಗ ತೋಂಟದಾರ್ಯ ಮಠದಲ್ಲಿ ಹಾವನೂರು
	ವರದಿ ವಿರುದ್ಧ ಜನಸಭೆ. ಚಂಪಾ ಅವರೊಂದಿ
	ಸಂದರ್ಶನ.

೧೯೭೮ ಸೆಪ್ಟೆಂಬರ್ ೩೦	ಗದಗದಿಂದ ಹೊರಟು ರಾಣೇಬೆನ್ನೂರಿಗೆ ಭೇಟಿ. ಆನಂತರ ಬೆಂಗಳೂರಿಗೆ ಪ್ರಯಾಣ
೧೯೭೮ ಅಕ್ಟೋಬರ್	ಅಭಾವೀ ಮಹಾಸಭೆಯ ಅಧ್ಯಕ್ಷ ಶ್ರೀ ಜೆ.ಬಿ. ಮಲ್ಲಾರಾಧ್ಯ ಅವರೊಂದಿಗೆ ೧ರಿಂದ ೩ ಚರ್ಚೆ. ಮಹಾಸಭೆಯಿಂದ ಸರಕಾರಕ್ಕೆಮನವಿ
೧೯೭೮ ಅಕ್ಟೋಬರ್ ೪	ಬೆಳಗಾಂವದಲ್ಲಿ ಹಾವನೂರು ವರದಿಗೆ ಪ್ರತಿಭಟನಾ ರ್‍ಯಾಲಿ.
೧೯೭೮ ಅಕ್ಟೋಬರ್ ೭	ಗುಲಬರ್ಗಾ ವೀರಶೈವ ಹಾಸ್ಟೇಲ್‌ದಲ್ಲಿ ಹಾವನೂರು ವರದಿಯ ಬಗ್ಗೆ ಪತ್ರಿಕಾಗೋಷ್ಠಿ
೧೯೮೦ರಿಂದ	ರಾಷ್ಟ್ರೀಯ ಕಿಸಾನ ಸೆಲ್ ಸಂಘಟನೆಯಲ್ಲಿ ಕರ್ನಾಟಕ ಘಟಕದ
೧೯೮೪ರವರೆಗೆ	ಅಧ್ಯಕ್ಷರಾಗಿ ರೈತ ಸಂಘಟನೆ.
೧೯೮೦ ಫೆಬ್ರವರಿ ೨೧	ಭಾಲ್ಕಿಯಲ್ಲಿ ರಾಜ್ಯ ಮಟ್ಟದ ಪ್ರಥಮ ರೈತ ಸಮ್ಮೇಳನ. ಶ್ರೀ ಆರ್. ಗುಂಡೂರಾವ, ಎಫ್.ಎಂ. ಖಾನ್, ಆರ್.ವಾಯ್. ಘೋರ್ಪಡೆ ಅತಿಥಿಗಳಸ್ಥಾನದಲ್ಲಿ.
೧೯೮೦	ಎ.ಐ.ಸಿ.ಸಿ. ಪ್ರಧಾನಕಾರ್ಯದರ್ಶಿಯಾಗಿ
ಆಯ್ಕೆ. ೧೯೮೦-೮೧	ಭಾಲ್ಕಿಯ ಅಕ್ಕಮಹಾದೇವಿ ಮಹಿಳಾ ಪದವಿ ಪೂರ್ವ ಕಾಲೇಜು ಪ್ರಾರಂಭ
೧೯೮೦ ಎಪ್ರಿಲ್ ೫	ಮುಖ್ಯಮಂತ್ರಿ ಶ್ರೀ ಆರ್. ಗುಂಡೂರಾವ ಅವರಿಂದ ಯಾನಾಗುಂದಿ ಬೆಟ್ಟದಲ್ಲಿ ಪ್ರವಚನ ಕಾರ್ಯಕ್ರಮದ ಉದ್ಘಾಟನೆ
೧೯೮೧ ಫೆಬ್ರವರಿ ೧೬	ಕರ್ನಾಟಕದ ೧೬ ಸಾವಿರ ರೈತರೊಂದಿಗೆ ದೆಹಲಿಯ ರಾಷ್ಟ್ರಮಟ್ಟದ ಕಿಸಾನ ರ್‍ಯಾಲಿಯಲ್ಲಿ ಸಹಭಾಗಿ

೧೯೮೧	ಸಿ. ವೀರಣ್ಣ ಅವರ '೧೨ನೆಯ ಶತಮಾನದ ಕಾಯಕ ಜೀವಿಗಳ ಚಳುವಳಿ' ಕೃತಿಗೆ ಪಟ್ಟದ್ದೇವರ ನೇತೃತ್ವದಲ್ಲಿ ಭಾಲ್ಕಿ ಬೀದಿಗಳಲ್ಲಿ ಪ್ರತಿಭಟನೆ ಮತ್ತು ಧಿಕ್ಕಾರ
೧೯೮೧ ಸೆಪ್ಟೆಂಬರ್ ೮	ವಿದೇಶ ಪ್ರವಾಸದಿಂದ ಹಿಂದಿರುಗಿರುವುದರಿಂದ ಬಿ.ಎಸ್.ಎಸ್.ಕೆ. ಹಳ್ಳಿಖೇಡದಲ್ಲಿ ಸನ್ಮಾನ
೧೯೮೧ ಸೆಪ್ಟೆಂಬರ್ ೧೦	ಭಾಲ್ಕಿಯ ಚೆನ್ನಬಸವೇಶ್ವರ ಕಾಲೇಜಿನಲ್ಲಿ ಸನ್ಮಾನ
೧೯೮೧ ಅಕ್ಟೋಬರ್ ೨೮	ಬಸವಕಲ್ಯಾಣದ ನೂತನ ಅನುಭವ ಮಂಟಪ ಲೋಕಾರ್ಪಣೆ
೧೯೮೨ ಸೆಪ್ಟೆಂಬರ್ ೭	ಮುಖ್ಯಮಂತ್ರಿ ಆರ್. ಗುಂಡೂರಾವ ಅವರಿಂದ ಇಂಜನೀಯರಿಂಗ್ ಕಾಲೇಜಿನ ಉದ್ಘಾಟನೆ
೧೯೮೨ ನವೆಂಬರ್ ೮	ಭಾಲ್ಕಿಯಲ್ಲಿ ರಾಜ್ಯಮಟ್ಟದ ಎರಡನೆಯ ರೈತ ಸಮ್ಮೇಳನ ಮುಖ್ಯ ಅತಿಥಿಗಳಾಗಿ ಎ.ಐ.ಸಿ.ಸಿ. ಅಧ್ಯಕ್ಷ ಶ್ರೀ ರಾಜೀವ ಗಾಂಧಿ ಮತ್ತು ಮುಖ್ಯಮಂತ್ರಿ ಆರ್. ಗುಂಡೂರಾವ
೧೯೮೩	ಭಾಲ್ಕಿ ವಿಧಾನಸಭಾ ಕ್ಷೇತ್ರದಿಂದ ಪುನರಾಯ್ಕೆ
೧೯೮೩-೮೫	ಕೆ.ಪಿ.ಸಿ.ಸಿ. ಉಪಾಧ್ಯಕ್ಷರು (ಶ್ರೀ ಕೆ.ಎಚ್. ಪಾಟೀಲರ ಅಧ್ಯಕ್ಷಾವಧಿ)
೧೯೮೪-೮೫	ಭಾಲ್ಕಿಯಲ್ಲಿ ಔದ್ಯೋಗಿಕ ತರಬೇತಿ ಕೇಂದ್ರ ಪ್ರಾರಂಭ
೧೯೮೪-೮೫	ಕಮಲನಗರದಲ್ಲಿ ಶ್ರೀ ಸಿದ್ಧರಾಮೇಶ್ವರ ಪದವಿ ಕಾಲೇಜು ಪ್ರಾರಂಭ
೧೯೮೫ ಜೂನ್ ೧/೨	ಪೂಜ್ಯ ಬಸವಲಿಂಗ ಪಟ್ಟದ್ದೇವರಿಗೆ ಪಟ್ಟಾಭಿಷೇಕ
೧೯೮೫-೮೬	ಬೀದರಿನಲ್ಲಿ ಅಕ್ಕಮಹಾದೇವಿ ಕನ್ಯಾ ಪ್ರೌಢ ಶಾಲೆ ಪ್ರಾರಂಭ

೧೯೮೫	ಜನತಾ ಪಕ್ಷದ ಅಲೆಯಲ್ಲಿ ಭಾಲ್ಕಿ ವಿಧಾನಸಭಾ ಕ್ಷೇತ್ರದ ಚುನಾವಣೆಯಲ್ಲಿ ಒಂದು ಸಾವಿರ ಮತಗಳ ಅಂತರದಿಂದ ಸೋಲು
೧೯೮೭-೮೮	ಭಾಲ್ಕಿಯಲ್ಲಿ ಹರಳಯ್ಯ ಪೊಲಿಟೆಕ್ನಿಕ್ ಕಾಲೇಜು ಪ್ರಾರಂಭ
೧೯೮೭ ಅಕ್ಟೋಬರ್ ೧೭	ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆ ಅವರಿಂದ ಇಂಜನೀಯರಿಂಗ್ ಕಾಲೇಜಿನ ಕಾರ್ಯಾಗಾರಗಳ ಉದ್ಘಾಟನೆ.
೧೯೮೮	ಬೀದರ ಜಿಲ್ಲಾ ಸ್ಥಳೀಯ ಸಂಘ ಸಂಸ್ಥೆಗಳಿಂದ ಕರ್ನಾಟಕ ವಿಧಾನ ಪರಿಷತ್ತಿಗೆ ಆಯ್ಕೆ
೧೯೮೯ ಸೆಪ್ಟೆಂಬರ್ ೬	ಕರ್ನಾಟಕದ ರಾಜ್ಯಪಾಲರಾದ ಘನಮಹಿಮ ಶ್ರೀ ಪಿ. ವೆಂಕಟ ಸುಬ್ಬಯ್ಯ ಅವರಿಂದ ಇಂಜನೀಯರಿಂಗ್ ಕಾಲೇಜಿನ ಆಡಳಿತ ಕಟ್ಟಡದ ಶಂಕುಸ್ಥಾಪನೆ
೧೯೯೦ ಅಕ್ಟೋಬರ್ ೭	ಗಾಂಧಿ ಜಯಂತಿಯ ಪುಣ್ಯತಿಥಿಯಂದು ಭಾಲ್ಕಿಯ ಕಲ್ಯಾಣ ಮಂಟಪದಲ್ಲಿ ಬೀದರ ಜಿಲ್ಲಾ ರೈತರ ಸಭೆ ಮತ್ತು ಮಹಾತ್ಮಾ ಗಾಂಧಿ ಸಕ್ಕರೆ ಕಾರಖಾನೆ ಸ್ಥಾಪಿಸಲು ಚೀಫ್ ಪ್ರಮೋಟರ್ ಆಗಿ ಶ್ರೀ ಭೀಮಣ್ಣ ಖಂಡ್ರೆ ಆಯ್ಕೆ
೧೯೯೨ ನವೆಂಬರ್ ೧೯ರಿಂದ ೧೯೯೪ರ ಡಿಸೆಂಬರ್ ೧೧	ಶ್ರೀ ಎಂ. ವೀರಪ್ಪ ಮೊಯಿಲಿ ಅವರ ಮಂತ್ರಿ ಮಂಡಳದಲ್ಲಿ ಶ್ರೀ ಭೀಮಣ್ಣ ಖಂಡ್ರೆ ಸಾರಿಗೆ ಸಚಿವರಾಗಿ ಮತ್ತು ಮೇಲ್ಮನೆಯ ನಾಯಕರಾಗಿ ಸೇವೆ
೧೯೯೨-೯೩	ಖಾಸಗಿ ರಸ್ತೆ ಸಾರಿಗೆ ಬಸ್ಸುಗಳ ಓಡಾಟಕ್ಕೆ ಶಾಶ್ವತವಾಗಿ ನಿಲುಗಡೆ. ಖಾಸಗಿ ವಲಯದ

	ಬಸ್ಸುಗಳ ಸಿಬ್ಬಂದಿಗೆ ಕರಾರಸಾ ಸಂಸ್ಥೆಯಲ್ಲಿ ತತ್ಸಮಾನ ಹುದ್ದೆಯಲ್ಲಿ ನೇರ ನೇಮಕಾತಿ
೧೯೯೩ ಎಪ್ರಿಲ್ ೧೪	ಅಂಬೇಡ್ಕರ ಜಯಂತಿಯ ಶುಭ ದಿನದಂದು ಭಾಲ್ಕಿಯಲ್ಲಿ ಆರ್.ಟಿ.ಓ. ಕಚೇರಿಯ ಉದ್ಘಾಟನೆ
೧೯೯೪ ಫೆಬ್ರವರಿ ೨೮	ಭಾಲ್ಕಿಯಲ್ಲಿ ಬಸ್ ಡಿಪೋ ಉದ್ಘಾಟನೆ
೧೯೯೪ ಎಪ್ರಿಲ್ ೧೨	ಭಾಲ್ಕಿಯಲ್ಲಿ ಅಗ್ನಿಶಾಮಕ ಠಾಣೆಯ ಉದ್ಘಾಟನೆ
೧೯೯೫-೯೬	ಚೆನ್ನಬಸವ ಪ್ರಾಥಮಿಕ ಶಾಲೆ, ಕಮಲನಗರ ಪ್ರಾರಂಭ
೧೯೯೫ ಡಿಸೆಂಬರ್ ೨ರಿಂದ೮	ಮುಚಳಂಬದಲ್ಲಿ ಸದ್ಗುರು ನಾಗಭೂಷಣ ಶಿವಯೋಗಿಗಳ ಮಂದಿರ, ಪ್ರವೇಶ ದ್ವಾರಗಳ ಉದ್ಘಾಟನೆ ಮತ್ತು ಅವರ ರಾಷ್ಟ್ರಮಟ್ಟದ ಏಕಾದಶಿ ಪುಣ್ಯಾರಾಧನೆ
೧೯೯೬ ನವೆಂಬರ್ ೬	ಭಾರತ ರಾಷ್ಟ್ರಪತಿ ಮಹಾಮಹಿಮ ಡಾ॥ ಶಂಕರದಯಾಳ ಶರ್ಮಾ ಅವರಿಂದ ಪೂಜ್ಯ ಶ್ರೀ ಚೆನ್ನಬಸವ ಪಟ್ಟದ್ದೇವರಿಗೆ ಶತಮಾನೋತ್ಸವ ಸನ್ಮಾನ ಮತ್ತು ಇಂಜನೀಯರಿಂಗ್ ಕಾಲೇಜಿನ ಆಡಳಿತ ಕಟ್ಟಡದ ಉದ್ಘಾಟನೆ
೧೯೯೭ ಮಾರ್ಚ್ ೨೬	'ಧರ್ಮಕಾರಣ' ಗ್ರಂಥ ಮುಟ್ಟುಗೋಲು ಹಾಕಿಕೊಳ್ಳಲು ಆಗ್ರಹಿಸಿ ವಿಧಾನ ಪರಿಷತ್ತಿನಲ್ಲಿ ಆತ್ಮದಹನಕ್ಕೆ ಯತ್ನ
೧೯೯೮-೯೯	ಕಮಲನಗರದಲ್ಲಿ ಕೈಗಾರಿಕೋದ್ಯಮ ತರಬೇತಿ ಸಂಸ್ಥೆ ಪ್ರಾರಂಭ
೧೯೯೮ ಮಾರ್ಚ್ ೭	ಬೆಂಕಿಮಳೆ ಪ್ರಕೋಪದಿಂದ ಬೆಳೆ ನಾಶವಾದ ರೈತರಿಗೆ ಪರಿಹಾರಧನ ನೀಡುವಂತೆ ಬೀದರ ಜಿಲ್ಲಾಧಿಕಾರಿಗಳ ಮುಖಾಂತರ ಕರ್ನಾಟಕ ಸರಕಾರಕ್ಕೆ ಮನವಿ ಪತ್ರ

೧೯೯೮ ಎಪ್ರಿಲ್ ೯	ಕರ್ನಾಟಕ ಸರಕಾರ ರಚಿಸಿರುವ ಜಂಟಿ ಸದನ ಸಮಿತಿಯ ವತಿಯಿಂದ ಬೀದರ ಮತ್ತು ಭಾಲ್ಕಿಗಳಲ್ಲಿ ರೈತರ ಬೆಳೆಗಳ ಸಮೀಕ್ಷೆ
೧೯೯೮ ಎಪ್ರಿಲ್ ೧೬	ಧರ್ಮಕಾರಣ ಕೃತಿಗೆ ಬಹಿಷ್ಕಾರ ಹಾಕಿರುವ ಕರ್ನಾಟಕ ಸರ್ಕಾರದ ಕ್ರಮವನ್ನು ಎತ್ತಿಹಿಡಿದ ಹೈಕೋರ್ಟಿನ ತೀರ್ಪು
೧೯೯೮ ಜೂನ್ ೨೬	ಎಐಸಿಸಿ ಅಧ್ಯಕ್ಷೆ ಶ್ರೀಮತಿ ಸೋನಿಯಾ ಗಾಂಧಿ ಭಾಲ್ಕಿಗೆ ಆಗಮಿಸಿ ಆತ್ಮಹತ್ಯೆಗೈದ ರೈತರ ಕುಟುಂಬಗಳಿಗೆ ಸಾಂತ್ವನ ಮತ್ತು ತಲಾ ಹತ್ತು ಸಾವಿರ ರೂಪಾಯಿ ಚೆಕ್ಕು ವಿತರಣೆ
೧೯೯೯ ಎಪ್ರಿಲ್ ೨೨	ಪೂಜ್ಯ ಶ್ರೀ ಚೆನ್ನಬಸವ ಪಟ್ಟದ್ದೇವರ ಲಿಂಗೈಕ್ಯ
೧೯೯೯ ಜೂನ್ ೬	ಅಖಿಲ ಭಾರತ ವೀರಶೈವ ಮಹಾಸಭೆಗೆ ಶ್ರೀ ಭೀಮಣ್ಣ ಖಂಡ್ರೆ ಅವಿರೋಧ ಆಯ್ಕೆ ಮತ್ತು ಅಭಾವೀ ಮಹಾಸಭೆಯ ಅಧಿಕಾರ ಸ್ವೀಕಾರ
೧೯೯೭ ಜುಲೈ ೪	ಅಭಾವೀ ಮಹಾಸಭೆಯ ಪ್ರಥಮ ಕಾರ್ಯಕಾರಿ ಮಂಡಳಿಯ ಸಭೆ. ಸದಸ್ಯತ್ವ ವಿಸ್ತರಣಾ ಅಭಿಯಾನಕ್ಕೆ ಚಾಲನೆ.
೧೯೯೯ ಜುಲೈ ೮	ಅಖಿಲ ಭಾರತ ವೀರಶೈವ ಮಹಾಸಭೆಯ ಆಡಳಿತ ಕಚೇರಿ ಜಯದೇವ ಹಾಸ್ಟೇಲ್‌ದಿಂದ ಮಾಧವನಗರದ ಬಸವ ಸದನಕ್ಕೆ ಸ್ಥಳಾಂತರ
೨೦೦೦ ನವೆಂಬರ್ ೫ರಿಂದ	ಉಳವಿಯಿಂದ ಬಸವಕಲ್ಯಾಣಕ್ಕೆ ಜನಗಣತಿ ಜಾಗೃತಿ ಅಭಿಯಾನ ಯಾತ್ರೆ.
ಡಿಸೆಂಬರ್ ೧೭ರವರೆಗೆ	ಬಸವಕಲ್ಯಾಣದಲ್ಲಿ ಮುಕ್ತಾಯ ಸಮಾರಂಭ
೨೦೦೧ ಎಪ್ರಿಲ್ ೧೨	ಶ್ರೀ ಭೀಮಣ್ಣ ಖಂಡ್ರೆ ಆಗ್ರಹದ ಮೇರೆಗೆ ಮಹಾರಾಷ್ಟ್ರ ಸರಕಾರದಿಂದ ಬಸವ ಜಯಂತಿಗೆ ಸರಕಾರಿ ರಜೆಯ ಘೋಷಣೆ

೨೦೦೨ ಜನೆವರಿ ೨೩	ವೀರಶೈವ ಲಿಂಗಾಯತ ಶಾಸಕರ ಪ್ರಥಮ ಧರ್ಮಸಭೆ
೨೦೦೨ ಮೇ ೭	ಅಖಿಲ ಭಾರತ ವೀರಶೈವ ಮಹಾಸಭೆಯ ಆಗ್ರಹದ ಮೇರೆಗೆ ಕರ್ನಾಟಕ ಸರ್ಕಾರದಿಂದ ಬಸವ ಜಯಂತಿಗೆ ಸರ್ಕಾರಿ ರಜೆ ಘೋಷಣೆ
೨೦೦೨ ಜುಲೈ ೨೫	ವೀರಶೈವ ಲಿಂಗಾಯತ ಶಾಸಕರ ಎರಡನೆಯ ಧರ್ಮಸಭೆ
೨೦೦೩ ನವೆಂಬರ್ ೨೫	ಬೆಂಗಳೂರಿನ ವಿಜಯನಗರ ಬಡಾವಣೆಯಲ್ಲಿ ೩೦ ಜನ ಗುರುವಿರಕ್ತರ ಸಮಾವೇಶ. ಗೋಹತ್ಯಾ ನಿಷೇಧಕ್ಕೆ ಆಗ್ರಹ
೨೦೦೩ ಮಾರ್ಚ್ ೨೭	ವೀರಶೈವ ಲಿಂಗಾಯತ ಶಾಸಕರ ಮೂರನೆಯ ಧರ್ಮಸಭೆ
೨೦೦೩ ಎಪ್ರಿಲ್ ೨೮	ಪಾರ್ಲಿಮೆಂಟ್ ಆವರಣದ ಬಸವೇಶ್ವರ ಪುತ್ಥಳಿ ಅನಾವರಣದಲ್ಲಿ ಪ್ರಾತಿನಿಧ್ಯ
೨೦೦೩ ಜೂನ್ ೧	ಕೂಡಲಸಂಗಮದಲ್ಲಿ ೭೦೦ ಗುರುವಿರಕ್ತರ ಪ್ರಥಮ ರಾಷ್ಟ್ರೀಯ ಸಮಾವೇಶ
೨೦೦೩ ಅಗಸ್ಟ್ ೫	ವೀರಶೈವ ಲಿಂಗಾಯತ ಶಾಸಕರ ನಾಲ್ಕನೆಯ ಧರ್ಮಸಭೆ
೨೦೦೩ ಸೆಪ್ಟೆಂಬರ್ ೪	ವೀರಶೈವ ಮಹಾಸಭೆ ಆಡಳಿತ ಕಟ್ಟಡಕ್ಕಾಗಿ ಬೆಂಗಳೂರಿನ ಸದಾಶಿವ ನಗರದಲ್ಲಿ ಭೂನಿವೇಶನ ಖರೀದಿ
೨೦೦೩ ಅಕ್ಟೋಬರ್ ೧೯	ದೆಹಲಿಯಲ್ಲಿ ಜಾಟ್ ಸಮುದಾಯಕ್ಕೆ ಲಿಂಗದೀಕ್ಷೆ ಮತ್ತು ಬೆಳ್ಳಿಯ ಕರಡಿಗೆ ಕಾಣಿಕೆ
೨೦೦೩ ಅಕ್ಟೋಬರ್ ೨೩	ವಿಜಯ ದಶಮಿಯ ದಿನ ವೀರಶೈವ ಲಿಂಗಾಯತ ಭವನ ನಿರ್ಮಾಣಕ್ಕಾಗಿ ಅಡಿಗಲ್ಲು ಸಮಾರಂಭ

೨೦೦೪ ಅಗಸ್ಟ್ ೫	ವೀರಶೈವ ಲಿಂಗಾಯತ ಶಾಸಕರ ಐದನೆಯ ಧರ್ಮಸಭೆ
೨೦೦೪ ನವೆಂಬರ್	ದೀಪಾವಳಿ ಪಾಡ್ಯದಂದು ಬಸವಕಲ್ಯಾಣ ಪ್ರಾಧಿಕಾರ ರಚನೆಗೆ ಖಂಡ್ರೆ ಆಗ್ರಹ ಮತ್ತು ಮುಖ್ಯಮಂತ್ರಿ ಎನ್. ಧರ್ಮಸಿಂಗ್ ಅವರಿಂದ ಸ್ಥಳದಲ್ಲಿಯೇ ಘೋಷಣೆ
೨೦೦೫ ಜುಲೈ ೩	ವೀರಶೈವ ಲಿಂಗಾಯತ ಶಾಸಕರ ಆರನೆಯ ಧರ್ಮಸಭೆ
೨೦೦೬ ಜೂನ್ ೨೩	ಬೆಂಗಳೂರು ಅರಮನೆ ಮೈದಾನದಲ್ಲಿ ೫ ಮತ್ತು ೧೦೦ ರೂಪಾಯಿ ಮುಖಬೆಲೆಯ ಬಸವನಾಣ್ಯ ಬಿಡುಗಡೆ
೨೦೦೬ ಜುಲೈ ೨೫	ಮಹಾಸಭೆಯಿಂದ ವೀರಶೈವ ಲಿಂಗಾಯತ ಮೀಸಲಾತಿಗಾಗಿ ಮುಖ್ಯಮಂತ್ರಿಗಳಿಗೆ ಮನವಿ
೨೦೦೬ ನವೆಂಬರ್ ೧	ಕರ್ನಾಟಕ ಸರ್ಕಾರದ ವತಿಯಿಂದ ಶ್ರೀ ಭೀಮಣ್ಣ ಖಂಡ್ರೆಯವರಿಗೆ ಕರ್ನಾಟಕ ಏಕೀಕರಣ ಪ್ರಶಸ್ತಿ ಪ್ರದಾನ
೨೦೦೬ ಡಿಸೆಂಬರ್ ೧೫	ಬೀದರಿನ ಅಕ್ಕಮಹಾದೇವಿ ಮಹಾವಿದ್ಯಾಲಯ ದಲ್ಲಿ ಜಿಲ್ಲಾ ನಾಗರಿಕ ವೇದಿಕೆ ಮತ್ತು ಶಾಂತಿ ವರ್ಧಕ ಶಿಕ್ಷಣ ಸಂಸ್ಥೆಗಳಿಂದ ಅಭಿನಂದನ ಸಮಾರಂಭ
೨೦೦೭ ಮೇ ೨	ಧರ್ಮಕಾರಣ ಬಹಿಷ್ಕಾರ ಸಿಂಧುತ್ವ ಸುಪ್ರೀಂ ಕೋರ್ಟ್ ತೀರ್ಪು.
೨೦೦೭ ಜುಲೈ ೨೩	ಡಾ॥ ಬಂಜಗೆರೆ ಜಯಪ್ರಕಾಶ ಅವರ 'ಆನುದೇವಾ ಹೊರಗಣವನು' ಕೃತಿಗೆ ಕರ್ನಾಟಕ ಸರ್ಕಾರ ದಿಂದ ಮುಟ್ಟುಗೋಲು ಆದೇಶ

೨೦೦೭ ಸೆಪ್ಟೆಂಬರ್ ೧೧	ಸಂಸತ್ ಭವನದಲ್ಲಿ ಮಹಾಮಹಿಮ ರಾಷ್ಟ್ರಪತಿ ಶ್ರೀಮತಿ ಪ್ರತಿಭಾ ಪಾಟೀಲರಿಂದ ಕಿತ್ತೂರು ರಾಣಿ ಚೆನ್ನಮ್ಮ ಪ್ರತಿಮೆ ಅನಾವರಣ ದಲ್ಲಿ ಪ್ರಾತಿನಿಧ್ಯ
೨೦೦೮ ಅಗಸ್ಟ್ ೧೮	ಅಕ್ಕನ ಅಮರವಾಣಿ ಮತ್ತು ಮತ್ತು ಧ್ವನಿ ಸುರುಳಿಗಳ ವಚನಾಂಕಿತ ಬದಲಾವಣೆಗೆ ವೀರಶೈವ ಲಿಂಗಾಯತ ಸಂಘ ಸಂಸ್ಥೆಗಳ ಬಹಿಷ್ಕಾರದ ಮುಂದಾಳತ್ವ
೨೦೦೯ ಫೆಬ್ರವರಿ ೦೮	ಬೆಂಗಳೂರಿನಲ್ಲಿ ವೀರಶೈವ ಲಿಂಗಾಯತ ಭವನದ ಉದ್ಘಾಟನೆ
೨೦೦೯ ಅಕ್ಟೋಬರ್ ೨೬	ಹೈದರಾಬಾದ ಕರ್ನಾಟಕವನ್ನು ಸಂವಿಧಾನದ ಪರಿಚ್ಛೇದ ೩೭೧ಕ್ಕೆ ಒಳಪಡಿಸಲು ಮಾನ್ಯ ಪ್ರಧಾನ ಮಂತ್ರಿಗಳಿಗೆ ಖಂಡ್ರೆ ಮನವಿ ಪತ್ರ
೨೦೦೫ ಡಿಸೆಂಬರ್ ೨೫	ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರಾಗಿ ಪುನರಾಯ್ಕೆ
೨೦೧೦ ಎಪ್ರಿಲ್ ೯ರಿಂದ ೧೩	ಅಭಾವಿಯ ಮತ್ತು ಶಿವಯೋಗ ಮಂದಿರಗಳ ಜಂಟಿ ಶತಮಾನೋತ್ಸವ ಶಿವಯೋಗ ಮಂದಿರ
೨೦೧೦ ಅಕ್ಟೋಬರ್ ೩೦	ಬೀದರ ಜಿಲ್ಲೆಯಿಂದ ಎಐಸಿಸಿ ಸದಸ್ಯರಾಗಿ ಆಯ್ಕೆ (ಕೆಪಿಸಿಸಿ ಅಧ್ಯಕ್ಷ ಡಾ॥ ಜಿ. ಪರಮೇಶ್ವರ ಅವರಿಂದ ಪತ್ರ)
೨೦೧೧ ಜುಲೈ ೩	ರಾಮನಗರ ತಾಲೂಕು ಅರ್ಚಕರ ಹಳ್ಳಿಯ ಕೃಷಿಭೂಮಿ ರಕ್ಷಿಸಲು ಮುಖ್ಯಮಂತ್ರಿಗಳಿಗೆ ಮನವಿ
೨೦೧೧ ಮಾರ್ಚ್ ೫–೬	ಬಸವಕಲ್ಯಾಣದಲ್ಲಿ ಹುತಾತ್ಮರ ದಿನಾಚರಣೆ
೨೦೧೧ ಎಪ್ರಿಲ್	ಶ್ರೀಕ್ಷೇತ್ರ ಸುತ್ತೂರಿನಲ್ಲಿ ಅಭಾವಿ ಮಹಾಸಭೆಯ

೭ರಿಂದ ೧೯	೨೨ನೆಯ ಮಹಾ ಅಧೀವೇಶನ
೨೦೧೧ ಡಿಸೆಂಬರ್ ೨೫	ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷತೆಯ ಅವಧಿ ಮುಕ್ತಾಯ
೨೦೧೨ ಪೆಬ್ರವರಿ ೨೭	ಗುಲಬರ್ಗಾ ವಿಶ್ವವಿದ್ಯಾಲಯದಿಂದ ಶ್ರೀ ಭೀಮಣ್ಣ ಖಂಡ್ರೆಯವರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿ ಪ್ರದಾನ
೨೦೧೨-೩-೦೬	ಶಾಂತಿವರ್ಧಕ ಶಿಕ್ಷಣ ಸಂಸ್ಥೆ ಮತ್ತು ಬೀದರ ನಾಗರಿಕ ಸಮಿತಿಯಿಂದ ಭಾಲ್ಕಿಯಲ್ಲಿ ಖಂಡ್ರೆಯವರಿಗೆ ಅಭಿನಂದನ ಸಮಾರಂಭ
೨೦೧೨-೩-೧೭	ಬೀದರ ಜಿಲ್ಲಾ ಶಾಲಾ ಶಿಕ್ಷಕರ ಸಂಘದಿಂದ ಶ್ರೀ ಭೀಮಣ್ಣ ಖಂಡ್ರೆಯವರಿಗೆ ಸನ್ಮಾನ
೨೦೧೨-೪-೨೨	ಪೂಜ್ಯ ಬಸವಲಿಂಗ ಪಟ್ಟದ್ದೇವರಿಂದ ಚೆನ್ನ ಬಸವಾಶ್ರಮದಲ್ಲಿ ಶ್ರೀ ಭೀಮಣ್ಣ ಖಂಡ್ರೆಯವರಿಗೆ ಅಭಿನಂದನೆ ಹಾಗೂ ಆಶೀರ್ವಾದ
೨೦೧೨-೧೨-೨೨	ಭಾಲ್ಕಿಯ ಇಂಜಿನೀಯರಿಂಗ್ ಮಹಾ ವಿದ್ಯಾಲಯದಲ್ಲಿ ವೀರಶೈವ ಮಹಾಸಭೆಗೆ ಸಲ್ಲಿಸಿರುವ ಸೇವೆಗಾಗಿ ವಿವಿಧ ಸಂಘಟನೆಗಳಿಂದ ಸನ್ಮಾನ
೨೦೧೨-೧೨-೨೩	ಕಪಲಾಪುರ ಅಂಬಾ ಭವಾನಿ ಮಂದಿರದಲ್ಲಿ ಭೀಮಣ್ಣ ಖಂಡ್ರೆಯವರಿಗೆ ಹಚ್ಚೆ ಪರಿಹಾರದಿಂದ ತಲಾಭಾರ
೨೦೧೩-೦೧-೧೦	ಭೀಮಣ್ಣ ಖಂಡ್ರೆ ಉಗ್ರರಾಷ್ಟ್ರವಾದಿ ಪ್ರಬಂಧಕ್ಕಾಗಿ ಶ್ರೀಮತಿ ಲಲಿತಾ ಪಾಟೀಲ ಅವರಿಗೆ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪ್ರಶಸ್ತಿ ಘೋಷಣೆ

೨೦೧೩-೦೯-೦೬	ಶ್ರೀ ಶಾಮನೂರು ಶಿವಶಂಕರಪ್ಪ ನೇತೃತ್ವದಲ್ಲಿ ವೀರಶೈವ ಲಿಂಗಾಯತ ಪ್ರತ್ಯೇಕ ಧರ್ಮದ ಮಾನ್ಯತೆಗಾಗಿ ಯುಪಿಎ ಅಧ್ಯಕ್ಷೆ ಶ್ರೀಮತಿ ಸೋನಿಯಾ ಗಾಂಧಿ ಅವರ ಬಳಿ ದೆಹಲಿಗೆ ಅಭಾವಿ ಮಹಾಸಭೆಯ ನಿಯೋಗದಲ್ಲಿ ಸಹಭಾಗಿ
೨೦೧೩-೧೦-೦೩	ಶ್ರೀ ಭೀಮಣ್ಣ ಖಂಡ್ರೆಯವರಿಗೆ ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರದ ಅವಿಸ್ಮರಣೀಯ ಸೇವೆಗಾಗಿ 'ಶ್ರೀ ರಾಜೀವ ಗಾಂಧಿ ಎಕ್ಸಲೆನ್ಸ್ ಅವಾರ್ಡ'
೨೦೧೫-೦೪-೧೯	ಬೀದರ ಬಸವ ಜಯಂತಿ ಉತ್ಸವ ಸಮಿತಿಯಿಂದ ಬೀದರಿನ ರಂಗಮಂದಿರದಲ್ಲಿ ವೀರಶೈವ ಮಹಾಸಭೆಗೆ ಸಲ್ಲಿಸಿರುವ ಅವಿಸ್ಮರಣೀಯ ಸೇವೆಗಾಗಿಸನ್ಮಾನ
೨೦೧೭-೦೮-೪	ನರೇಗಲ್ಲ ಅನ್ನದಾನ ವಿಜಯ ವಿದ್ಯಾವರ್ಧಕ ಸಮಿತಿಯ ವತಿಯಿಂದ ವೀರಶೈವ ಸಮಾಜ ಸಲ್ಲಿಸಿರುವ ಸೇವೆಗಾಗಿ ಸನ್ಮಾನ ಪತ್ರ
೨೦೧೯-೦೧-೨೫	ನೇತಾಜಿ ಸುಭಾಷ ಚಂದ್ರ ಬೋಸ ಸಮಿತಿ, ಕಲಬುರಗಿಯಿಂದ ಹಿರಿಯ ಸ್ವಾತಂತ್ರ್ಯ ಸೇನಾನಿ, ಲೋಕನಾಯಕ, ಶ್ರೇಷ್ಠ ದೇಶಭಕ್ತ, ಮಾಜಿ ಸಚಿವರಾದ ಸನ್ಮಾನ್ಯ ಶ್ರೀ ಭೀಮಣ್ಣ ಖಂಡ್ರೆಯವರ ಜೀವಮಾನದ ಶ್ರೇಷ್ಠ ಸಾಧನೆ ಪರಿಗಣಿಸಿ 'ನೇತಾಜಿ ಸುಭಾಷ ಚಂದ್ರ ಬೋಸ ಪ್ರಶಸ್ತಿ' ನೀಡಿಕೆ
೨೦೧೯ ಡಿಸೆಂಬರ್ ೧೪	ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಇವರಿಂದ ಸುವರ್ಣ ಕರ್ನಾಟಕ ಏಕೀಕರಣ ಪ್ರಶಸ್ತಿ ಪ್ರದಾನ ***



ಕನ್ನಡ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಕಟ್ಟುವ, ಹಾಗೂ ಕನ್ನಡ, ಕನ್ನಡಿಗ, ಕರ್ನಾಟಕದ ಸಮಗ್ರ ಏಳಿಗೆಯ ಮಹದುದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿಕೊಂಡಿದೆ. ಅದರ ಆಶಯಕ್ಕೆ ತಕ್ಕಂತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕ್ರಿಯಾಶೀಲವಾಗಿದೆ. ಐತಿಹಾಸಿಕ, ಸಾಹಿತ್ಯಿಕ, ಸಾಂಸ್ಕೃತಿಕ ಶ್ರೀಮಂತಿಕೆ ಹೊಂದಿರುವ ಬೀದರ ಜಿಲ್ಲೆಯ ಪ್ರಬಲ ಇಚ್ಛಾಶಕ್ತಿ, ಇಚ್ಛಾಸಕ್ತಿಯ ಕೊರತೆಯಿಂದಾಗಿ ಈ ಭಾಗ ಹಿಂದುಳಿದ ಹಣೆಪಟ್ಟಿ ಹೊತ್ತಿರುವುದರಿಂದ ಕನ್ನಡ ಸಾಹಿತ್ಯ ಪರಿಷತ್ತು ಸ್ಥಳೀಯ ಕಲೆ, ಸಾಹಿತ್ಯ, ಸಂಸ್ಕೃತಿಯ ಸಂವರ್ಧನೆಗಾಗಿ ಅನೇಕ ಕಾರ್ಯಚಟುವಟಿಕೆಗಳನ್ನು ಆಯೋಜಿಸಿದೆ. ಜಾಗತೀಕರಣದ ಕರಿನೆರಳಿನಿಂದ ಸ್ಥಳೀಯ ಭಾಷೆ ಸಂಸ್ಕೃತಿ ನಲುಗುತ್ತಿರುವಾಗ ಅವನ್ನು ಉಳಿಸುವ ಹೋರಾಟದ ಹಲವು ದಾರಿಗಳು ಕಟ್ಟಿಕೊಳ್ಳಬೇಕಾಗಿದೆ. ಅದರಲ್ಲಿ ಗಡಿಭಾಗದಂಥ ಬೀದರ ನೆಲದಲ್ಲಿ ಇನ್ನೂ ಹೆಚ್ಚು ರಚನಾತ್ಮಕ ಕಾರ್ಯಗಳ ಮೂಲಕ ಪಾಶ್ಚಾತ್ಯ ಸಂಸ್ಕೃತಿ, ಪರಭಾಷೆಗಳಿಗೆ ಸವಾಲಾಗಿ ನಿಲ್ಲುವ ಅಗತ್ಯತೆ ಇದೆ. ಈ ಹಿನ್ನೆಲೆಯಲ್ಲಿ ಪರಿಷತ್ತು ಕಾರ್ಯನಿರತವಾಗಿದೆ.

ಮಾಹಿತಿ ತಂತ್ರಜ್ಞಾನ ಬೆಳೆದಂತೆ ಆಧುನಿಕತೆ ಹೆಚ್ಚಾಗಿ ಜೀವನ ಪ್ರೀತಿ ಕಡಿಮೆಯಾಗುತ್ತಿದೆ. ವಿದ್ಯುನ್ಮಾನ (ಎಲೆಕ್ಟ್ರಾನಿಕ್) ಗ್ಯಾಜೆಟ್ ಲೋಕದಲ್ಲೇ ಮುಳುಗುತ್ತಿರುವ ನಮಗೆ ಅಕ್ಷರ ಲೋಕದ ಪುಸ್ತಕ ಸಂಸ್ಕೃತಿಯ ಉಳಿವು ಅಷ್ಟೇ ಮುಖ್ಯವಾಗಿದೆ. ಆದ್ದರಿಂದ ಸ್ಥಳೀಯ ಲೇಖಕರು, ಕಲಾವಿದರನ್ನು, ಪ್ರತಿಭೆಗಳನ್ನು ಪ್ರೋತ್ಸಾಹಿಸುವುದರೊಂದಿಗೆ ಇಲ್ಲಿನ ಕಲೆ, ಸಾಹಿತ್ಯವನ್ನು ಸಾಂಸ್ಕೃತಿಕವಾಗಿ ದಾಖಲಿಸುವುದು, ಕನ್ನಡಿಗರಲ್ಲಿ ಓದುವ ಅಭಿರುಚಿಯನ್ನು ಮೂಡಿಸುವುದು. ಒಟ್ಟಾರೆ ಕನ್ನಡ ನಾಡು, ನುಡಿ, ನೆಲ, ಜಲ, ಜನ ಭಾಷೆ, ಸಾಹಿತ್ಯ ಈ ಎಲ್ಲವುಗಳ ಹಿತಚಿಂತನೆಯೊಂದೆ ನಮ್ಮ ಮೊದಲ ಮತ್ತು ಕೊನೆಯ ಆಶಯವಾಗಿದೆ. ಈ ಹಿನ್ನೆಲೆಯಲ್ಲಿ ಈಗಾಗಲೆ ಕೆಲ ಕೃತಿಗಳನ್ನು ಪ್ರಕಟಿಸಲಾಗಿದೆ.

ಬಹುಮುಖ್ಯವಾಗಿ ಬೀದರ ಒಂದು ಗಡಿಭಾಗವಾಗಿದ್ದು ಪರಕೀಯ ಆಳ್ವಿಕೆ, ಪರಭಾಷೆ ದಬ್ಬಾಳಿಕೆ ಮಧ್ಯದಲ್ಲಿಯೂ ಕನ್ನಡದ ಉಳಿವು, ಏಳಿಗೆಗೆಗಾಗಿ ತಮ್ಮನ್ನು ಗಂಧದ ಕೊರಡಂತೆ ಸವೆಸಿಕೊಂಡವರಿದ್ದಾರೆ. ಅಂಥವರ ಜೀವನ ಸಾಧನೆ ಕಾಲಗರ್ಭದಲ್ಲಿ ಮರೆಯಾಗದೆ ಒಂದು ಸಾಂಸ್ಕೃತಿಕ ದಾಖಲೆಯಾಗಬೇಕೆಂಬ ಸದಾಶಯದಿಂದ **ಕನ್ನಡ ಕಟ್ಟಿದವರು** ಮಾಲಿಕೆ ಆರಂಭಿಸಲಾಗಿದೆ. ಇದು ಚಾರಿತ್ರಿಕವಾಗಿ ಮಹತ್ವದ ಯೋಜನೆಯಾಗಿದ್ದು, ನಮ್ಮ ಮಧ್ಯದ ಸಂಶೋಧಕರು, ಸಾಹಿತಿಗಳಾದ **ಡಾ. ರಘುಶಂಖ ಭಾತಂಬ್ರಾ** ಅವರು ಬರೆದ **ಲೋಕನಾಯಕ : ಡಾ॥ ಭೀಮಣ್ಣ ಖಂಡ್ರೆ** ಜೀವನ ಸಾಧನೆ ಎಂಬ ಪುಸ್ತಕ ಪ್ರಕಟಿಸಲು ಹೆಮ್ಮೆ, ಸಂತೋಷವೆನಿಸುತ್ತದೆ. ಡಾ॥ ಖಂಡ್ರೆಯವರು ಬೀದರನಲ್ಲಿ ಸಜ್ಜನ ರಾಜಕಾರಣಿಗಳು. ಸಮಸಮಾಜ ರೂಪಿಸಬೇಕೆಂಬ ಸದಾಶಯಗಳೊಂದಿಗೆ ದೇಶಿಚಿಂತನೆಯ ಸಾಂಸ್ಕೃತಿಕ ರಾಯಭಾರಿಗಳಾದವರು. ಸಹೃದಯರು ಸಹಸ್ಪಂದಿಸಿ ಈ ಕೃತಿ ಓದುವ ಮೂಲಕ ಅಕ್ಷರ ಪ್ರೀತಿ ಮೆರೆದರೆ ಪರಿಷತ್ತಿನ ಶ್ರಮ ಸಾರ್ಥಕವೆಂದು ಭಾವಿಸಲಾಗಿದೆ.

ಸುರೇಶ ಚನಶೆಟ್ಟಿ
ಅಧ್ಯಕ್ಷರು
ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ



ಸಾಹಿತ್ಯವು ಯಾವಾಗಲೂ ಒಂದು ವಿಶಿಷ್ಟ ಅನುಭವ ಪರಂಪರೆಯನ್ನು ನಮ್ಮ ಮುಂದೆ ತಂದು ನಿಲ್ಲಿಸುತ್ತದೆ. ಒಂದು ಕೃತಿಯನ್ನು ಓದುತ್ತಿದ್ದಂತೆ ಅದರ ಅನುಭವಗಳು ನಮ್ಮೊಳಗೆ ಸೇರಿಕೊಳ್ಳುತ್ತ, ಅಲ್ಲಿನ ಅನುಭವ ಸಾರ್ವತ್ರಿಕರಣಗೊಳ್ಳುತ್ತ ಹೋಗುತ್ತದೆ. ಸಾಹಿತ್ಯಕೃತಿ ನಮ್ಮನ್ನು ತಟ್ಟಬೇಕು ಎಂದರೆ ಅಲ್ಲಿನ ಅನುಭವಗಳು ಗಾಢವಾಗಿರಬೇಕು, ಅಲ್ಲಿನ ಸೃಜನಶೀಲತೆಯ ಸೆಲೆಗಳು ನಮ್ಮನ್ನು ಸೆಳೆಯುವಂತೆ ಇರಬೇಕು. ಆ ಕೃತಿ ತನ್ನ ಸುತ್ತಲಿನ ಜೀವನವನ್ನು, ಪರಿಕರಗಳನ್ನು ಒಳಗೊಂಡಿದ್ದಾಗ ಇದು ಸಾಧ್ಯವಾಗುತ್ತದೆ. ತಲೆ ತಲಾಂತರಗಳಿಂದ ಕೆಲವರು ನಾಡು, ನುಡಿ, ಕಲೆ, ಸಾಹಿತ್ಯ, ಸಂಸ್ಕೃತಿ, ಜಲ, ಜನ ಸಮುದಾಯವನ್ನು ತಮ್ಮದೇ ರೀತಿಯಲ್ಲಿ ಶ್ರೀಮಂತಗೊಳಿಸಲು ಶ್ರಮಿಸಿರುತ್ತಾರೆ. ಅವರ ಶ್ರಮ ಮುಂದಿನ ತಲೆಮಾರಿಗೆ ತಿಳಿಯದೇ ಹೋಗಬಾರದು. ಜನ ಸಮುದಾಯದ ಶ್ರೇಯಸ್ಸಿಗೆ ಅವರುಕೊಟ್ಟ ·ಕೊಡುಗೆಯನ್ನು ಜನ ನೆನಪಿಸಿಕೊಳ್ಳುವಂತೆ ಆಗಬೇಕು, ಹಾಗೆ ನೆನಪಿಸಿಕೊಂಡರೆ ಅದು ಒಂದು ಸಮುದಾಯದಲ್ಲಿ ಇರುವ, ಇರಬೇಕಾದ ಕೃತಜ್ಞತೆಯ ಕುರುಹು. ಬೀದರ್ ಜಿಲ್ಲೆಯಲ್ಲಿ ಅಂಥ ಹಿರಿಯರ ಕೊಡುಗೆಯನ್ನು ದಾಖಲು ಮಾಡುವ ಕಾರ್ಯ ನಡೆದು ಅದು ಇದೀಗ ಕಾರ್ಯರೂಪಕ್ಕೆ ಬಂದಿರುವುದು ಶ್ಲಾಘನೀಯ ಕೆಲಸ. ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಘಟಕದ ಅಧ್ಯಕ್ಷರಾದ ಶ್ರೀ ಸುರೇಶ ಚನಶೆಟ್ಟಿಯವರಿಗೆ ಇಂಥ ವಿಚಾರವೊಂದು ಹೊಳೆದು ಅದನ್ನು ಅವರು ಸ್ವಯಂಸ್ಫೂರ್ತಿಯಿಂದ ಕೈಗೆತ್ತಿಕೊಂಡಿದ್ದಾರೆ. ಜಿಲ್ಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದ ಮಹನೀಯರನ್ನು ಗುರುತಿಸಿ ಅವರ ಜೀವಿತಾವಧಿಯಲ್ಲಿಯೇ ಅವರು ಪ್ರತಿಪಾದಿಸಿದ ಜೀವನಮೌಲ್ಯಗಳನ್ನು ಅಕ್ಷರರೂಪಕ್ಕೆ ಇಳಿಸಬೇಕು ಎಂದು ಅವರು ಒಂದು ಯೋಜನೆಯನ್ನೂ ರೂಪಿಸಿದರು. ಅದಕ್ಕೆ ಪೂರಕವಾಗಿ "ಸಾಂಸ್ಕೃತಿಕ ಚಿಂತಕರು" ಎಂಬ ಸರಣಿಯಲ್ಲಿ ೧೭ ಜನ ಸಾಧಕರನ್ನು ಕುರಿತು ಅಷ್ಟೇ ಸಂಖ್ಯೆಯ ಲೇಖಕಿಯರು ಕೃತಿ ರಚಿಸಿದ್ದಾರೆ. ಅದರ ಜೊತೆಗೆ ಜಿಲ್ಲೆಯಲ್ಲಿ "ಕನ್ನಡ ಕಟ್ಟಿದವರು" ಕುರಿತ ಸರಣಿಯಲ್ಲಿ ೧೭ ಜನ ಸಾಧಕರ ಬಗೆಗೆ ಅಷ್ಟೇ ಸಂಖ್ಯೆಯ ಬರಹಗಾರರು ಕೃತಿಗಳನ್ನು ರಚಿಸಿದ್ದಾರೆ. ಇದೆಲ್ಲ ಆಗಿರುವುದು ಜಿಲ್ಲೆಯ ೧೭ನೇ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಂಗವಾಗಿ ಎಂಬುದು ಇಲ್ಲಿ ಉಲ್ಲೇಖನಾರ್ಹ. ಅದರ ಭಾಗವಾಗಿ ಸಾಹಿತಿಗಳಾದ ಡಾ. ರಘುಶಂಖ ಭಾತಂಬ್ರಾ ಅವರು ಬರೆದ ಸಜ್ಜನ ರಾಜಕಾರಣಿ ಲೋಕನಾಯಕ : ಡಾ|| ಭೀಮಣ್ಣ ಖಂಡ್ರೆ ಜೀವನ ಸಾಧನೆ ಎಂಬ ಪುಸ್ತಕ ಪ್ರಕಟವಾಗುತ್ತಿರುವುದು ಅಭಿಮಾನದ ಸಂಗತಿ. ಇದು ಒಂದು ಅಪರೂಪದ ದಾಖಲೆಯ ಕಾರ್ಯ; ನಮ್ಮ ಸಮಾಜದ ಏಳಿಗೆಗೆ ದುಡಿದ ಮಹನೀಯರನ್ನು, ಮಹಿಳೆಯರನ್ನು ನೆನಪಿಸಿಕೊಳ್ಳುವ ಕಾರ್ಯ. ಆದರೆ, ಇದು ಕೇವಲ ಒಂದು ದಾಖಲೀಕರಣದ ಕೆಲಸ ಮಾತ್ರ ಅನಿಸದೇ ಆಸಕ್ತರು ಈ ಕೃತಿಗಳನ್ನು ಓದಿದರೆ ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಹಾಗೂ ಪದಾಧಿಕಾರಿಗಳ ಕಾರ್ಯ ಸಾರ್ಥಕ ಎನಿಸುತ್ತದೆ. ಇದಕ್ಕಾಗಿ ದುಡಿದ ಎಲ್ಲರಿಗೂ ನನ್ನ ಅಭಿನಂದನೆಗಳು.

ನಾಡೋಜ ಡಾ. ಮನು ಬಳಿಗಾರ್
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು